ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 16 ಗುರುವಾರ 2022

ಸಂಪುಟ: 43 | ಸಂಚಿಕೆ: 61 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ರಾಷ್ಟ್ರಪತಿ ಚುನಾವಣೆ
ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಆರಂಭ

ನವದೆಹಲಿ: ರಾಷ್ಟ್ರಪತಿ ಚುನಾವಣೆಗೆ ಇನ್ನು ಒಂದು ತಿಂಗಳಷ್ಟೇ ಬಾಕಿ ಇದ್ದು, ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಜೂನ್ 15ರಿಂದ ಆರಂಭಗೊಂಡಿದೆ.

ಚುನಾವಣಾ ಆಯೋಗ ಅಧಿಸೂಚನೆ ಹೊರಡಿಸಿದ್ದು, ಜು.18ಕ್ಕೆ ಚುನಾ ವಣೆ ನಡೆಯಲಿದೆ. ಈ ನಡುವೆ ವಿಪಕ್ಷ ಗಳು ರಾಷ್ಟ್ರಪತಿ ಅಭ್ಯರ್ಥಿಯ ಆಯ್ಕೆಯ ವಿಷಯವಾಗಿ ಜೂ.15ರಂದು ದೆಹಲಿ ಯಲ್ಲಿ ಸಭೆ ನಡೆಸಿವೆ. ಜೂ.29ರಂದು ನಾಮಪತ್ರ ಸಲ್ಲಿಸುವುದಕ್ಕೆ ಕೊನೆಯ ದಿನವಾಗಿರಲಿದ್ದು, ಜೂ.30ರಂದು ನಾಮ ಪತ್ರ ಪರಿಶೀಲನೆ ▶ 6ನೇ ಪುಟಕ್ಕೆ

ಭಾರತದ ಮೊದಲ ಖಾಸಗಿ ರೈಲು ಕಾರ್ಯಾರಂಭ



ಕೊಯಮತ್ತೂರು: ಭಾರತದ ಮೊದಲ ಖಾಸಗಿ ರೈಲು ಕಾರ್ಯಾರಂಭ ಮಾಡಿದ್ದು, ಈ ರೈಲು ಕೊಯಮತ್ತೂರು ಮತ್ತು ಶಿರಡಿ ನಡುವೆ ಸಂಚರಿಸುತ್ತದೆ. ಭಾರತೀಯ ರೈಲ್ವೆ ಸೇವೆ ಆರಂಭವಾದ ಬಳಿಕ ಮೊದಲ ಬಾರಿಗೆ ಖಾಸಗಿ ಸಂಸ್ಥೆಗಳು ನಿರ್ವಹಿಸುವ ಪ್ರಯಾಣಿಕರ ರೈಲು ಸೇವೆ ಆರಂಭವಾಗಿದ್ದು, ಕೇಂದ್ರ ಸರ್ಕಾರದ 'ಭಾರತ್ ಗೌರವ್' ಯೋಜನೆಯಡಿ ಇದು ಚಾಲನೆಗೊಂಡಿರುವುದು ಗಮನಾರ್ಹ. ಈ ರೈಲು ಕೊಯಮತ್ತೂರು ಮತ್ತು ಶಿರಡಿ ನಡುವೆ ಸಂಚರಿಸುತ್ತದೆ. ಜೂ.14ರ ಸಂಜೆ ಕೊಯಮತ್ತೂರಿನಲ್ಲಿ ▶ 6ನೇ ಪುಟಕ್ಕೆ

ದಕ್ಷಿಣ ಪದವೀಧರ ಕ್ಷೇತ್ರ: ಮೊದಲ ಪ್ರಾಶಸ್ತ್ಯ ಮತ ಎಣಿಕೆ ಪೂರ್ಣ
ಕಾಂಗ್ರೆಸ್‌ನ ಮಧು ಮುನ್ನಡೆ

● ಮೊದಲ ಪ್ರಾಶಸ್ತ್ಯ ಮತ ಎಣಿಕೆ ಅಂತ್ಯಗೊಂಡಾಗ 5905 ಅಧಿಕ ಮತ ● ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ದ್ವಿತೀಯ, ಜೆಡಿಎಸ್‌ನ ಹೆಚ್.ಕೆ.ರಾಮುಗೆ ತೃತೀಯ ಸ್ಥಾನ



ಬುಧವಾರ ಮಧ್ಯರಾತ್ರಿ ದ್ವಿತೀಯ ಪ್ರಾಶಸ್ತ್ಯ ಮತ ಎಣಿಕೆ ಅಭ್ಯರ್ಥಿಗಳ ಸಮ್ಮುಖದಲ್ಲಿ ಆರಂಭವಾಯಿತು.

> ಚುನಾವಣೆಯ ಮೊದಲ ಪ್ರಾಶಸ್ತ್ಯ ಮತಗಳ ಫಲಿತಾಂಶ ಹೊರಬಂದಿದೆ. ಪದವೀಧರರು ನನ್ನ ಕೈ ಹಿಡಿದಿರುವಂತೆ ಕಾಣುತ್ತಿದೆ. ಮೊದಲ ಪ್ರಾಶಸ್ತ್ಯದಲ್ಲಿ 6 ಸಾವಿರ ಮತಗಳ ಮುನ್ನಡೆ ಸಾಧಿಸಿರುವುದು ಸಂತೋಷ ತಂದಿದೆ. ಹಲವು ಮತದಾರರು ಕೇವಲ ಒಂದನೇ ಪ್ರಾಶಸ್ತ್ಯದ ಮತವನ್ನು ಮಾತ್ರ ನೀಡಿರುವುದು ಕಂಡುಬಂದಿದೆ. ನನಗೆ ಮತ ನೀಡಿದ ಪದವೀಧರರಿಗೆ ಚಿರಋಣಿಯಾಗಿರುತ್ತೇನೆ. ಸುಮಾರು 7 ಸಾವಿರಕ್ಕೂ ಹೆಚ್ಚು ಮತಗಳು ತಿರಸ್ಕೃತವಾಗಿರುವುದು ಬೇಸರದ ಸಂಗತಿ. ನಾವು ಕೂಡ ಮತದಾನ ಮಾಡುವ ಬಗ್ಗೆ ಅರಿವು ಮೂಡಿಸಿದ್ದೇವು. ಈ ವಿಚಾರದಲ್ಲಿ ಚುನಾವಣಾ ಆಯೋಗವು ಕೂಡ ಅರಿವು ಮೂಡಿಸುವ ಕಾರ್ಯವನ್ನು ಮಾಡಬೇಕಿದೆ. ನನ್ನ ಯಶಸ್ಸಿಗೆ ಕಾರಣರಾಗಿರುವ ಕಾಂಗ್ರೆಸ್ ನಾಯಕರು, ಕಾರ್ಯಕರ್ತರು, ಹಿತೈಷಿಗಳು, ನಮ್ಮ ಕಾಲೇಜಿನ ಸಿಬ್ಬಂದಿ, ಹಿರಿಯ ವಿದ್ಯಾರ್ಥಿಗಳು, ನಿವೃತ್ತ ಶಿಕ್ಷಕರು ಎಲ್ಲರೂ ದುಡಿದಿದ್ದಾರೆ. ಅವರಿಗೆ ನಾನು ಆಭಾರಿ
>
> 
>
> **– ಮಧು ಜಿ. ಮಾದೇಗೌಡ, ಕಾಂಗ್ರೆಸ್ ಅಭ್ಯರ್ಥಿ**

ಮಧು ಜಿ. ಮಾದೇಗೌಡ (ಕಾಂಗ್ರೆಸ್)	32592
ಮೈ.ವಿ. ರವಿಶಂಕರ್ (ಬಿಜೆಪಿ)	26687
ಹೆಚ್.ಕೆ. ರಾಮು (ಜೆಡಿಎಸ್)	17072
ಪ್ರಸನ್ನ ಎನ್. ಗೌಡ (ರೈತ ಸಂಘ, ದಸಂಸ ಬೆಂಬಲಿತ)	6609
ಎನ್.ಎಸ್. ವಿನಯ್	3472
ಡಾ. ಬಿ.ಹೆಚ್. ಚನ್ನಕೇಶವಮೂರ್ತಿ (ಬಿಎಸ್ಪಿ ಬೆಂಬಲಿತ)	2671
ರಫತ್‌ವುಲ್ಲಾಖಾನ್ (ಎಸ್‌ಡಿಪಿಐ)	773
ಕೆ.ಪಿ. ಪ್ರಸನ್ನಕುಮಾರ್	635
ವಾಟಾಳ್ ನಾಗರಾಜು (ವಾಟಾಳು ಪಕ್ಷ)	480
ಕಂದಳ್ಳಿ ಮಹೇಶ್	313
ಡಾ. ಜೆ.ಸಿ. ರವೀಂದ್ರ	203
ಎಸ್. ರಾಮು	177
ಡಾ. ಪುಟ್ಟಸ್ವಾಮಿ	115
ಎನ್. ವೀರಭದ್ರಸ್ವಾಮಿ (ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ)	97
ಸಿ. ಕಾವ್ಯಶ್ರೀ	86
ಹೆಚ್.ಪಿ. ಸುಜಾತ	75
ಡಾ. ಜೆ. ಅರುಣ್‌ಕುಮಾರ್	43
ಡಾ. ಹೆಚ್.ಎಲ್. ವೆಂಕಟೇಶ್	42
ಎನ್. ರಾಜೇಂದ್ರಸಿಂಗ್ ಬಾಬು	22

ಮೈಸೂರು,ಜೂ.15(ಎಂಕೆ/ಆರ್‌ಕೆ/ಎಂಟಿವೈ)–ರಾಜ್ಯ ರಾಜಕೀಯದಲ್ಲಿ ತೀವ್ರ ಕುತೂಹಲ ಕೆರಳಿಸಿರುವ ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಯ ಮತ ಎಣಿಕೆ ಕಾರ್ಯ ಬುಧವಾರ ಆರಂಭವಾಗಿದ್ದು, ಮಧ್ಯರಾತ್ರಿ 1 ಗಂಟೆ ಸುಮಾರಿನಲ್ಲಿ ಪ್ರಥಮ ಪ್ರಾಶಸ್ತ್ಯದ ಮತದ ಎಣಿಕೆ ಅಂತ್ಯಗೊಂಡಿದೆ. ಗೆಲುವಿಗೆ 46,083 ಮತಗಳನ್ನು ನಿಗದಿಪಡಿಸಲಾಗಿದೆ. ಪ್ರಾಥಮಿಕ ಪ್ರಾಶಸ್ತ್ಯದ ಮತ ಎಣಿಕೆ ಅಂತ್ಯಗೊಂಡಾಗ ಕಾಂಗ್ರೆಸ್ ಅಭ್ಯರ್ಥಿ ಮಧು ಜಿ. ಮಾದೇಗೌಡ ಅವರು ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಅವರಿಗಿಂತ 5,905 ಮತಗಳಿಂದ ಮುನ್ನಡೆದಿದ್ದಾರೆ.

ಮಧು ಜಿ.ಮಾದೇಗೌಡ 32,592, ಸಮೀಪ ಪ್ರತಿಸ್ಪರ್ಧಿ ಬಿಜೆಪಿಯ ಮೈ.ವಿ.ರವಿಶಂಕರ್ 26,687 ಮತ ಪಡೆದರೆ, ಜೆಡಿಎಸ್‌ನ ಹೆಚ್.ಕೆ. ರಾಮು 17,072, ರೈತ ಸಂಘ, ದಸಂಸ ಬೆಂಬಲಿತ ಪ್ರಸನ್ನ ವಿ.ಗೌಡ 6,609, ಮಾಜಿ ಸಚಿವ ಕೆ.ಎಸ್.ಈಶ್ವರಪ್ಪ ಅವರ ಹಿಂದಿನ ಆಪ್ತ ಸಹಾಯಕ ವಿನಯ್ 3,472 ಮತ ಪಡೆದರೆ ಕನ್ನಡ ಚಳವಳಿ ವಾಟಾಳ್ ಪಕ್ಷದ ವಾಟಾಳ್ ನಾಗರಾಜ್ ಕೇವಲ 480 ಮತ ಪಡೆದರು. ವಿದ್ಯಾವಂತ ಪದವೀಧರರು ಚಲಾಯಿಸಿದ ಮತಗಳಲ್ಲಿ 7,307 ಕುಲಗೆಟ್ಟಿದ್ದವು. ಮಧು ಮಾದೇಗೌಡ ಗೆಲುವಿಗೆ 13491 ಮತಗಳು ಕೊರತೆ ಇದ್ದರೆ, ಮೈ.ವಿ.ರವಿಶಂಕರ್ ಗೆಲ್ಲಲು 19396 ಮತಗಳ ಅಗತ್ಯವಿದೆ. ಪ್ರಥಮ ಪ್ರಾಶಸ್ತ್ಯದ ಮತ ಎಣಿಕೆಯಲ್ಲಿ ಫಲಿತಾಂಶ ಹೊರ ಬೀಳದ ಕಾರಣ ರಾತ್ರಿ 1.45ರ ಸುಮಾರಿನಲ್ಲಿ 2ನೇ ಪ್ರಾಶಸ್ತ್ಯದ ಮತ ಎಣಿಕೆ ಕಾರ್ಯ ಆರಂಭವಾಗಿತ್ತು. ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಈವರೆವಿಗೂ ಬಿಜೆಪಿ ಮತ್ತು ಜೆಡಿಎಸ್ ಮಾತ್ರ ಪ್ರಾಬಲ್ಯ ಮೆರೆದಿದ್ದು, ಕಾಂಗ್ರೆಸ್ 'ಆಟಕ್ಕುಂಟು–ಲೆಕ್ಕಕ್ಕಿಲ್ಲ' ಎಂಬಂತಿತ್ತು. ಆದರೆ ಈ ಬಾರಿ ಚುನಾವಣೆಯಲ್ಲಿ ಪ್ರಥಮ ಪ್ರಾಶಸ್ತ್ಯ ಮತದಲ್ಲಿ ಮುನ್ನಡೆ ಸಾಧಿಸುವ ಮೂಲಕ ಮಧು ಮಾದೇಗೌಡ ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಹೊಸ ಇತಿಹಾಸ ಸೃಷ್ಟಿಸಿದ್ದಾರೆ ಎಂದು ವಿಶ್ಲೇಷಿಸಲಾಗುತ್ತಿದೆ.

ಅಂಚೆ ಮತದಲ್ಲೇ ಶುಭಾರಂಭ: ಇಂದು ಮೊದಲು ಅಂಚೆ ಮತಗಳ ಎಣಿಕೆ ನಡೆಸಲಾಯಿತು. ದಕ್ಷಿಣ ಪದವೀಧರ ಕ್ಷೇತ್ರ ವ್ಯಾಪ್ತಿಯ 4 ಜಿಲ್ಲೆಗಳಿಂದ 245 ಮಂದಿ ▶ 8ನೇ ಪುಟಕ್ಕೆ

ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯ
ಅಕ್ರಮ ಕುಡಿಯುವ ನೀರು ಸಂಪರ್ಕ ಸಕ್ರಮ

● ಆಧಾರ್ ನಕಲು, ಸ್ವಯಂಪ್ರೇರಿತ ಪ್ರಮಾಣ ಪತ್ರ ನೀಡಿದಲ್ಲಿ ಕಾನೂನುಬದ್ಧ ● ಕೇಂದ್ರದ 24X7 ಕುಡಿಯುವ ನೀರು ಯೋಜನೆ ಜಾರಿಗೆ ನಿರ್ಧಾರ

ಬೆಂಗಳೂರು, ಜೂ.15(ಕೆಎಂಶಿ)–ನಗರಪಾಲಿಕೆ, ನಗರಸಭೆ ಸೇರಿದಂತೆ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಅಕ್ರಮ ಕುಡಿಯುವ ನೀರು ಸಂಪರ್ಕಗಳನ್ನು ಸಕ್ರಮಗೊಳಿಸಲು ರಾಜ್ಯ ಸರ್ಕಾರ ತೀರ್ಮಾನಿಸಿದೆ.



ಸುದ್ದಿಗಾರರಿಗೆ ಈ ವಿಷಯ ತಿಳಿಸಿದ ನಗರಾಭಿವೃದ್ಧಿ ಸಚಿವ ಭೈರತಿ ಬಸವರಾಜ್, ಅಕ್ರಮ ಕೊಳಾಯಿ ಸಂಪರ್ಕ ಹೊಂದಿರುವವರು ತಮ್ಮ ಆಧಾರ್ ನಕಲು ಪ್ರತಿ ಹಾಗೂ ಸ್ವಯಂಪ್ರೇರಿತ ಪ್ರಮಾಣ ಪತ್ರವನ್ನು ತಮ್ಮ ಸ್ಥಳೀಯ ಸಂಸ್ಥೆಗಳಿಗೆ ದಾಖಲಿಸಿದಲ್ಲಿ ಸಕ್ರಮಗೊಳಿಸಲಾಗುವುದು. ಸಕ್ರಮಗೊಳಿಸಿದ ನಂತರ ಸಂಪರ್ಕಕ್ಕೆ ಮೀಟರ್ ಅಳವಡಿಸಿ, ಪ್ರತಿ ಮಾಸಿಕ ಹಣವನ್ನು ಸಂಬಂಧಪಟ್ಟ ಸಂಸ್ಥೆಗಳಿಗೆ ನಾಗರಿಕರು ಪಾವತಿಸಬೇಕು. ಕೆಲವು ರಾಜ್ಯಗಳಲ್ಲಿ ಅಕ್ರಮ ಕೊಳಾಯಿ ಸಂಪರ್ಕಗಳನ್ನು ಸಕ್ರಮಗೊಳಿಸಿ, ಸ್ಥಳೀಯ ಸಂಸ್ಥೆಗಳು ಆದಾಯ ಮೂಲ ಹೆಚ್ಚಿಸಿಕೊಂಡಿವೆ. ಅದನ್ನೇ ಕರ್ನಾಟಕದ ಎಲ್ಲ ಮಹಾ ನಗರಪಾಲಿಕೆ, ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಅನುಷ್ಠಾನಗೊಳಿಸಲು ತೀರ್ಮಾನ ತೆಗೆದುಕೊಳ್ಳಲಾಗಿದೆ. ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳನ್ನು ದಾಹ ಮುಕ್ತವನ್ನಾಗಿ ಮಾಡಲು 9400 ಕೋಟಿ ರೂ ವೆಚ್ಚದ ಮಹತ್ವಾಕಾಂಕ್ಷಿ ಯೋಜನೆಯನ್ನು ಜಾರಿಗೆ ತರಲಾಗುವುದು ಎಂದರು. ಎಲ್ಲ ನಗರಪಾಲಿಕೆ ಹಾಗೂ ಸ್ಥಳೀಯ ಸಂಸ್ಥೆಗಳಲ್ಲಿ 24X7 ಕುಡಿಯುವ ನೀರು ಸಂಪರ್ಕವನ್ನು ಕಲ್ಪಿಸಲು ಕೇಂದ್ರ ಸರ್ಕಾರ ತಂದಿರುವ ಯೋಜನೆಯನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸಲಾಗುವುದು. ▶ 6ನೇ ಪುಟಕ್ಕೆ




ವೃತ್ತಿಪರ ಕೋರ್ಸ್ ಪ್ರವೇಶಕ್ಕೆ ಇಂದಿನಿಂದ ಸಿಇಟಿ



ಬೆಂಗಳೂರು,ಜೂ.15(ಕೆಎಂಶಿ)–ಎಂಜಿನಿಯರಿಂಗ್, ವೈದ್ಯಕೀಯ, ಕೃಷಿ, ಪಶುವೈದ್ಯಕೀಯ, ಫಾರ್ಮಸಿ ಮುಂತಾದ ವೃತ್ತಿಪರ ಕೋರ್ಸುಗಳಿಗೆ ನಾಳೆ(ಜೂ.16), ನಾಳಿದ್ದು (ಜೂ.17)ರಂದು ಸಿಇಟಿ (ಸಾಮಾನ್ಯ ಪ್ರವೇಶ ಪರೀಕ್ಷೆ) ಮತ್ತು ಜೂ. 18ರಂದು ಹೊರ ನಾಡು ಮತ್ತು ಗಡಿನಾಡು ಕನ್ನಡಿಗ ವಿದ್ಯಾರ್ಥಿಗಳಿಗೆ ಕನ್ನಡ ಭಾಷಾ ಪರೀಕ್ಷೆ ನಡೆಯಲಿದೆ. ಈ ಬಾರಿ ಒಟ್ಟು 2,16,525 ವಿದ್ಯಾರ್ಥಿಗಳು ಸಿಇಟಿ ಬರೆಯಲಿದ್ದಾರೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಅಶ್ವತ್ಥನಾರಾಯಣ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಸಿಇಟಿ ವಿವರಗಳನ್ನು ಪ್ರಕಟಿಸಿದ ಅವರು, ನಾಳೆ (ಜೂ.16)ಬೆಳಗ್ಗೆ 10.30ರಿಂದ 11.50ರವರೆಗೆ ಜೀವಶಾಸ್ತ್ರ, ಮಧ್ಯಾಹ್ನ 2.30ರಿಂದ 3.50ರವರೆಗೆ ಗಣಿತ ಪರೀಕ್ಷೆಗಳು ನಡೆಯಲಿವೆ. ಜೂ.17ರಂದು ಬೆಳಗ್ಗೆ ಭೌತ ಶಾಸ್ತ್ರ, ಮಧ್ಯಾಹ್ನ ರಸಾಯನಶಾಸ್ತ್ರ ಪರೀಕ್ಷೆ ಜರುಗಲಿದೆ. ಜೂ.18ರ ಬೆಳಗ್ಗೆ ಹೊರನಾಡು ಮತ್ತು ಗಡಿನಾಡು ಕನ್ನಡಿಗ ವಿದ್ಯಾರ್ಥಿಗಳಿಗೆ ಬೆಂಗಳೂರು, ಬೀದರ್, ಬೆಳಗಾವಿ, ವಿಜಯಪುರ, ಬಳ್ಳಾರಿ ಮತ್ತು ಮಂಗಳೂರುಗಳಲ್ಲಿ ಕನ್ನಡ ಭಾಷಾ ಪರೀಕ್ಷೆ ನಡೆಯಲಿದ್ದು, ಈ ಸಲ 1,708 ವಿದ್ಯಾರ್ಥಿಗಳು ಈ ಪರೀಕ್ಷೆ ಬರೆಯುತ್ತಿದ್ದಾರೆ ಎಂದರು. ವಿದ್ಯಾರ್ಥಿಗಳು ಪಾಲಿಸಬೇಕಾದ ನಿಯಮ ಮತ್ತು ಅವರಿಗೆ ವಿಧಿಸಿರುವ ನಿರ್ಬಂಧಗಳ ಬಗ್ಗೆಯೂ ಮಾಹಿತಿ ನೀಡಿದರು. ಈ ಬಾರಿ ಒಟ್ಟು 486 ಕೇಂದ್ರಗಳಲ್ಲಿ ▶ 6ನೇ ಪುಟಕ್ಕೆ

ಕಟ್ಟುನಿಟ್ಟಿನ ನಿರ್ಬಂಧ



ಕಡ್ಡಾಯವಾಗಿ ಮಾಸ್ಕ್ ಧರಿಸಿಕೊಂಡು ಬರಬೇಕು. ಓಎಂಆರ್ ಉತ್ತರ ಪತ್ರಿಕೆಯಲ್ಲಿ ತಮ್ಮ ಹೆಸರು, ಸಿಇಟಿ ಸಂಖ್ಯೆ, ಪ್ರಶ್ನೆಪತ್ರಿಕೆಯ ವರ್ಷನ್ ಕೋಡ್ ನಮೂದಿಸಬೇಕು. ಮೊದಲ ಗಂಟೆ ಬಾರಿಸಲಿರುವ ನಿಗದಿತ ಅವಧಿಗಿಂತಲೂ ಅರ್ಧ ಗಂಟೆ ಮುಂಚೆ ಪರೀಕ್ಷಾ ಕೇಂದ್ರದಲ್ಲಿ ಹಾಜರಿರಬೇಕು. ವಿದ್ಯಾರ್ಥಿಗಳು ತಮ್ಮ ಪ್ರವೇಶ ಪತ್ರ (ಅಡ್ಮಿಶನ್ ಟಿಕೆಟ್) ಮತ್ತು ಯಾವುದಾದರೂ ಒಂದು ಸೂಕ್ತ ಗುರುತಿನ ಪತ್ರವನ್ನು ತರಬೇಕು (ಕಾಲೇಜಿನ ಗುರುತುಪತ್ರ, ಬಸ್ ಪಾಸ್, ಡ್ರೈವಿಂಗ್ ಲೈಸೆನ್ಸ್, ಆಧಾರ್/ಪ್ಯಾನ್ ಕಾರ್ಡ್, ದ್ವಿತೀಯ ಪಿಯುಸಿ/12ನೇ ತರಗತಿಯ ಪ್ರವೇಶ ಪತ್ರ ಇತ್ಯಾದಿಗಳ ಪೈಕಿ ಒಂದು), ಯಾವುದೇ ತರಹದ ಕೈಗಡಿಯಾರಗಳನ್ನು ಕಟ್ಟಿಕೊಂಡು ಬರುವಂತಿಲ್ಲ. ಟ್ಯಾಬ್, ಮೊಬೈಲ್, ಕ್ಯಾಲ್ಕುಲೇಟರುಗಳನ್ನು ತರುವಂತಿಲ್ಲ.

ನಾಡಿದ್ದು ಹೊರನಾಡು, ಗಡಿನಾಡ ಕನ್ನಡಿಗರಿಗೆ ಕನ್ನಡ ಭಾಷಾ ಪರೀಕ್ಷೆ

ಜೂ.18ಕ್ಕೆ ಪ್ರಧಾನಿ ಮೋದಿ ತಾಯಿ ಹೀರಾಬೆನ್ ಶತಾಯುಷಿ



ಅಹಮದಾಬಾದ್: ಪ್ರಧಾನಿ ಮೋದಿ ಅವರ ತಾಯಿ ಹೀರಾಬೆನ್ ಮೋದಿ ಅವರು ಜೂನ್ 18ರಂದು 100ನೇ ವರ್ಷಕ್ಕೆ ಕಾಲಿಡಲಿದ್ದಾರೆ. ಅಂದು ಗುಜರಾತ್‌ಗೆ ಭೇಟಿ ನೀಡಲಿರುವ ಮೋದಿ ಅವರು, ಹೀರಾಬೆನ್ ಅವರನ್ನು ಭೇಟಿ ಮಾಡಿ ಹುಟ್ಟುಹಬ್ಬದ ಶುಭಾಶಯ ಕೋರಲಿದ್ದಾರೆ. ಬಳಿಕ ವಡೋದರಾದಲ್ಲಿ ರ್‍ಯಾಲಿಯನ್ನು ಉದ್ದೇಶಿಸಿ ಭಾಷಣ ಮಾಡಲಿದ್ದಾರೆ. ಹೀರಾಬೆನ್ ಅವರಿಗೆ ದೀರ್ಘಾಯುಷ್ಯ ಮತ್ತು ಉತ್ತಮ ಆರೋಗ್ಯ ಪ್ರಾಪ್ತವಾಗಲಿ ಎಂದು ಹಾರೈಸಿ ಮೋದಿ, ವಡನಗರದಲ್ಲಿ ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ ಎಂದು ಕುಟುಂಬಸ್ಥರು ಹೇಳಿದ್ದಾರೆ.

5G ತರಂಗಾಂತರ ಹರಾಜಿಗೆ ಕೇಂದ್ರ ಅಸ್ತು

ನವದೆಹಲಿ, ಜೂ.15– ಭಾರತದ ಬಹು ನಿರೀಕ್ಷಿತ 5ಜಿ ತರಂಗಾಂತರ ಹರಾಜಿಗೆ ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದ್ದು, ಇದೇ ಜುಲೈ ಅಂತ್ಯಕ್ಕೆ ಹರಾಜು ಪ್ರಕ್ರಿಯೆ ನಡೆಯಲಿದೆ ಎನ್ನಲಾಗಿದೆ.



ಭಾರತವು ಶೀಘ್ರದಲ್ಲೇ 4G ಪ್ರಪಂಚದಿಂದ 5G ಪ್ರಪಂಚಕ್ಕೆ ಶಿಫ್ಟ್ ಆಗಲಿದ್ದು, 5G ಸೇವೆಗಳ ತರಂಗಾಂತರ ಹರಾಜು ಪ್ರಕ್ರಿಯೆ ಜುಲೈನಲ್ಲಿ ನಡೆಯಲಿದೆ. ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಸಚಿವ ಸಂಪುಟವು ದೂರಸಂಪರ್ಕ ಇಲಾಖೆಯ 5G ತರಂಗಾಂತರ ಹರಾಜನ್ನು ಅನುಮೋದಿಸಿದೆ. ಅದರ ಮೂಲಕ ಸಾರ್ವಜನಿಕರಿಗೆ ಮತ್ತು ಉದ್ಯಮಗಳಿಗೆ 5G ಸೇವೆಗಳನ್ನು ಒದಗಿಸಲು ಬಿಡ್‌ದಾರರಿಗೆ ಸ್ಪೆಕ್ಟ್ರಮ್ ಅನ್ನು ನಿಯೋಜಿಸಲಾಗುವುದು. 5G ನೆಟ್‌ವರ್ಕ್ ವೇಗ, ಸಾಮರ್ಥ್ಯವು ಪ್ರಸ್ತುತ 4G ಸೇವೆಗಳಿಗಿಂತ ▶ 6ನೇ ಪುಟಕ್ಕೆ

ಇನ್ನೆರಡು ವರ್ಷದಲ್ಲಿ ಮೈಸೂರು ವಿಮಾನ ನಿಲ್ದಾಣ
ಅಂತರರಾಷ್ಟ್ರೀಯ ಮಟ್ಟಕ್ಕೆ

- ವಿಮಾನ ನಿಲ್ದಾಣ 1820 ಕೋಟಿ ರೂ. ವೆಚ್ಚದಲ್ಲಿ ಮೇಲ್ದರ್ಜೆಗೆ
- ಅಗತ್ಯವಿರುವ ಭೂಸ್ವಾಧೀನಕ್ಕೆ 300 ಕೋಟಿ ರೂ. ಮೀಸಲು
- ಸಂಸದ ಪ್ರತಾಪ್‌ಸಿಂಹ ಒತ್ತಾಸೆಯಂತೆ ವಿಮಾನ ನಿಲ್ದಾಣ ಅಭಿವೃದ್ಧಿ
- ವಸತಿ ಹಾಗೂ ಮೂಲಸೌಕರ್ಯ ಸಚಿವ ವಿ.ಸೋಮಣ್ಣ ವಿವರಣೆ



ಬೆಂಗಳೂರು, ಜೂ.15(ಕೆಎಂಶಿ)–ಮೈಸೂರು ಮಂಡಕಳ್ಳಿ ವಿಮಾನ ನಿಲ್ದಾಣ ಇನ್ನೆರಡು ವರ್ಷಗಳಲ್ಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವಾಗಿ ಪರಿವರ್ತನೆಗೊಳ್ಳಲಿದೆ ಎಂದು ವಸತಿ ಮತ್ತು ಮೂಲಸೌಕರ್ಯ ಸಚಿವ ವಿ.ಸೋಮಣ್ಣ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯವನ್ನು ಕೃಷಿ ಮತ್ತು ಕೈಗಾರಿಕಾ ಹಬ್ ಆಗಿ ರೂಪಿಸುವ ಉದ್ದೇಶದಿಂದ ಕೆಲವು ವಿಮಾನ ನಿಲ್ದಾಣಗಳನ್ನು ಮೇಲ್ದರ್ಜೆಗೇರಿಸುವುದರ ಜೊತೆಗೆ ದಾವಣಗೆರೆ, ರಾಯಚೂರು ಹಾಗೂ ಕೊಪ್ಪಳದಲ್ಲಿ ಹೊಸ ವಿಮಾನ ನಿಲ್ದಾಣಗಳನ್ನು ಸ್ಥಾಪಿಸುವುದಾಗಿ ಪ್ರಕಟಿಸಿದರು.

ಮೈಸೂರು ವಿಮಾನ ನಿಲ್ದಾಣವನ್ನು 1820 ಕೋಟಿ ರೂ.ಗಳ ವೆಚ್ಚದಲ್ಲಿ ಮೇಲ್ದರ್ಜೆಗೇರಿಸುವ ಕೆಲಸ ಪ್ರಾರಂಭವಾಗಿದೆ. ವಿಸ್ತರಣೆಗೆ ಅಗತ್ಯವಿರುವ ಭೂ ಸ್ವಾಧೀನ ಕಾರ್ಯಕ್ಕೆ ತಗಲುವ 300 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ ಎಂದರು.

ಬಿಜಾಪುರದ ವಿಮಾನ ನಿಲ್ದಾಣ ಕಾಮಗಾರಿ ಆರಂಭವಾಗಿದ್ದು, 3200 ಎಕರೆ ವಿಸ್ತೀರ್ಣದ ಈ ವಿಮಾನ ನಿಲ್ದಾಣ ಪೂರ್ಣಗೊಂಡರೆ ರಾಜ್ಯದ ಅಭಿವೃದ್ಧಿ ಪರ್ವವೇ ಆರಂಭವಾಗಲಿದೆ ಎಂದ ಅವರು, ಆ ಭಾಗದಲ್ಲಿ ತೋಟಗಾರಿಕೆ ಮತ್ತು ಪುಷ್ಪೋದ್ಯಮ ವಿಪುಲವಾಗಿ ಬೆಳೆಯಲು ದಾರಿಯಾಗುತ್ತದೆ ಎಂದರು.

ಬಿಜಾಪುರ, ಬಾಗಲಕೋಟೆ ಸೇರಿದಂತೆ ಆ ಭಾಗದ ಹಲವು ಜಿಲ್ಲೆಗಳಲ್ಲಿ ವಿಶ್ವದರ್ಜೆಯ ಹೂವು ಮತ್ತು ಹಣ್ಣು ಬೆಳೆಯಲಾಗುತ್ತಿದ್ದು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರಾರಂಭವಾದರೆ ಕರ್ನಾಟಕದ ಆರ್ಥಿಕ ಚಿತ್ರಣವೇ ಬದಲಾಗಲಿದೆ ಎಂದರು.

ಇದು ಸಾಧ್ಯವಾದರೆ ಸಹಜವಾಗಿಯೇ ಕೃಷಿ ಮತ್ತು ಕೈಗಾರಿಕೆ ಕ್ಷೇತ್ರಗಳಲ್ಲಿ ಬಂಡವಾಳ ಹೂಡುವವರು ಇನ್ನಷ್ಟು ಆಸಕ್ತಿ ತಳೆಯುತ್ತಾರೆ. ಆ ಮೂಲಕ ರಾಜಧಾನಿ ಬೆಂಗಳೂರಿನ ಮೇಲೆ ಕೇಂದ್ರೀಕೃತವಾಗಿರುವ ಗಮನ ಇಡೀ ರಾಜ್ಯದ ಮೇಲೆ ಬೀಳುತ್ತದೆ. ಮೈಸೂರು, ಬಿಜಾಪುರ, ಶಿವಮೊಗ್ಗಗಳಲ್ಲಿ ಎಟಿಆರ್‌ನಿಂದ ಬೋಯಿಂಗ್ ವಿಮಾನಗಳ ಓಡಾಟಕ್ಕೆ ಅನುವು ಮಾಡಿಕೊಡಲಾಗುವುದು. ಈ ವಿಮಾನ ನಿಲ್ದಾಣಗಳು ಮೇಲ್ದರ್ಜೆಗೇರಿಸಿದರೆ ರಾಷ್ಟ್ರೀಯ, ಅಂತರರಾಷ್ಟ್ರೀಯ ವಿಮಾನಗಳು ಹಾರಾಟ ನಡೆಸಲು ಸಹಕಾರಿಯಾಗಲಿದೆ. ವಿಶ್ವದ ಯಾವುದೇ ಭಾಗದಿಂದ ಈ ನಗರಗಳಿಗೆ ವಾಯು ಸಂಪರ್ಕವಿದೆ ಎಂದಾದಲ್ಲಿ ಉದ್ದಿಮೆದಾರರು ಬಂಡವಾಳ ಹೂಡಲು ಆಸಕ್ತಿ ತೋರುತ್ತಾರೆ. ಇದರಿಂದ ಆ ಪ್ರದೇಶ ಆರ್ಥಿಕ ಬೆಳವಣಿಗೆಗೆ ಸಹಕಾರಿಯಾಗುವುದಲ್ಲದೆ, ನಿರುದ್ಯೋಗ ಸಮಸ್ಯೆ ನಿವಾರಣೆಯಾಗುತ್ತದೆ. ರಾಜ್ಯದಲ್ಲಿ ಮೂಲಸೌಕರ್ಯಗಳನ್ನು ಒದಗಿಸುವ ಯೋಜನೆಗಳಿಗೆ ಅಪಾರ ಪ್ರಮಾಣದ ಭೂಮಿ ಬೇಕು. ಆದರೆ ಸುಪ್ರೀಂಕೋರ್ಟ್ ನಿರ್ಧಾರದಿಂದ ಸ್ವಾಧೀನಪಡಿಸಿಕೊಳ್ಳುವ ಭೂಮಿಗೆ ಮೂರು ಪಟ್ಟು ಹಣ ನೀಡಬೇಕಿದ್ದು, ಇದು ಸಮಸ್ಯೆಯಾಗಿದೆ. ರೈಲ್ವೆ ಯೋಜನೆ, ವಿಮಾನ ಯೋಜನೆ ಸೇರಿದಂತೆ ಹಲವು ಯೋಜನೆಗಳ ಜಾರಿಗೆ ಬೇಕಾಗುವ ಭೂಸ್ವಾಧೀನ ಪ್ರಕ್ರಿಯೆಗೆ ರಾಜ್ಯ ಸರ್ಕಾರವೇ ಹಣ ಒದಗಿಸಬೇಕಿದೆ. ಈ ವಿಷಯದಲ್ಲಿ ಕೊರತೆ ಇರುವುದರಿಂದ ನಿರೀಕ್ಷಿತ ವೇಗದಲ್ಲಿ ಮುಂದುವರಿಯುವುದು ಕಷ್ಟವಾಗುತ್ತಿದೆ ಎಂದರು.

> “ ಮೈಸೂರು–ಕೊಡಗು, ಲೋಕಸಭೆಯನ್ನು ಪ್ರತಿನಿಧಿಸುವ ಪ್ರತಾಪ್ ಸಿಂಹ ಅವರ ನೆರವಿನಿಂದ ಈ ವಿಮಾನ ನಿಲ್ದಾಣ ಅಂತಾರಾಷ್ಟ್ರೀಯ ಮಟ್ಟಕ್ಕೆ ಮೇಲ್ದರ್ಜೆಗೇರಿಸಲು ಸಹಕಾರಿಯಾಗಿದೆ. ಅಷ್ಟೇ ಅಲ್ಲ ಅವರ ಶ್ರಮದಿಂದ ಯೋಜನೆಗೆ ತಗಲುವ 1500 ಕೋಟಿ ರೂ. ಕೇಂದ್ರ ಸರ್ಕಾರದಿಂದಲೇ ಭರಿಸುತ್ತಿದೆ. ಮೈಸೂರು, ಬಿಜಾಪುರ, ಶಿವಮೊಗ್ಗ ಸೇರಿದಂತೆ ಹಲವು ವಿಮಾನ ನಿಲ್ದಾಣಗಳನ್ನು ಅಂತಾರಾಷ್ಟ್ರೀಯ ದರ್ಜೆಗೆ ಏರಿಸುವುದರಿಂದ ಉದ್ಯಮಿಗಳು ಆ ಕಡೆ ಗಮನ ಕೊಡುತ್ತಾರೆ. ಇದರಿಂದ ಬೆಂಗಳೂರಿನ ಮೇಲಿರುವ ಒತ್ತಡ ಕಡಿಮೆಯಾಗಿ ರಾಜ್ಯದ ಎಲ್ಲ ಭಾಗಗಳು ಬೆಳೆಯಲು ಅನುಕೂಲವಾಗುತ್ತದೆ.
>
> 
>
> **–ವಿ.ಸೋಮಣ್ಣ, ವಸತಿ ಸಚಿವ**

ಶಿಕ್ಷಣ ಇಲಾಖೆ ಅಧಿಕಾರಿ, ಸಿಬ್ಬಂದಿಗೆ ಸ್ಕೌಟ್ಸ್, ಗೈಡ್ಸ್ ಮಾಹಿತಿ ಶಿಬಿರ

ಶಾಲೆಗಳಲ್ಲಿ ಸ್ಕೌಟ್, ಗೈಡ್ಸ್ ಸಂಖ್ಯೆ ಹೆಚ್ಚಿಸಲು ರಾಜ್ಯಾಧ್ಯಕ್ಷ ಪಿ.ಜಿ.ಆರ್.ಸಿಂಧ್ಯಾ ಸಲಹೆ



ಮೈಸೂರಲ್ಲಿ ಶಿಕ್ಷಣ ಇಲಾಖೆ ಅಧಿಕಾರಿ, ಸಿಬ್ಬಂದಿಗೆ ನಡೆದ ಸ್ಕೌಟ್ಸ್ & ಗೈಡ್ಸ್ ಮಾಹಿತಿ ಶಿಬಿರಕ್ಕೆ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯಾಧ್ಯಕ್ಷ ಪಿ.ಜಿ.ಆರ್.ಸಿಂಧ್ಯಾ ಚಾಲನೆ ನೀಡಿದರು.

ಮೈಸೂರು, ಜೂ.15(ಆರ್‌ಕೆಬಿ)–ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್, ಶ್ರೀ ಚಾಮರಾಜೇಂದ್ರ ಸ್ಕೌಟ್ಸ್ ಮತ್ತು ಗೈಡ್ಸ್ ಕೇಂದ್ರ ಕಚೇರಿ ಆಶ್ರಯದಲ್ಲಿ ಬುಧವಾರ ಮೈಸೂರಿನ ಜಯಚಾಮರಾಜೇಂದ್ರ ಸ್ಕೌಟ್ಸ್ ಮತ್ತು ಗೈಡ್ಸ್ ಕೇಂದ್ರ ಕಚೇರಿ ಆವರಣದಲ್ಲಿ ಮೈಸೂರು ಜಿಲ್ಲೆಯ ಶಿಕ್ಷಣ ಇಲಾಖೆ ಅಧಿಕಾರಿಗಳಿಗೆ ಮಾಹಿತಿ ಶಿಬಿರ ಆಯೋಜಿಸಲಾಗಿತ್ತು.

ಶಿಬಿರದಲ್ಲಿ ಡಿಡಿಪಿಐ, ಬಿಇಓಗಳು, ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿಗಳು (ಬಿಆರ್‌ಸಿ), ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿಗಳು (ಸಿಆರ್‌ಪಿ), ಕ್ಷೇತ್ರ ಸಂಪನ್ಮೂಲ ವ್ಯಕ್ತಿಗಳು (ಬಿಆರ್‌ಪಿ), ಶಿಕ್ಷಣ ಸಂಯೋಜಕರು ಸೇರಿದಂತೆ ಒಟ್ಟು 250ಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದರು. ಇವರಿಗೆ ಸ್ಕೌಟ್ಸ್ ಬಗ್ಗೆ ಮಾಹಿತಿ ನೀಡಲಾಯಿತು.

ಶಿಬಿರಕ್ಕೆ ಚಾಲನೆ ನೀಡಿದ ಸ್ಕೌಟ್ಸ್ ಅಂಡ್ ಗೈಡ್ಸ್ ರಾಜ್ಯಾಧ್ಯಕ್ಷ ಪಿ.ಜಿ.ಆರ್.ಸಿಂಧ್ಯಾ, ಶಾಲೆಗಳಲ್ಲಿ ಸ್ಕೌಟ್ಸ್ ಅಂಡ್ ಗೈಡ್ಸ್ ಸಂಖ್ಯೆ ಹೆಚ್ಚಾಗಬೇಕು. ಮಕ್ಕಳಲ್ಲಿ ಈ ಬಗ್ಗೆ ಹೆಚ್ಚು ಆಸಕ್ತಿ ಮೂಡಿಸಬೇಕು. ಈ ವಿಚಾರದಲ್ಲಿ ಶಿಕ್ಷಕರು ಹೆಚ್ಚು ಆಸಕ್ತಿ ವಹಿಸಿ ಮಕ್ಕಳಿಗೆ ಸ್ಕೌಟ್ಸ್ ಮತ್ತು ಗೈಡ್ಸ್ ಬಗ್ಗೆ ತಿಳುವಳಿಕೆ ಮೂಡಿಸಬೇಕು ಎಂದರು. ಈ ಸಂದರ್ಭದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ರಾಮಚಂದ್ರ ರಾಜೇ ಅರಸ್, ಬಿಇಓಗಳಾದ ರಾಮಾರಾಧ್ಯ, ಮಹೇಶ್ವರಿ, ಜಗದೀಶ್ ಇನ್ನಿತರರು ಉಪಸ್ಥಿತರಿದ್ದರು.

ಭೋವಿ ಅಭಿವೃದ್ಧಿ ನಿಗಮದ ಎಂಡಿ ಲೀಲಾವತಿ ಬಂಧನ

ಬೆಂಗಳೂರು, ಜೂ.15– ಸಮಾಜ ಕಲ್ಯಾಣ ಇಲಾಖೆಯ ಉದ್ಯಮಶೀಲತಾ ಯೋಜನೆಯ 150 ಕೋಟಿ ಅನುದಾನವನ್ನು ದುರ್ಬಳಕೆ ಮಾಡಿಕೊಂಡ ಆರೋಪಕ್ಕೆ ಸಂಬಂಧಿಸಿದಂತೆ ತನಿಖೆಗೆ ಸಹಕರಿಸದ ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕಿ ಲೀಲಾವತಿ ಅವರನ್ನು ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಬುಧವಾರ ಬಂಧಿಸಿದೆ.



2018–19, 2019–20 ಮತ್ತು 2020–21ನೇ ಸಾಲಿನಲ್ಲಿ ಉದ್ಯಮಶೀಲತಾ ಯೋಜನೆಯ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಮಂಜೂರಾದ ಮೊತ್ತಕ್ಕಿಂತಲೂ ಹೆಚ್ಚು ಜಮೆ ಮಾಡಿರುವುದು ಹಾಗೂ ನಕಲಿ ಫಲಾನುಭವಿಗಳ ಪಟ್ಟಿಯನ್ನು ಸೃಷ್ಟಿಸಿ 150 ಕೋಟಿ ರೂ. ಅವ್ಯವಹಾರ ನಡೆಸಿರುವ ಆರೋಪದ ಮೇಲೆ ಲೀಲಾವತಿ ಹಾಗೂ ನಿಗಮದ ಪ್ರಧಾನ ವ್ಯವಸ್ಥಾಪಕರೂ ಆಗಿರುವ ಬೆಂಗಳೂರು ಗ್ರಾಮಾಂತರ ಜಿಲ್ಲಾ ವ್ಯವಸ್ಥಾಪಕ ನಾಗರಾಜಪ್ಪ ವಿರುದ್ಧ ಕೋಲಾರ ಜಿಲ್ಲೆಯ ಶ್ರೀನಿವಾಸಪುರ ನಿವಾಸಿಯೊಬ್ಬರು ಎಸಿಬಿಗೆ ದೂರು ನೀಡಿದ್ದರು.

ಇಬ್ಬರೂ ಅಧಿಕಾರಿಗಳ ವಿರುದ್ಧ ಎಫ್‌ಐಆರ್ ದಾಖಲಿಸಿರುವ ಎಸಿಬಿ ಬೆಂಗಳೂರು ನಗರ ಘಟಕದ ಅಧಿಕಾರಿಗಳು, ತನಿಖೆ ನಡೆಸುತ್ತಿದ್ದಾರೆ. ಪ್ರಕರಣದ ತನಿಖೆಗೆ ಅಗತ್ಯವಿರುವ ಕಡತಗಳನ್ನು ಒದಗಿಸುವಂತೆ ಲೀಲಾವತಿ ಅವರಿಗೆ ಸೂಚಿಸಲಾಗಿತ್ತು. ಆದರೆ, ಕಡತಗಳನ್ನು ಒದಗಿಸದೇ ಅಸಹಕಾರ ತೋರುತ್ತಿದ್ದರು. ಈ ಕಾರಣದಿಂದ ಅವರನ್ನು ಬಂಧಿಸಿದ್ದು, ನ್ಯಾಯಾಲಯದ ಆದೇಶದಂತೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಎಸಿಬಿ ತಿಳಿಸಿದೆ.

ಪ್ರಧಾನಿ ನರೇಂದ್ರ ಮೋದಿ ಮೈಸೂರಿಗೆ ಭೇಟಿ

ಕಿಂಚಿತ್ತೂ ಎಚ್ಚರಗೊಳ್ಳದ ಪ್ರವಾಸೋದ್ಯಮ ಇಲಾಖೆ

ಸ್ಕಾಲ್ ಇಂಟರ್‌ನ್ಯಾಷನಲ್ ಮೈಸೂರು ಘಟಕದ ಅಧ್ಯಕ್ಷ ಬಿ.ಎಸ್.ಪ್ರಶಾಂತ್ ಬೇಸರ

ಮೈಸೂರು,ಜೂ.15(ಪಿಎಂ)– ಅಂತರರಾಷ್ಟ್ರೀಯ ಯೋಗ ದಿನಾಚರಣೆಯಂದು ಸ್ವತಃ ಪ್ರಧಾನಿ ನರೇಂದ್ರ ಮೋದಿಯವರೇ ಮೈಸೂರಿಗೆ ಭೇಟಿ ನೀಡುತ್ತಿದ್ದು, ಇಂತಹ ಸಂದರ್ಭದಲ್ಲಿ ಕಿಂಚಿತ್ತೂ ಕ್ರಿಯಾಶೀಲತೆ ಇಲ್ಲದ ಪ್ರವಾಸೋದ್ಯಮ ಇಲಾಖೆ ಕೈಚೆಲ್ಲಿ ಕುಳಿತಿದೆ ಎಂದು ಉದ್ಯಮಿ ಹಾಗೂ ಸ್ಕಾಲ್ ಇಂಟರ್‌ನ್ಯಾಷನಲ್ ಮೈಸೂರು ಘಟಕದ ಅಧ್ಯಕ್ಷ ಬಿ.ಎಸ್.ಪ್ರಶಾಂತ್ ಬೇಸರ ವ್ಯಕ್ತಪಡಿಸಿದ್ದಾರೆ. ಪ್ರಧಾನಿ ಮೋದಿ ಮೈಸೂರು ಭೇಟಿ ಹಿನ್ನೆಲೆಯಲ್ಲಿ ಮೈಸೂರಿನ ಹೆಸರು ವಿಶ್ವಮಟ್ಟದಲ್ಲಿ ಸದ್ದು ಮಾಡುತ್ತಿದೆ. ಇದರಿಂದ ಮೈಸೂರಿನ ಪ್ರವಾಸೋದ್ಯಮಕ್ಕೆ ಬಹಳಷ್ಟು ಉತ್ತೇಜನವೂ ದೊರೆಯಲಿದೆ. ಅಲ್ಲದೆ, ಕೇಂದ್ರ ಸರ್ಕಾರದಿಂದ ಕರ್ನಾಟಕದ ಪ್ರವಾಸೋದ್ಯಮಕ್ಕೆ ಅನುಕೂಲವಾಗುವ ಯೋಜನೆ, ಅನುದಾನ ಸಂಬಂಧ ಮನವಿ ಸಲ್ಲಿಸಲು ಇದು ಸೂಕ್ತ ಸಮಯ. ಇಂತಹ ಸಮಯದಲ್ಲಿ ಇಷ್ಟು ದೊಡ್ಡ ಕಾರ್ಯಕ್ರಮವನ್ನು ಮುತುವರ್ಜಿ ವಹಿಸಿ, ಆಯೋಜಿಸಿ, ಪ್ರಚಾರ ಮಾಡಬೇಕಿದ್ದ ಪ್ರವಾಸೋದ್ಯಮ ಇಲಾಖೆ ಮಾತ್ರ ಈ ಬಗ್ಗೆ ಕಿಂಚಿತ್ತೂ ಗಮನ ಕೊಡದೇ ಕುಳಿತಿದೆ. ಕೇಂದ್ರ ಸಚಿವ ನಿತಿನ್ ಗಡ್ಕರಿಯವರೇ ಮೈಸೂರಿಗೆ ಆಗಮಿಸಿದ್ದರು. ಆದರೆ ಪ್ರವಾಸೋದ್ಯಮ ಸಚಿವ ಆನಂದ್‌ಸಿಂಗ್ ಮಾತ್ರ ಇತ್ತ ಬರಲಿಲ್ಲ. ಬರುವಂತೆಯೂ ಕಾಣುತ್ತಿಲ್ಲ.



ನಮ್ಮ ರಾಜ್ಯ ಹಾಗೂ ಜಿಲ್ಲೆಯ ಪ್ರವಾಸೋದ್ಯಮ ಉತ್ತೇಜಿಸಲು ಈ ಕಾರ್ಯಕ್ರಮವನ್ನು ಅತ್ಯುತ್ತಮ ರೀತಿಯಲ್ಲಿ ಬಳಸಿಕೊಳ್ಳಬಹುದು. ಆದರೆ ಪ್ರವಾಸೋದ್ಯಮ ಇಲಾಖೆ ಅಧಿಕಾರಿಗಳು ಹಾಗೂ ಸಚಿವರು ಕೈಚೆಲ್ಲಿ ಕುಳಿತಿದ್ದಾರೆ. ಇನ್ನಾದರೂ ಪ್ರವಾಸೋದ್ಯಮ ಸಚಿವರು ಹಾಗೂ ಇಲಾಖೆ ಅಧಿಕಾರಿಗಳು ಕ್ರಿಯಾಶೀಲವಾಗಿ ಉತ್ತಮ ರೀತಿಯಲ್ಲಿ ಕಾರ್ಯಕ್ರಮ ನಡೆಯುವಂತೆ ಮಾಡಬೇಕು. ಇನ್ನಷ್ಟು ಪ್ರಚಾರ ನೀಡಲು ಮುಂದಾಗಬೇಕು ಎಂದು ಪ್ರಕಟಣೆಯಲ್ಲಿ ಅವರು ಒತ್ತಾಯಿಸಿದ್ದಾರೆ.

ಮೈಸೂರು ರೈಲು ನಿಲ್ದಾಣ ಬಳಿಯ ಹೋಟೆಲ್‌ನಲ್ಲಿ ಪ್ರವಾಸಿ ಮಹಿಳೆಯ ಬ್ಯಾಗ್ ಕದ್ದ ಖದೀಮ

ಮೈಸೂರು, ಜೂ.15–ಹೋಟೆಲ್‌ನಲ್ಲಿ ಊಟ ಮಾಡುತ್ತಿದ್ದ ವೇಳೆ ಖದೀಮನೋರ್ವ ಪ್ರವಾಸಿ ಮಹಿಳೆಯೊಬ್ಬರ ಬ್ಯಾಗ್ ಎಗರಿಸಿದ ಘಟನೆ ಮೈಸೂರಿನ ರೈಲ್ವೆ ನಿಲ್ದಾಣದ ಬಳಿ ನಡೆದಿದೆ. ಮೂಲತಃ ಜಾರ್ಖಂಡ್‌ನ ರಾಂಚಿಯವರಾಗಿದ್ದು, ಹಾಲಿ ಬೆಂಗಳೂರಿನ ಖಾಸಗಿ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿರುವ ಅನುರಿತಿ ಪ್ರಿಯಾ (25) ಎಂಬುವರು ತನ್ನ ತಂದೆ ಅಜಯ್ ಕುಮಾರ್ ಸಿನ್ಹಾ ಮತ್ತು ತಾಯಿ ರೀಟಾ ಕುಮಾರಿ ಸಿಂಹ ಜೊತೆ ಮೈಸೂರಿಗೆ ಪ್ರವಾಸ ಬಂದಿದ್ದರು. ಎರಡು ದಿನದ ಪ್ರವಾಸ ಮುಗಿಸಿ ಜೂ.13ರಂದು ಬೆಂಗಳೂರಿಗೆ ತೆರಳಲು ರೈಲ್ವೆ ನಿಲ್ದಾಣಕ್ಕೆ ಹೋದಾಗ ಅವರು ಮಧ್ಯಾಹ್ನ 12.50ಕ್ಕೆ ಹೋಗಬೇಕಾದ ರೈಲು 3 ಗಂಟೆ ವಿಳಂಬವಾಗಿ ಹೊರಡುತ್ತದೆ ಎಂಬುದನ್ನು ಅರಿತು ಅವರು ತಮ್ಮ ತಾಯಿ ಜೊತೆ ರೈಲ್ವೆ ನಿಲ್ದಾಣದ ಬಳಿ ಎ2ಬಿ ಹೋಟೆಲ್‌ಗೆ ಊಟಕ್ಕೆ ತೆರಳಿದ್ದಾರೆ. ಅವರು ಕುಳಿತ್ತಿದ್ದ ಚೇರ್‌ನಲ್ಲಿ ಬ್ಯಾಗನ್ನಿಟ್ಟು, ಊಟ ಮಾಡಿದ ನಂತರ ನೋಡಿದಾಗ ಬ್ಯಾಗ್ ಕಾಣೆಯಾಗಿತ್ತು. ತಕ್ಷಣವೇ ಹೋಟೆಲ್‌ನ ಮ್ಯಾನೇಜರ್‌ಗೆ ವಿಷಯ ತಿಳಿಸಿ, ಸಿಸಿ ಕ್ಯಾಮರಾ ದೃಶ್ಯಾವಳಿಗಳನ್ನು ಪರಿಶೀಲಿಸಿದಾಗ ಖದೀಮನೋರ್ವ ಅವರ ಬ್ಯಾಗ್ ಕೊಂಡೊಯ್ದಿದ್ದು ಗೋಚರಿಸಿದೆ. ಬ್ಯಾಗ್‌ನಲ್ಲಿದ್ದ ಲಕ್ಷ ರೂ. ಮೌಲ್ಯದ ಲ್ಯಾಪ್‌ಟಾಪ್, 3 ಡೆಬಿಟ್ ಕಾರ್ಡ್‌ಗಳು, ಆಧಾರ್ ಕಾರ್ಡ್, ಡ್ರೈವಿಂಗ್ ಲೈಸೆನ್ಸ್, ಪಾನ್ ಕಾರ್ಡ್, ಇಯರ್ ಫೋನ್, ಸಿಲ್ವರ್ ಇಯರ್ ರಿಂಗ್ ಮತ್ತು 500 ರೂ. ನಗದು ಕಳುವಾಗಿದೆ ಎಂದು ಅವರು ನೀಡಿದ ದೂರನ್ನು ದಾಖಲಿಸಿಕೊಂಡಿರುವ ಮಂಡಿ ಠಾಣೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಎಟಿಎಂ ಕೇಂದ್ರದ ಪಾಸ್‌ಬುಕ್ ಅಪ್‌ಡೇಷನ್ ಮಿಷನ್ ಪ್ರಿಂಟರ್ ಕಳವು

ಮೈಸೂರು, ಜೂ.15–ಎಟಿಎಂ ಕೇಂದ್ರದ ಪಾಸ್‌ಬುಕ್ ಅಪ್‌ಡೇಷನ್ ಮಿಷನ್‌ನ ಪ್ರಿಂಟರ್ ಕಳುವಾಗಿರುವ ಬಗ್ಗೆ ವರದಿಯಾಗಿದೆ. ಮೈಸೂರಿನ ಬಿ.ಎನ್.ರಸ್ತೆಯಲ್ಲಿರುವ ಕೆನರಾ ಬ್ಯಾಂಕ್ ಲಷ್ಕರ್ ಮೊಹಲ್ಲಾ ಶಾಖೆಯ ಎಟಿಎಂ ಸೆಂಟರ್‌ನಲ್ಲಿದ್ದ ಪಾಸ್‌ಬುಕ್ ಅಪ್‌ಡೇಷನ್ ಮಿಷನ್‌ನ ಪ್ರಿಂಟರ್ ಅನ್ನು ಕಳವು ಮಾಡಲಾಗಿದ್ದು, ಎರಡನೇ ಶನಿವಾರವಾದ ಜೂ.10ರಂದು ಬ್ಯಾಂಕ್‌ನ ಬಾಗಿಲು ಮುಚ್ಚಿ ಜೂ.13ರ ಸೋಮವಾರದಂದು ಬ್ಯಾಂಕ್ ತೆರೆದಾಗ ತಾವು ಸೆಕ್ಯೂರಿಟಿ ಐಟಂಗಳನ್ನು ಪರಿಶೀಲನೆ ನಡೆಸಿದಾಗ ಎಟಿಎಂ ಕೇಂದ್ರದಲ್ಲಿದ್ದ ಪ್ರಿಂಟರ್ ಕಳ್ಳತನವಾಗಿರುವುದು ಗೊತ್ತಾಗಿದೆ ಎಂದು ಬ್ಯಾಂಕ್‌ನ ಸೀನಿಯರ್ ಮ್ಯಾನೇಜರ್ ಸಂಜೀವ್ ತಮ್ಮಣ್ಣ ಗುಂಜಿಕಾರ್ ಅವರು ನೀಡಿದ ದೂರನ್ನು ದಾಖಲಿಸಿಕೊಂಡಿರುವ ನಜರ್‌ಬಾದ್ ಠಾಣೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ನಿಧನ

ಎಸ್.ಎಸ್.ನಾಗಮ್ಮ



ಮೈಸೂರು,ಜೂ.15–ಮೈಸೂರಿನ ಒಂಟಿಕೊಪ್ಪಲು ನಿವಾಸಿ ದಿವಂಗತ ಡಾ.ಕೆ.ಪಿ.ನಾಗರಾಜೇಗೌಡರ ಪತ್ನಿ ಎಸ್.ಎಸ್.ನಾಗಮ್ಮ (86) ವಯೋಸಹಜ ಕಾಯಿಲೆಯಿಂದ ಮಂಗಳವಾರ (ಜೂ. 14) ನಿಧನರಾದರು. ಮೃತರು ಮಗ, ಸೊಸೆ, ಹೆಣ್ಣು ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬುಧವಾರ ಗೋಕುಲಂನ ಚಿರಶಾಂತಿಧಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರಲ್ಲಿ ವಿಶ್ವ ಹಿರಿಯರ ನಿಂದನೆ ತಡೆ ಜಾಗೃತಿ ದಿನಾಚರಣೆ

ಹಿರಿಯರ ನಿರ್ಲಕ್ಷ್ಯಕ್ಕೆ ಜಾಮೀನುರಹಿತ ಅರೆಸ್ಟ್ ವಾರೆಂಟ್

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ದೇವರಾಜ ಭೂತೆ

ಮೈಸೂರು,ಜೂ.15(ಪಿಎಂ)– ಹಿರಿಯರ ನಿಂದನೆ, ನಿರ್ಲಕ್ಷ್ಯ ಅವರ ಮಕ್ಕಳಿಂದಲೇ ಹೆಚ್ಚಾಗಿ ಆಗುತ್ತಿದ್ದು, ಈ ಸಂಬಂಧ ಸಾಕಷ್ಟು ದೂರುಗಳು ಬರುತ್ತವೆ. ಇಂತಹ ಪ್ರಕರಣಗಳು ವಾಸ್ತವದಲ್ಲಿ ದಾಖಲಾಗುವುದು ಕಡಿಮೆ. ಒಂದು ವೇಳೆ ಪ್ರಕರಣ ದಾಖಲಾದರೆ ಜಾಮೀನು ರಹಿತ ಅರೆಸ್ಟ್ ವಾರೆಂಟ್ ಜಾರಿಯಾಗಲಿದೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶರೂ ಆದ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ದೇವರಾಜ ಭೂತೆ ಹೇಳಿದರು.

ಮೈಸೂರಿನ ದೇವರಾಜ ಮಾರುಕಟ್ಟೆ ಬಳಿಯ ಚಿಕ್ಕ ಗಡಿಯಾರ ಆವರಣದಲ್ಲಿ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ರಾಷ್ಟ್ರೀಯ ಸೇವಾ ಯೋಜನೆ, ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರ, ನೈಟಿಂಗೇಲ್ಸ್ ಮೆಡಿಕಲ್ ಟ್ರಸ್ಟ್ ಸಂಯುಕ್ತಾಶ್ರಯದಲ್ಲಿ ಬುಧವಾರ ಹಮ್ಮಿಕೊಂಡಿದ್ದ ವಿಶ್ವ ಹಿರಿಯರ ನಿಂದನೆ ತಡೆ ಜಾಗೃತಿ ದಿನಾಚರಣೆ ಉದ್ಘಾಟಿಸಿ ಅವರು ಮಾತನಾಡಿದರು.

ನಮ್ಮ ಪರಂಪರೆ ಮತ್ತು ಸಂಸ್ಕೃತಿಯಲ್ಲಿ ಹಿರಿಯರನ್ನು ಗೌರವ ಮತ್ತು ಪ್ರೀತಿಯಿಂದ ಕಾಣಲಾಗಿದೆ. ಶ್ರೀರಾಮನು ತನ್ನ ತಂದೆಗೆ ಕೊಟ್ಟ ಮಾತಿನಂತೆ ವನವಾಸ ಮಾಡಿದ. ಶ್ರವಣಕುಮಾರ ತನ್ನ ಅಂಧ ತಂದೆ–ತಾಯಿಯನ್ನು ಹೆಗಲ ಮೇಲೆ ಹೊತ್ತು ತೀರ್ಥಯಾತ್ರೆ ಮಾಡಿಸಿದ. ಹಿರಿಯರ ವಿಚಾರದಲ್ಲಿ ಇಂತಹ ಉನ್ನತ ಪರಂಪರೆ ನಮ್ಮದು. ಇಂತಹ ನೆಲದಲ್ಲಿಯೂ ಹಿರಿಯರನ್ನು ನಿಂದಿಸದಂತೆ ಜಾಗೃತಿ ಮೂಡಿಸಬೇಕಾದ ಪರಿಸ್ಥಿತಿ ಬಂದಿರುವುದು ವಿಷಾದನೀಯ ಎಂದರು.

ಹಿರಿಯರಿಗೆ ಕಿರುಕುಳ ಹೆಚ್ಚಾಗಿ ಅವರ ಮಕ್ಕಳಿಂದಲೇ ಆಗುತ್ತಿರುತ್ತದೆ. ಪ್ರತಿಯೊಬ್ಬರು ಒಂದು ದಿನ ವಯೋವೃದ್ಧರಾಗಲೇಬೇಕು. ಇದನ್ನು ಮನಗಂಡು ನಮ್ಮ ಹಿರಿಯರನ್ನು ಕಾಳಜಿಯಿಂದ ನೋಡಿಕೊಳ್ಳಬೇಕು. ನಾವು ಚಿಕ್ಕವರಿದ್ದಾಗ ನಮ್ಮ ಪೋಷಕರು ಅದೆಷ್ಟು ಕಾಳಜಿಯಿಂದ ಸಾಕಿ ಸಲುಹಿದರು ಎಂಬುದನ್ನು ಅವಲೋಕಿಸಬೇಕು. ವೃದ್ಧಾಪ್ಯದಲ್ಲಿ ಮಕ್ಕಳ ಮನೋಭಾವ ಬರುತ್ತದೆ. ಹಾಗಾಗಿ ಹಿರಿಯರನ್ನು ಅವರ ಮಕ್ಕಳು ಪೋಷಕರಂತೆ ನೋಡಿಕೊಳ್ಳಬೇಕು ಎಂದು ತಿಳಿಸಿದರು.

ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಆರ್. ಮಾಲಿನಿ ಮಾತನಾಡಿ, ಹಿರಿಯರು ತಮ್ಮ ಮಕ್ಕಳಿಂದಲೇ ಶೋಷಣೆಗೆ ಒಳಗಾಗುವುದೇ ಹೆಚ್ಚು. ಕಿರುಕುಳ ಅನುಭವಿಸಿದರೂ ಮುಜುಗರದಿಂದ ಹೊರಗೆ ಹೇಳದೇ ನೋವು ತಿನ್ನುತ್ತಾರೆ. ಹಿರಿಯರ ಶೋಷಣೆ ಕಾನೂನಿನಡಿ ಅಪರಾಧವಾಗಲಿದೆ ಎಂದು ಹೇಳಿದರು.

ಮೈಸೂರು ವಿವಿ ಎನ್‌ಎಸ್‌ಎಸ್ ಸಂಯೋಜಕ ಡಾ. ಎಂ.ಬಿ.ಸುರೇಶ್ ಮಾತನಾಡಿ, ಕೋಲಾರ ಜಿಲ್ಲೆಯಲ್ಲಿ ಹಿರಿಯ ನಾಗರಿಕರ ಸಹಾಯವಾಣಿಗೆ (ಎಲ್ಡರ್ ಲೈನ್–14567) ವರ್ಷದಲ್ಲಿ 55 ಸಾವಿರ ಕರೆಗಳು ಬಂದಿರುವುದು ಮಾಧ್ಯಮಗಳಲ್ಲಿ ವರದಿಯಾಗಿದೆ. ಹಾಗಾದರೆ ರಾಜ್ಯ, ದೇಶ ಮತ್ತು ಪ್ರಪಂಚದಲ್ಲಿ ಇನ್ನೆಷ್ಟು ಹಿರಿಯರು ಸಮಸ್ಯೆಯಲ್ಲಿ ಇದ್ದಾರೆ ಎಂದು ಊಹಿಸಿದರೆ ನೋವಾಗುತ್ತದೆ. ಹಿರಿಯರ ಮೇಲಿನ ದೌರ್ಜನ್ಯ ತಡೆಯುವುದು ಅತ್ಯಗತ್ಯವಾಗಿದೆ ಎಂದರು.



ಮೈಸೂರು ಚಿಕ್ಕಗಡಿಯಾರ ಆವರಣದಲ್ಲಿ ಹಿರಿಯರ ನಿಂದನೆ ತಡೆ ಕುರಿತ ಜಾಗೃತಿ ಜಾಥಾಗೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ದೇವರಾಜ ಭೂತೆ ಹಸಿರು ನಿಶಾನೆ ತೋರಿದರು.

ನಿಂದನೆ ವಿರುದ್ಧ ದೂರಿಗೆ 14567ಕ್ಕೆ ಉಚಿತ ಕರೆ ಮಾಡಿ...

ಹಿರಿಯರು ಯಾವುದೇ ರೀತಿಯ ನಿಂದನೆ ಅನುಭವಿಸುತ್ತಿದ್ದರೆ ಅಥವಾ ನಿಂದನೆಗೆ ಒಳಗಾಗಿರುವ ಹಿರಿಯರ ಬಗ್ಗೆ ಮಾಹಿತಿ ಇದ್ದರೆ ಸಹಾಯವಾಣಿ ಸಂಖ್ಯೆ 14567ಗೆ ಉಚಿತ ಕರೆ ಮಾಡಬಹುದು.

ಇದೇ ವೇಳೆ ಹಮ್ಮಿಕೊಂಡಿದ್ದ ಜಾಗೃತಿ ಜಾಥಾಕ್ಕೆ ದೇವರಾಜ ಭೂತೆ ಚಾಲನೆ ನೀಡಿದರು. ಹಿರಿಯರನ್ನು ಕೆಟ್ಟದಾಗಿ ನಡೆಸಿಕೊಳ್ಳುವುದು ಅಪರಾಧ... ಹಿರಿಯರನ್ನು ಗೌರವಿಸಿ ಮತ್ತು ಪ್ರೀತಿಸಿ... ಎಂಬಿತ್ಯಾದಿ ಘೋಷವಾಕ್ಯ ಒಳಗೊಂಡ ಫಲಕಗಳನ್ನಿಡಿದು ವಿವಿಧ ಕಾಲೇಜುಗಳ ಎನ್‌ಎಸ್‌ಎಸ್ ಸ್ವಯಂ ಸೇವಕರು ಜಾಥಾ ನಡೆಸಿದರು. ಚಿಕ್ಕ ಗಡಿಯಾರದಿಂದ ಆರಂಭಗೊಂಡ ಜಾಥಾ, ದೇವರಾಜ ಅರಸು ರಸ್ತೆ, ಕೆಆರ್ ವೃತ್ತ, ಆಲ್ಬರ್ಟ್ ವಿಕ್ಟರ್ ರಸ್ತೆ ಚಾಮರಾಜ ಒಡೆಯರ್ ವೃತ್ತದಲ್ಲಿ ಸಾಗಿ, ಅದೇ ಮಾರ್ಗದಲ್ಲಿ ಹಿಂತಿರುಗಿ ಚಿಕ್ಕ ಗಡಿಯಾರ ಆವರಣದಲ್ಲಿ ಕೊನೆಗೊಂಡಿತು.

ಬೀದಿ ನಾಟಕ: ಚಿಕ್ಕ ಗಡಿಯಾರ ಆವರಣದಲ್ಲಿ ರಂಗಾಂತರಂಗ ಮೈಸೂರು ತಂಡದ ವತಿಯಿಂದ ಹಿರಿಯರ ನಿಂದನೆ ತಡೆ ಕುರಿತಂತೆ ಇದೇ ವೇಳೆ ಬೀದಿ ನಾಟಕ ಪ್ರದರ್ಶಿಸಲಾಯಿತು. ತಂಡದ ಕೀರ್ತಿರಾಜ್ ಮತ್ತು ರುಬೀನ್ ಸಂಜಯ್ ನೇತೃತ್ವದಲ್ಲಿ 8 ಮಂದಿ ಕಲಾವಿದರು ನಾಟಕದ ಮೂಲಕ ಹಿರಿಯರ ಬಗ್ಗೆ ಕಾಳಜಿ ವಹಿಸಬೇಕಿರುವ ಮಹತ್ವದ ಬಗ್ಗೆ ಸಂದೇಶ ಸಾರಿದರು. 20 ನಿಮಿಷ ಅವಧಿಯ ಕಿರು ನಾಟಕವನ್ನು 5 ಪ್ರದರ್ಶನ ನೀಡಿ, ಜಾಗೃತಿ ಮೂಡಿಸಲಾಯಿತು.

ಮಹಾರಾಣಿ ವಾಣಿಜ್ಯ ಕಾಲೇಜಿನ ಎನ್‌ಎಸ್‌ಎಸ್ ಕಾರ್ಯಕ್ರಮ ಅಧಿಕಾರಿ ಡಾ.ಗೋವಿಂದೇಗೌಡ, ಮಹಾರಾಜ ಕಾಲೇಜಿನ ಎನ್‌ಎಸ್‌ಎಸ್ ಕಾರ್ಯಕ್ರಮ ಅಧಿಕಾರಿ ಡಾ.ಪಿ.ಎಸ್.ಮಧುಸೂದನ್, ಮಹಾರಾಣಿ ವಿಜ್ಞಾನ ಕಾಲೇಜಿನ ಎನ್‌ಎಸ್‌ಎಸ್ ಕಾರ್ಯಕ್ರಮ ಅಧಿಕಾರಿ ರಮೇಶ್‌ಬಾಬು, ರಾಷ್ಟ್ರೀಯ ಹಿರಿಯ ನಾಗರಿಕರ ಸಹಾಯವಾಣಿಯ ಕ್ಷೇತ್ರ ನಿರ್ವಹಣಾಧಿಕಾರಿ (ಮೈಸೂರು–ಚಾಮರಾಜನಗರ ಜಿಲ್ಲೆ) ಆರ್.ವಿಕ್ರಮ್ ಮತ್ತಿತರರು ಹಾಜರಿದ್ದರು.

ಪ್ರಧಾನಿ ಮೋದಿ ಗಮನ ಸೆಳೆಯಲು ರೈತರಿಂದ ಕರ್ಮಯೋಗಿಗಳ ಕಾಯಕ ದಿನ ಆಚರಣೆ

ಜೂ.20ರಂದು ಗಾಂಧಿ ಪುತ್ಥಳಿ ಬಳಿ ತರಕಾರಿ, ಹಣ್ಣು, ದವಸ ಧಾನ್ಯ ಮಾರಾಟ

ಮೈಸೂರು, ಜೂ.15(ಆರ್‌ಕೆಬಿ)– ಪ್ರಧಾನಮಂತ್ರಿ ನರೇಂದ್ರ ಮೋದಿ ಮೈಸೂರು ಭೇಟಿ ಸಂದರ್ಭದಲ್ಲಿ ಅವರ ಗಮನ ಸೆಳೆಯಲು ಜೂ.20ರಂದು ಮೈಸೂರಿನಲ್ಲಿ ಕರ್ಮಯೋಗಿಗಳ ಕಾಯಕ ದಿನ ಆಚರಿಸಲಾಗುವುದು ಎಂದು ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರೈತರ ಬೆಳೆಗಳಿಗೆ ಬೆಲೆ ಖಾತರಿಯ ಶಾಸನ ಜಾರಿಗೊಳಿಸಬೇಕೆಂದು ಆಗ್ರಹಿಸಿ ನರೇಂದ್ರ ಮೋದಿ ಅವರ ಗಮನ ಸೆಳೆಯಲು ಈ ಕಾರ್ಯಕ್ರಮ ಆಯೋಜಿಸಲಾಗಿದೆ. ಅಂದು ಮೈಸೂರು ನ್ಯಾಯಾಲಯದ ಎದುರಿನ ಗಾಂಧಿ ಪುತ್ಥಳಿ ಬಳಿ ತರಕಾರಿ, ಹಣ್ಣು, ದವಸ ಧಾನ್ಯ ಮಾರಾಟ ಮಾಡುವ ಮೂಲಕ ಪ್ರಧಾನಿ ಗಮನ ಸೆಳೆಯಲಾಗುವುದು ಎಂದರು.

ಈ ಹಿಂದೆ ಕೇಂದ್ರದಲ್ಲಿ ಅಧಿಕಾರಕ್ಕೆ ಬರುವ ಮೊದಲು ನರೇಂದ್ರ ಮೋದಿ ಅವರು ಡಾ.ಸ್ವಾಮಿನಾಥನ್ ವರದಿ ಜಾರಿಗೊಳಿಸುವುದಾಗಿ ನೀಡಿದ್ದ ಭರವಸೆ ಈಡೇರಿಲ್ಲ. ಸುಪ್ರೀಂಕೋರ್ಟ್‌ನಲ್ಲಿಯೂ ವರದಿ ಜಾರಿ ಅಸಾಧ್ಯ ಎಂದು ಅಫಿಡವಿಟ್ ಸಲ್ಲಿಸಿರುವುದು ಬೇಸರದ ಸಂಗತಿಯಾಗಿದೆ ಎಂದ ಅವರು, ಮತ್ತೊಮ್ಮೆ ಅಧಿಕಾರಕ್ಕೆ ಬರುವ ವೇಳೆ 2022ರ ವೇಳೆಗೆ ರೈತರ ಆದಾಯ ದ್ವಿಗುಣಗೊಳಿಸುವುದಾಗಿ ನೀಡಿದ್ದ ಭರವಸೆ ಸಹಾ ಈಡೇರಿಸಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ರೈತರಿಗೆ ಸಾಲ ನೀಡಲು ಸಿಬಿಲ್ ಸ್ಕೋರ್ ಉತ್ತಮವಾಗಿರಬೇಕೆಂಬ ನಿಯಮ ಬ್ಯಾಂಕ್‌ಗಳು ಅನುಸರಿಸುತ್ತಿರುವ ಕಾರಣ ರೈತರಿಗೆ ಸಾಲ ದೊರೆಯುತ್ತಿಲ್ಲ. ಈಗಾಗಲೇ ಹಲವಾರು ಬಾರಿ ಬೆಳೆ ನಷ್ಟ ಎದುರಿಸಿರುವ ರೈತರಿಗೆ ಸಕಾಲದಲ್ಲಿ ಸಾಲ ಪಾವತಿಸಲು ಸಾಧ್ಯವಾಗಿರದ ಕಾರಣ ಸಿಬಿಲ್ ಸ್ಕೋರ್ ಉತ್ತಮವಾಗಿಲ್ಲ. ಹೀಗಾಗಿ ಬ್ಯಾಂಕ್‌ಗಳಿಂದ ಸಾಲ ದೊರೆಯುತ್ತಿಲ್ಲ. ಆದ್ದರಿಂದ ಈ ನಿಯಮ ಕೈಬಿಡುವಂತೆ ಆಗ್ರಹಿಸಿ ಆರ್‌ಬಿಐಗೆ ಹತ್ತು ದಿನಗಳ ಗಡುವು ನೀಡಲಾಗುವುದು. ಕ್ರಮ ಕೈಗೊಳ್ಳದಿದ್ದಲ್ಲಿ ಬೆಂಗಳೂರಿನ ಆರ್‌ಬಿಐ ಕಚೇರಿಗೆ ಮುತ್ತಿಗೆ ಹಾಕಲಾಗುವುದು ಎಂದು ಎಚ್ಚರಿಕೆ ನೀಡಿದರು. ಸುದ್ದಿಗೋಷ್ಠಿಯಲ್ಲಿ ಪದಾಧಿಕಾರಿಗಳಾದ ಅತ್ತಹಳ್ಳಿ ದೇವರಾಜ್, ಹಳ್ಳಿಕೆರೆಹುಂಡಿ ಭಾಗ್ಯರಾಜ್, ಕಿರಗಸೂರು ಶಂಕರ್, ಲಕ್ಷ್ಮಿಪುರಂ ವೆಂಕಟೇಶ್, ಬರಡನಪುರ ನಾಗರಾಜ್ ಉಪಸ್ಥಿತರಿದ್ದರು.



ಎರಡು ದಿನದ ಚೆಸ್ ಪಂದ್ಯಾವಳಿಗೆ ಚಾಲನೆ

ಮೈಸೂರು, ಜೂ. 15–ಭಾರತೀಯ ಕ್ರೀಡಾ ಪ್ರಾಧಿಕಾರ, ಕರ್ನಾಟಕ ರಾಜ್ಯ ಚೆಸ್ ಅಸೋಸಿಯೇಷನ್ ವತಿಯಿಂದ ಏರ್ಪಡಿಸಲಾಗಿದ್ದ 15 ವರ್ಷ ಒಳಪಟ್ಟ ಬಾಲಕಿಯರ ಮುಕ್ತ ಚೆಸ್ ಪಂದ್ಯಾವಳಿಯನ್ನು ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಡಾ.ಕೆ.ಸುರೇಶ್ ಉದ್ಘಾಟಿಸಿದರು. ನಗರದ ಯಾದವಗಿರಿಯ ದಾಸ್ ಪ್ರಕಾಶ್ ಹೋಟೆಲ್‌ನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ನೂರಾರು ಸ್ಪರ್ಧಾಳುಗಳು ಭಾಗವಹಿಸಿ ಗಮನಸೆಳೆದರು.



ಈ ಸಂದರ್ಭದಲ್ಲಿ ಮಾತನಾಡಿದ ಡಾ.ಕೆ. ಸುರೇಶ್, ಮಾನಸಿಕವಾಗಿ ಮಕ್ಕಳನ್ನು ಸದೃಢಗೊಳಿಸಲು ಚೆಸ್ ಉತ್ತಮ ಕ್ರೀಡೆಯಾಗಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಈ ಕ್ರೀಡೆಯನ್ನು ಪ್ರೋತ್ಸಾಹಿಸಲು ಸಾಕಷ್ಟು ಯೋಜನೆಗಳನ್ನು ರೂಪಿಸಿವೆ. ಜತೆಗೆ ಇದರ ಮೂಲಕವೂ ಮಕ್ಕಳು ಭವಿಷ್ಯ ರೂಪಿಸಿಕೊಳ್ಳಲು ಸಾಕಷ್ಟು ಅವಕಾಶಗಳಿವೆ. ಹೆಚ್ಚಿನ ಪೋಷಕರು ಇದನ್ನು ಅರ್ಥಮಾಡಿಕೊಂಡು ಮಕ್ಕಳಲ್ಲಿ ಕ್ರೀಡಾಸಕ್ತಿ ಬೆಳೆಸಬೇಕು ಎಂದರು. ಜೂ.16ರಂದು ನಡೆಯುವ ಸಮಾರೋಪ ಸಮಾರಂಭದಲ್ಲಿ ವಿಜೇತರಿಗೆ ಬಹುಮಾನ ವಿತರಣೆ ಮಾಡಲಾಗುವುದು. ರೋಟೋರಿಯನ್‌ಗಳಾದ ಶಕುಂತಲಾ, ವಿಕ್ರಮ್ ದಾಸ್, ಪಂದ್ಯಾವಳಿಯ ಅಸೋಸಿಯೇಷನ್‌ನ ಉಪಾಧ್ಯಕ್ಷ ನಾಗೇಂದ್ರ, ಮುರುಳೀದರ್ ಸೇರಿದಂತೆ ಇನ್ನಿತರರು ಭಾಗವಹಿಸಿದ್ದರು.

ಹಳೆ ಪಠ್ಯವನ್ನೇ ಮುಂದುವರೆಸಲು ಆಗ್ರಹಿಸಿ ಮೈಸೂರಲ್ಲಿ ಪ್ರತಿಭಟನೆ

ಮೈಸೂರು,ಜೂ.15(ಪಿಎಂ)–ರೋಹಿತ್ ಚಕ್ರತೀರ್ಥ ನೇತೃತ್ವದ ಸಮಿತಿ ಪರಿಷ್ಕರಿಸಿರುವ ಪಠ್ಯಗಳನ್ನು ಕೈಬಿಟ್ಟು ಹಳೇ ಪಠ್ಯ ಪುಸ್ತಕಗಳನ್ನೇ ಮುಂದುವರೆಸಬೇಕು ಹಾಗೂ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ರಾಜೀನಾಮೆ ನೀಡಬೇಕೆಂದು ಒತ್ತಾಯಿಸಿ ಕರ್ನಾಟಕ ಭೀಮ್ ಸೇನೆ ವತಿಯಿಂದ ಬುಧವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು ಡಿಸಿ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಬರಗೂರು ರಾಮಚಂದ್ರಪ್ಪ ನೇತೃತ್ವದ ಸಮಿತಿಯು ಸಂವಿಧಾನದ ಆಶಯಗಳಿಗೆ ಅನುಗುಣವಾಗಿ ಪರಿಷ್ಕರಿಸಿದ್ದ ಪಠ್ಯವನ್ನು ಮಕ್ಕಳು ಕಲಿಯುತ್ತಿದ್ದರು. ಆದರೆ ಬಿಜೆಪಿ ಸರ್ಕಾರ ಯಾವುದೇ ಅರ್ಹತೆ ಇಲ್ಲದ ರೋಹಿತ್ ಚಕ್ರತೀರ್ಥ ನೇತೃತ್ವದಲ್ಲಿ ಪಠ್ಯಪುಸ್ತಕ ಪರಿಷ್ಕರಣೆ ಸಮಿತಿ ರಚಿಸಿ, ಸತ್ಯಗಳನ್ನು ತಿರುಚಲು ಅವಕಾಶ ನೀಡಿತು ಎಂದು ಆಕ್ರೋಶ ವ್ಯಕ್ತಪಡಿಸಿದರು.

ಅಂಬೇಡ್ಕರ್ ಅವರನ್ನು 'ಸಂವಿಧಾನ ಶಿಲ್ಪಿ' ಎಂದು ಕರೆದಿರುವುದನ್ನು 9ನೇ ತರಗತಿಯ ಸಮಾಜ ವಿಜ್ಞಾನ ಪಠ್ಯದಲ್ಲಿ ಕೈಬಿಟ್ಟು ಅವರಿಗೆ ಅಪಮಾನ ಮಾಡಲಾಗಿದೆ. ಅಲ್ಲದೆ, ಬಸವಣ್ಣ, ರಾಷ್ಟ್ರಕವಿ ಕುವೆಂಪು, ನಾರಾಯಣಗುರು, ಟಿಪ್ಪು ಸುಲ್ತಾನ್, ಸಾವಿತ್ರಿಬಾ ಫುಲೆ ಸೇರಿದಂತೆ ಮೊದಲಾದ ಮಹನೀಯರ ವಿಚಾರಧಾರೆಗಳನ್ನು ತಿರುಚಲಾಗಿದೆ. ರೋಹಿತ್ ಚಕ್ರತೀರ್ಥ ನೇತೃತ್ವದ ಸಮಿತಿ ಇಂತಹ ಕೃತ್ಯ ಎಸಗಿದ್ದು, ಸದರಿ ಸಮಿತಿ ವಜಾಗೊಳಿಸಿ, ರೋಹಿತ್ ಚಕ್ರತೀರ್ಥ ಎಂಬಾತನನ್ನು ಬಂಧಿಸಬೇಕು ಎಂದು ಒತ್ತಾಯಿಸಿದರು.

ಸಂಘಟನೆಯ ಜಿಲ್ಲಾಧ್ಯಕ್ಷ ಅಶೋಕ್‌ಕುಮಾರ್, ಗೌರವಾಧ್ಯಕ್ಷ ಸಿ.ಮಂಜುನಾಥ್, ಉಪಾಧ್ಯಕ್ಷ ಮಂಜು ಮಾಗುಡಿಲು ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.



ಮೈಸೂರು ಡಿಸಿ ಕಚೇರಿ ಎದುರು ಕರ್ನಾಟಕ ಭೀಮ್ ಸೇನೆ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಟಿ.ನರಸೀಪುರ ತಹಸೀಲ್ದಾರ್ ಕಚೇರಿ ವ್ಯಾಪ್ತಿಯ ಅಧಿಕಾರಿ, ಸಿಬ್ಬಂದಿ ವಿರುದ್ಧ ಲಂಚ ಆರೋಪ; ಪ್ರತಿಭಟನೆ



ಮೈಸೂರು ಡಿಸಿ ಕಚೇರಿ ಎದುರು ಕರ್ನಾಟಕ ವೀರಕೇಸರಿ ಪಡೆಯಿಂದ ಪ್ರತಿಭಟನೆ.

ಮೈಸೂರು,ಜೂ.15(ಪಿಎಂ)– ಜಿಲ್ಲೆಯ ಟಿ.ನರಸೀಪುರ ತಹಸಿಲ್ದಾರ್ ಕಚೇರಿ ವ್ಯಾಪ್ತಿಯ ಅಧಿಕಾರಿ ಮತ್ತು ಸಿಬ್ಬಂದಿ ಲಂಚಕ್ಕಾಗಿ ಸಾರ್ವಜನಿಕರನ್ನು ಪೀಡಿಸುತ್ತಿದ್ದಾರೆ ಎಂದು ಆರೋಪಿಸಿ ಕರ್ನಾಟಕ ವೀರಕೇಸರಿ ಪಡೆ ವತಿಯಿಂದ ಬುಧವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು ಡಿಸಿ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಟಿ.ನರಸೀಪುರ ತಹಸೀಲ್ದಾರ್ ಕಚೇರಿ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರಾಮ ಲೆಕ್ಕಾಧಿಕಾರಿಗಳು, ರಾಜಸ್ವ ನಿರೀಕ್ಷಕರು ಹಾಗೂ ಸಿಬ್ಬಂದಿ ಸಾರ್ವಜನಿಕರ ಕೆಲಸ ಕಾರ್ಯಗಳನ್ನು ಮಾಡಲು ಲಂಚಕ್ಕೆ ಪೀಡಿಸುತ್ತಿದ್ದಾರೆ ಎಂದು ಆರೋಪಿಸಿದರು. ಹಣ ನೀಡಿದರೆ ಮಾತ್ರ ಸಾರ್ವಜನಿಕರ ಕೆಲಸ ಕಾರ್ಯ ಮಾಡಿಕೊಡುತ್ತಿದ್ದು, ಹಣ ನೀಡದಿದ್ದರೆ, ಸಾರ್ವಜನಿಕರು ಅರ್ಜಿಯೊಂದಿಗೆ ಲಗತ್ತಿಸಿದ ಅಗತ್ಯ ದಾಖಲೆಗಳ ಪೈಕಿ ಯಾವುದಾದರೊಂದನ್ನು ತಾವೇ ಕಿತ್ತು ಹಾಕಿ, ದಾಖಲಾತಿ ಲಗತ್ತಿಸಿಲ್ಲವೆಂದು ಸಬೂಬು ಹೇಳಿ, ಕಚೇರಿಯಿಂದ ಕಚೇರಿಗೆ ಅಲೆಯುವಂತೆ ಮಾಡುತ್ತಿದ್ದಾರೆ ಎಂದು ದೂರಿದರು. ಬನ್ನೂರು ವೃತ್ತದ ಗ್ರಾಮ ಲೆಕ್ಕಾಧಿಕಾರಿ ಸೋಮಶೇಖರ್ ಲಂಚಕ್ಕಾಗಿ ಸಾರ್ವಜನಿಕರನ್ನು ತೀವ್ರವಾಗಿ ಪೀಡಿಸುತ್ತಿದ್ದಾರೆ. ಐದಾರು ವರ್ಷಗಳಿಂದ ಇದೇ ಸ್ಥಳದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಇವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ಟಿ.ನರಸೀಪುರ ತಹಸೀಲ್ದಾರ್ ಅವರಿಗೆ ಸಂಘಟನೆಯಿಂದ ಈ ಹಿಂದೆಯೇ ದೂರು ನೀಡಿದ್ದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಕಿಡಿಕಾರಿದರು.

ಲಂಚಕ್ಕಾಗಿ ಸಾರ್ವಜನಿಕರನ್ನು ಪೀಡಿಸುತ್ತಿರುವ ಗ್ರಾಮಲೆಕ್ಕಾಧಿಕಾರಿಗಳು, ರಾಜಸ್ವ ನಿರೀಕ್ಷಕರು ಹಾಗೂ ನಾಡಕಚೇರಿ ಸಿಬ್ಬಂದಿ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು. 5ರಿಂದ 10 ವರ್ಷಗಳಿಂದ ಒಂದೇ ಸ್ಥಳದಲ್ಲಿ ಬೇರೂರಿರುವ ಭ್ರಷ್ಟ ಅಧಿಕಾರಿಗಳನ್ನು ಬೇರೆಡೆಗೆ ವರ್ಗಾವಣೆ ಮಾಡಿ, ಪ್ರಾಮಾಣಿಕ ಅಧಿಕಾರಿಗಳನ್ನು ನಿಯೋಜಿಸಿ, ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆ ನಿವಾರಿಸಬೇಕು ಎಂದು ಒತ್ತಾಯಿಸಿದರು. ಪಡೆ ಅಧ್ಯಕ್ಷ ಮಧುವನ ಚಂದ್ರು, ಉಪಾಧ್ಯಕ್ಷ ಎಂ.ಕುಮಾರ್, ಕಾರ್ಯದರ್ಶಿ ಎಸ್.ಮಹದೇವ್, ಟಿ.ನರಸೀಪುರ ತಾಲೂಕು ಅಧ್ಯಕ್ಷ ನಟರಾಜು ಸೇರಿದಂತೆ ಟಿ.ನರಸೀಪುರ ತಾಲೂಕಿನ ನಿವಾಸಿಗಳು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

16.06.2022 ಗುರುವಾರ, ಮಳೆ ನಕ್ಷತ್ರ : ಮೃಗಶಿರ 08.06.2022 ರಿಂದ 21.06.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಕೃಷ್ಣ ಪಕ್ಷ
ತಿಥಿ: ದ್ವಿತೀಯ, ನಕ್ಷತ್ರ : ಪೂಷ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

■ **ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ :** ಬೇಸಿಗೆ ಮೇಳ–2022, ದಸರಾ ವಸ್ತುಪ್ರದರ್ಶನ ಮೈದಾನ, ಮಧ್ಯಾಹ್ನ 3.30ರಿಂದ ರಾತ್ರಿ 9 ಗಂಟೆಯವರೆಗೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಅಧ್ಯಾತ್ಮ ರಾಮಾಯಣ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20ಗೀತಾರಾಧನ, 6.30 ಮೈಸೂರಿನ ಯೋಗ ವಿದ್ಯಾ ಪರಂಪರೆ–ಮಾಲಿಕೆ, ಲೇಖನ ಪ್ರಸ್ತುತಿ– ಡಾ. ಎ.ಎಸ್.ಚಂದ್ರಶೇಖರ್, 6.35 ಹಾಗೂ ಸಂಜೆ 5.00ಕ್ಕೆ "ಒಂದೇ ಕಥೆ" ವಿವಿಧ ಮುಖ– ಬಾನುಲಿ ಸರಣೀ, ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ, ಗಾಯನ– ಪಿ. ಸುರಭಿ, ದೀಪಿಕಾ ಪಾಂಡುರಂಗಿ, ಅಂಬಯ್ಯನುಲಿ, ವ್ಯಾಖ್ಯಾನ– ಡಾ.ಬಿ.ವಿ. ವಸಂತಕುಮಾರ್, 9.30 ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ದೈನಂದಿನ ವಿಶೇಷ ಕಾರ್ಯಕ್ರಮ ಸರಣಿ "ಸ್ವಾತಂತ್ರ್ಯ ಚಳವಳಿಯ ಪಯಣ– ಆಕಾಶವಾಣಿಯೊಂದಿಗೆ", 10.00 ಪ್ರೊ.ಆರ್.ವಿಶ್ವೇಶ್ವರನ್ – ವೀಣಾವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ, 11.15 ಯೋಗದತ್ತ ಜಗತ್ತು– ವಿಶೇಷ ಸರಣಿ **ಮಧ್ಯಾಹ್ನ:** 12.05 ವನಿತಾ ವಿಹಾರ, 12.30 ದೇವರನಾಮ, 12.45 ಚಟ್ ಪಟ್ ಚುರುಮುರಿ, ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ್ ಮತ್ತು ಕೆ.ಬಿ. ಮೀನಾ, 1.20 ಅಂತಾರಾಷ್ಟ್ರೀಯ ಯೋಗ ದಿನದ ಅಂಗವಾಗಿ ವಿಶೇಷ ಕಾರ್ಯಕ್ರಮ "ಎಲ್ಲರಿಗಾಗಿ ಯೋಗ", 3.00 ರಾಗಲಹರಿ– ವರ್ಷದ ಸಂಭ್ರಮ, ಪ್ರಸ್ತುತಿ– ಜಿ. ಪುಷ್ಪಲತಾ, 4.00 ಹಳ್ಳಿ ಹಾಡು– ಭಾಗವಹಿಸುವವರು ಚಿಕ್ಕಮಾದಮ್ಮ ಮತ್ತು ತಂಡ, 6.50 ಕೃಷಿರಂಗ–ಕಿಸಾನ್‌ವಾಣಿ, ಸಮಗ್ರ ಕೃಷಿಯಲ್ಲಿ ಸಂತೃಪ್ತ ಬದುಕು–ಕೃಷಿಕ ದಂಪತಿ ಸಿ.ಪಿ. ಕೃಷ್ಣ ಹಾಗೂ ವಿ.ಬಿ.ಮಂಜುಳಾ ಅವರೊಡನೆ ಮಾತುಕತೆ, 9.00 ಯುವವಾಣಿ "ಹಲೋ ಯುವವಾಣಿ" ಅಮೃತ ಸ್ವಾತಂತ್ರ್ಯ ಮಾಲಿಕೆಯಲ್ಲಿ ವಿಶೇಷ ರಸಪ್ರಶ್ನೆ, ನಡೆಸಿಕೊಡುತ್ತಾರೆ ನಿವೇದಿತಾ ಹೆಚ್., 9.30 ಕನ್ನಡ ಭಾರತಿ, 10.00 ನಾಟಕ, 10.30 ಸವಿನೆನಪು

ಶಿಥಿಲಾವಸ್ಥೆಯಲ್ಲಿ ಮೈಸೂರು ಸರ್ಕಾರಿ ಅತಿಥಿಗೃಹದ ಪಾರಂಪರಿಕ ಹೆಬ್ಬಾಗಿಲು

ಎದ್ದೇಳಿ ಪಾಲಿಕೆ ಅಧಿಕಾರಿಗಳೇ





ಮೈಸೂರು, ಜೂ. 15(ಆರ್‌ಕೆ)– ಅಂತರ ರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಪಾಲ್ಗೊಳ್ಳಲು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಮೈಸೂರಿಗೆ ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಸಾಂಸ್ಕೃತಿಕ ನಗರಿ ಸಿಂಗಾರಗೊಳ್ಳುತ್ತಿದ್ದರೂ, ನಗರದ ಹೃದಯ ಭಾಗದಲ್ಲಿರುವ ಸರ್ಕಾರಿ ಅತಿಥಿಗೃಹದ ಪಾರಂಪರಿಕ ಸ್ವಾಗತ ಕಮಾನು ಗೇಟ್ ಅರ್ಥಾತ್ ಹೆಬ್ಬಾಗಿಲು ಮಾತ್ರ ನಿರ್ಲಕ್ಷ್ಯಕ್ಕೊಳಗಾಗಿದೆ.

ಜೂನ್ 20 ಮತ್ತು 21ರಂದು ಮೈಸೂರಿನ ಹಲವು ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿರುವುದರಿಂದ ಪ್ರಧಾನಿಗಳು ಸಂಚರಿಸುವ ಮಾರ್ಗ, ಸರ್ಕಲ್, ಜಂಕ್ಷನ್‌ಗಳು, ವಾಸ್ತವ್ಯ ಹೂಡುವ ಸ್ಥಳದ ಸುತ್ತಮುತ್ತಲಿನ ಪ್ರದೇಶವನ್ನು ಸ್ವಚ್ಛಗೊಳಿಸಿ ಅಭಿವೃದ್ಧಿಪಡಿಸುತ್ತಿರುವ ಮೈಸೂರು ಮಹಾನಗರ ಪಾಲಿಕೆಯು, ಬಣ್ಣ–ಬಣ್ಣದ ವಿದ್ಯುತ್ ದೀಪಾಲಂಕಾರಗಳಿಂದ ಶೃಂಗಾರ ಮಾಡುತ್ತಿದೆ.

ಆದರೆ ನಗರದ ಹೃದಯ ಭಾಗದಲ್ಲಿರುವ ನಜರ್‌ಬಾದ್‌ನ ಸರ್ಕಾರಿ ಅತಿಥಿಗೃಹದ ಉತ್ತರ ದ್ವಾರದ ಪಾರಂಪರಿಕ ಆರ್ಚ್ ಗೇಟ್ ಶಿಥಿಲಗೊಂಡಿದ್ದು, ಹೆಬ್ಬಾಗಿಲ ಮೇಲೆ ಅರಳಿಮರದ ಗಿಡಗಳು ಬೇರು ಬಿಟ್ಟಿರುವುದರಿಂದ ಸ್ವಾಗತ ಕಮಾನಿನ ಅಲ್ಲಲ್ಲಿ ಬಿರುಕು ಬಿಟ್ಟಿದೆಯಲ್ಲದೆ, ಪ್ಲಾಸ್ಟಿಂಗ್ ಸಹ ಕಿತ್ತುಬಿದ್ದಿದೆ.

ಮಳೆ, ಬಿಸಿಲಿಗೆ ಇಡೀ ಆರ್ಚ್ ಗೇಟ್ ಪೇಂಟಿಂಗ್ಸ್ ಹಾಳಾಗಿ ಪಾಚಿ ಕಟ್ಟಿದ್ದರೂ ಪಾಲಿಕೆ ಅಧಿಕಾರಿಗಳ ನಿರ್ಲಕ್ಷ್ಯದಿಂದಾಗಿ ಹಳೇ ಪಾರಂಪರಿಕ ನಿರ್ಮಾಣ ಶಿಥಿಲಗೊಂಡು ಕುಸಿದು ಬೀಳುವ ಸ್ಥಿತಿಗೆ ತಲುಪಿದೆ. ಪ್ರತೀದಿನ ಬೆಂಗಳೂರಿಗೆ ಹೋಗುವ ಮತ್ತು ಮೈಸೂರಿಗೆ ಬರುವ ಕೆಎಸ್‌ಆರ್‌ಟಿಸಿ ಬಸ್ಸುಗಳು ಸೇರಿದಂತೆ ಎಲ್ಲಾ ವಾಹನಗಳೂ ಸರ್ಕಾರಿ ಅತಿಥಿಗೃಹದ ಉತ್ತರ ಗೇಟ್ ಮೂಲಕವೇ ಹಾದು ಹೋಗುತ್ತವೆ.

ಪ್ರವಾಸಿಗರು ಪ್ರತೀದಿನ ಇದೇ ಮಾರ್ಗದಲ್ಲಿ ಸಂಚರಿಸುತ್ತಾರೆ. ಇದೀಗ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಮೈಸೂರಿಗೆ ಆಗಮಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಮೈಸೂರಿನ ಬಹುತೇಕ ರಸ್ತೆಗಳನ್ನು ರಿಪೇರಿ ಮಾಡಿ ಅಭಿವೃದ್ಧಿಪಡಿಸುತ್ತಿರುವ ಪಾಲಿಕೆ ಅಧಿಕಾರಿಗಳು, ಸಿದ್ಧತೆಗಾಗಿಯೇ ಕೋಟ್ಯಾಂತರ ರೂ. ಖರ್ಚು ಮಾಡುತ್ತಿರುವಾಗ ಶಿಥಿಲಾವಸ್ಥೆಯಲ್ಲಿದ್ದು, ಗಿಡಗಂಟಿ ಬೆಳೆದುಕೊಂಡಿರುವ ಹೆರಿಟೇಜ್ ಆರ್ಚ್ ಗೇಟ್ ನಿರ್ವಹಣೆಯನ್ನು ಮರೆತಿರುವುದು ಶೋಚನೀಯ.

ಕೇವಲ ಗೋಡೆ ಮೇಲೆ ಬೆಳೆದಿರುವ ಗಿಡ ಕಿತ್ತು, ಕೆಳಬಿದ್ದಿರುವೆಡೆ ರೀ–ಪ್ಲಾಸ್ಟಿಂಗ್ ಮಾಡಿ ಸುಣ್ಣ–ಬಣ್ಣ ಬಳಿದರೆ ಸಾಕು. ಈ ಪಾರಂಪರಿಕ ನಿರ್ಮಾಣದ ಸಂರಕ್ಷಣೆಯಾಗಿ ನೋಡಲೂ ಸುಂದರವಾಗಿ ಕಾಣುತ್ತದೆ. ಕೇವಲ ಅಲ್ಪ ಹಣದಲ್ಲಿ ಈ ಹಳೆಯ ನಿರ್ಮಾಣವನ್ನು ಸುರಕ್ಷಿತವಾಗಿ ಉಳಿಸಬಹುದಾಗಿದ್ದರೂ, ಇಚ್ಛಾಶಕ್ತಿ ಕೊರತೆಯಿಂದಾಗಿ ಪಾರಂಪರಿಕ ನಿರ್ಮಾಣ ಶಿಥಿಲಾವಸ್ಥೆಯಲ್ಲಿದೆ.

ಈ ಕುರಿತು 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಆ ಭಾಗದ 27ನೇ ವಾರ್ಡ್ ಕಾರ್ಪೊರೇಟರ್ ರಫೀಕ್ ಅಹಮದ್ ಅವರು, ಪಾರಂಪರಿಕ ಆರ್ಚ್ ಗೇಟ್ ಗೋಡೆಯಲ್ಲಿ ಗಿಡ ಬೆಳೆದು ಪ್ಲಾಸ್ಟಿಂಗ್ ಕಳಚಿದೆ. ಈಗಲೇ ಪಾಲಿಕೆ ಇಂಜಿನಿಯರ್‌ಗಳನ್ನು ಕರೆಸಿ ತೋರಿಸಿ ತಡಮಾಡದೇ ಗಿಡ ತೆಗೆದು ರೀಪ್ಲಾಸ್ಟಿಂಗ್ ಮಾಡಿ ಬಣ್ಣ ಬಳಿಸಲು ಕ್ರಮ ವಹಿಸುತ್ತೇನೆ. ನಾಳೆಯಿಂದಲೇ ಕಾಮಗಾರಿ ಆರಂಭಿಸಿ ಪ್ರಧಾನಿಗಳು ಬರುವಷ್ಟರಲ್ಲಿ ಕೆಲಸ ಪೂರೈಸುತ್ತೇವೆ ಎಂದರು.

ಫೈವ್‌ಲೈಟ್ ಸರ್ಕಲ್‌ನಿಂದ ಹೈದರ್ ಅಲಿ ರಸ್ತೆವರೆಗಿನ ಅಬ್ಬಾ ರಸ್ತೆಯನ್ನು 6 ಪಥದ ರಸ್ತೆಯನ್ನಾಗಿ ಅಭಿವೃದ್ಧಿಗೊಳಿಸಿದ ಸಂದರ್ಭ 2020ರಲ್ಲಿ ಈ ಪಾರಂಪರಿಕ ಕಮಾನನ್ನು ಪಾರಂಪರಿಕ ತಜ್ಞರ ಸಲಹೆಯಂತೆ ಯಥಾಸ್ಥಿತಿಯಲ್ಲಿ ಕಾಯ್ದುಕೊಂಡು, ರಿಪೇರಿ ಮಾಡಿ ಅಭಿವೃದ್ಧಿಪಡಿಸಲಾಗಿತ್ತು.

ಸುರಕ್ಷತೆ ದೃಷ್ಟಿಯಿಂದ ಈ ಹೆಬ್ಬಾಗಿಲ ಸುತ್ತ ಕಬ್ಬಿಣದ ಗ್ರಿಲ್‌ಗಳನ್ನು ಅಳವಡಿಸಿದ್ದರು. ಪಾರಂಪರಿಕ ತಜ್ಞರ ಸಮಿತಿ ಹಾಗೂ ಹಿರಿಯ ನಾಗರಿಕರ ಒತ್ತಾಯದ ಮೇರೆಗೆ ರಿಪೇರಿ ಮಾಡಿಸಿದ್ದ ಪಾಲಿಕೆ ಅಧಿಕಾರಿಗಳು, ನಂತರ ಅತ್ತ ಗಮನಹರಿಸದೇ ನಿರ್ಲಕ್ಷ್ಯ ವಹಿಸಿದ ಕಾರಣ ಇದೀಗ ಅಲ್ಲಿ ಗಿಡಗಳು ಬೆಳೆದು ಶಿಥಿಲಗೊಂಡಿದೆ. ಪ್ರಧಾನಿಗಳ ಭೇಟಿಗೆ ದಿನಗಣನೆ ಆರಂಭವಾಗಿದ್ದರೂ ಅಧಿಕಾರಿಗಳಿಗೆ ಈ ಪಾರಂಪರಿಕ ಆರ್ಚ್ ಗೇಟ್‌ನ ಸೌಂದರ್ಯ ಕಾಪಾಡುವುದರತ್ತ ಗಮನ ಕೊಡದಿರುವ ಬಗ್ಗೆ ಹಿರಿಯ ನಾಗರಿಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ವೃದ್ಧರಿಗೆ ಆನ್‌ಲೈನ್ ವಂಚನೆ

ಕ್ರೆಡಿಟ್ ಕಾರ್ಡ್‌ನಲ್ಲಿ 86 ಸಾವಿರ ರೂ., ಪಾನ್ ನಂಬರ್ ಅಪ್‌ಡೇಟ್ ನೆಪದಲ್ಲಿ 2.24 ಲಕ್ಷ ಕನ್ನ

ಮೈಸೂರು, ಜೂ.15–ಶಾಪಿಂಗ್ ವೆಬ್‌ಸೈಟ್ ಕಸ್ಟಮರ್ ಕೇರ್ ನಂಬರ್ ಮೂಲಕ ವೃದ್ಧರೊಬ್ಬರ ಕ್ರೆಡಿಟ್ ಕಾರ್ಡ್ ನಂಬರ್ ಪಡೆದು 86 ಸಾವಿರ ರೂ. ಅಕ್ರಮವಾಗಿ ವರ್ಗಾವಣೆ ಮಾಡಿಕೊಂಡಿರುವ ಬಗ್ಗೆ ವರದಿಯಾಗಿದೆ. ಮೈಸೂರಿನ ಸಿದ್ಧಾರ್ಥನಗರ ಸನ್ಮಾರ್ಗ ರಸ್ತೆಯ ನಿವಾಸಿ ಬಿ.ಎ. ಟಾಟಾ (67) ಎಂಬುವರು Shopper stop ಎಂಬ ಶಾಪಿಂಗ್ ವೆಬ್‌ಸೈಟ್‌ನಲ್ಲಿ ಒಂದು ಪ್ರಾಡಕ್ಟ್ ಅನ್ನು ಖರೀದಿಸಿದ್ದರು. ಆದರೆ ಅದರ ಕ್ವಾಲಿಟಿ ಸರಿಯಿಲ್ಲದ ಕಾರಣ ಹಿಂತಿರುಗಿಸಿದ್ದಾರೆ. ತಮ್ಮ ಹಣ ಖಾತೆಗೆ ಜಮೆ ಆಗದ ಕಾರಣ ವೆಬ್‌ಸೈಟ್‌ನ ಕಸ್ಟಮರ್ ಕೇರ್ ನಂಬರ್‌ಗೆ ಕರೆ ಮಾಡಿದ್ದಾರೆ. ಕರೆ ಸ್ವೀಕರಿಸಿದ ವ್ಯಕ್ತಿಯು ಟಾಟಾ ಅವರ ಕ್ರೆಡಿಟ್ ಕಾರ್ಡ್ ಸಂಖ್ಯೆಯನ್ನು ಪಡೆದು ಅದರ ಮೂಲಕ 86555 ರೂ. ಅಕ್ರಮವಾಗಿ ವರ್ಗಾವಣೆ ಮಾಡಿಕೊಂಡಿದ್ದಾನೆ. ಮತ್ತೊಂದು ಪ್ರಕರಣದಲ್ಲಿ ಪಾನ್ ನಂಬರ್ ಅಪ್‌ಡೇಟ್ ಮಾಡುವಂತೆ ಮೊಬೈಲ್‌ಗೆ ಮೆಸೇಜ್ ಕಳುಹಿಸಿ 2.24 ಲಕ್ಷ ರೂ. ವರ್ಗಾವಣೆ ಮಾಡಿಕೊಳ್ಳಲಾಗಿದೆ. ದಟ್ಟಗಳ್ಳಿ 3ನೇ ಹಂತದ ನಿವಾಸಿ ಎಸ್.ಸಿ.ಮಹದೇವ್ (69) ಅವರ ಮೊಬೈಲ್‌ಗೆ ಪಾನ್ ನಂಬರ್ ಅಪ್‌ಡೇಟ್ ಮಾಡುವಂತೆ ಮೆಸೇಜ್ ಬಂದಿತ್ತು. ಅದನ್ನು ನಂಬಿದ ಅವರು, ಮೆಸೇಜ್‌ನ ಲಿಂಕ್ ಮೇಲೆ ಕ್ಲಿಕ್ ಮಾಡಿ ಓಟಿಪಿ ನಮೂದಿಸಿದಾಗ ಅವರ ಖಾತೆಯಿಂದ 2,24,999 ರೂ. ಅಕ್ರಮವಾಗಿ ವರ್ಗಾವಣೆಯಾಗಿದೆ. ಇವೆರಡೂ ಪ್ರಕರಣಗಳನ್ನು ದಾಖಲಿಸಿಕೊಂಡಿರುವ ಮೈಸೂರು ನಗರ ಸೆನ್ ಠಾಣೆ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ಜೂ.18, ಮೈಸೂರು ವಿವಿ ಶಿಕ್ಷಣ ಮಂಡಳಿ ಸಭೆ

ಮೈಸೂರು, ಜೂ.15–ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿ, ವಿಜ್ಞಾನ ಭವನ ಸಭಾಂಗಣದಲ್ಲಿ ಜೂ.18ರಂದು ಮಧ್ಯಾಹ್ನ 12.30ಕ್ಕೆ ಶಿಕ್ಷಣ ಮಂಡಳಿ ವಿಶೇಷ ಸಭೆಯನ್ನು ಕರೆಯಲಾಗಿದ್ದು, ಎಲ್ಲರೂ ಮಾಸ್ಕ್ ಧರಿಸಿ ಆಗಮಿಸುವಂತೆ ವಿವಿ ಉಪ ಕುಲಸಚಿವರು ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

ಇಂದು ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ

ಮೈಸೂರು,ಜೂ.15–ಮೈಸೂರಿನ ಲಕ್ಷ್ಮೀಪುರಂನಲ್ಲಿರುವ ಪ್ರೀತಿ ಕ್ಯಾನ್ಸರ್ ಸೆಂಟರ್‌ನಲ್ಲಿ ಜೂ.16ರಂದು ಬೆಳಗ್ಗೆ 10ರಿಂದ ರಾತ್ರಿ 8 ಗಂಟೆವರೆಗೆ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ದೂ. 0821–4259259 ಸಂಪರ್ಕಿಸಬಹುದು.

ಮೈಸೂರಲ್ಲಿ ಅಂತರರಾಷ್ಟ್ರೀಯ ಯೋಗ ದಿನಾಚರಣೆ ವೇದಿಕೆ ವಿವಾದ

ನಾನು ಹೇಳಿರುವುದು ಜನಪ್ರತಿನಿಧಿಗಳ ಪಟ್ಟಿ, ಗಣ್ಯರ ಪಟ್ಟಿ ಇನ್ನೂ ಸಿದ್ಧವಾಗುತ್ತಿದೆ

ರಾಜವಂಶಸ್ಥರ ಕಡೆಗಣನೆ ಆರೋಪಕ್ಕೆ ಸಂಸದ ಪ್ರತಾಪ್ ಸಿಂಹ ಹೇಳಿಕೆ

ಮೈಸೂರು,ಜೂ.15(ಆರ್‌ಕೆ)–ಪ್ರಧಾನಿ ನರೇಂದ್ರ ಮೋದಿ ಅವರು ಪಾಲ್ಗೊಳ್ಳುತ್ತಿರುವ ಅಂತರ ರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದ ವೇದಿಕೆಯಲ್ಲಿ ಪಾಲ್ಗೊಳ್ಳುವ ಜನಪ್ರತಿನಿಧಿಗಳ ಪಟ್ಟಿಯನ್ನಷ್ಟೇ ನಾನು ಹೇಳಿದ್ದೇನೆಯೇ ಹೊರತು, ಗಣ್ಯರ ಪಟ್ಟಿ ಇನ್ನೂ ಸಿದ್ಧವಾಗುತ್ತಿದೆ ಎಂದು ಸಂಸದ ಪ್ರತಾಪ್ ಸಿಂಹ ತಿಳಿಸಿದ್ದಾರೆ.

ಮೈಸೂರಿನ ಮಹಾರಾಣಿ ಕಾಮರ್ಸ್ ಕಾಲೇಜು ಬಳಿ ಸುದ್ದಿಗಾರರಿಗೆ ಪ್ರತಿಕ್ರಿಯೆ ನೀಡಿದ ಅವರು, ಯೋಗ ವೇದಿಕೆಯಲ್ಲಿ ರಾಜ ಮನೆತನದವರಿಗೆ ಅವಕಾಶವಿಲ್ಲ ಎಂಬ ಸುಳ್ಳು ಸುದ್ದಿ ಹರಡಿಸಲಾಗುತ್ತಿದೆ. ನಮಗೆ ಮೈಸೂರು ಮಹಾರಾಜರ ಬಗ್ಗೆ ಎಲ್ಲರಿಗಿಂತ ಹೆಚ್ಚು ಗೌರವವಿದೆ. ಮಾಜಿ ಸಿಎಂ ಸಿದ್ದರಾಮಯ್ಯ ಮಹಾರಾಜರ ಬಗ್ಗೆ ಹಗುರವಾಗಿ ಮಾತನಾಡಿದಾಗ ಮೊದಲು ಧ್ವನಿ ಎತ್ತಿದ್ದು ನಾನು ಎಂದರು.

ಸಿದ್ದರಾಮಯ್ಯರ ಹೇಳಿಕೆ ಖಂಡಿಸಲು ಬಹುತೇಕರು ಹೆದರುತ್ತಾರೆ. ಬಿಜೆಪಿ ಮಾತ್ರ ಮಹಾರಾಜರ ಪರ ನಿಂತಿತ್ತು. ಮೈಸೂರು ರೈಲು ನಿಲ್ದಾಣಕ್ಕೆ ಚಾಮರಾಜ ಒಡೆಯರ್ ಹೆಸರಿಡುತ್ತಿದ್ದೇವೆ. ವಿಮಾನ ನಿಲ್ದಾಣಕ್ಕೆ ನಾಲ್ವಡಿ ಕೃಷ್ಣರಾಜ ಒಡೆಯರ್ ಹೆಸರಿಡುತ್ತಿದ್ದೇವೆ. ಇದು ನಾವು ಮಹಾರಾಜರಿಗೆ ಕೊಡುವ ಗೌರವ. ಯಾವುದೋ ಒಂದು ಕಾಮೆಂಟ್ ಪೋಸ್ಟ್ ಮಾಡಿ ನಮಗೆ ಮಹಾರಾಜರ ಬಗ್ಗೆ ತಿಳಿ ಹೇಳಬೇಡಿ ಎಂದು ಪ್ರತಾಪ್ ಸಿಂಹ ಕಿಡಿಕಾರಿದರು.



ಪ್ರತಾಪ್ ಸಿಂಹ ಜೊತೆ ಚರ್ಚೆಗೆ ಬರೋದಿಲ್ಲ, ತಮ್ಮ ವಕ್ತಾರ ಲಕ್ಷ್ಮಣ ನನ್ನು ಕಳಿಸುತ್ತೇನೆ ಎನ್ನುವ ಸಿದ್ದರಾಮಯ್ಯರಿಗೆ ಬಾಯಿಲ್ಲವೇ? 48 ಗಂಟೆ ಮುಂಚೆ ಹೇಳಿ, ನಾನು ಏಕಾಂಗಿಯಾಗಿ ಚರ್ಚೆಗೆ ಬರುತ್ತೇನೆ. ನೀವು ಬೇಕಾದರೆ ದಂಡು ದಾಳಿಯೊಂದಿಗೆ ಬನ್ನಿ ಎಂದು ಸಿದ್ದರಾಮಯ್ಯರಿಗೆ ಆಹ್ವಾನ ನೀಡಿದ ಅವರು, ಮೈಸೂರಿಗೆ ವಾರಕ್ಕೊಮ್ಮೆ ಬಾಡೂಟಕ್ಕೆ, ಬೀಗರ ಊಟಕ್ಕೆ ಬರುತ್ತೀರಾ. ಅರ್ಧಗಂಟೆ ಬಿಡುವು ಮಾಡಿಕೊಂಡು ಚರ್ಚೆಗೆ ಬನ್ನಿ, ನೀವು ಮಾಡಿರುವ ಅಭಿವೃದ್ಧಿ ಕೆಲಸ ಹೇಳಿಕೊಳ್ಳಲು ಭಯವೇಕೇ ಎಂದು ಪ್ರಶ್ನಿಸಿದರು.

ಈ ಹಿಂದೆ ಬಜೆಟ್ ಮಂಡಿಸಿದ ಸಿಎಂಗಳ್ಯಾರೂ ತಾವು ಆರ್ಥಿಕ ತಜ್ಞರೆಂದು ಹೇಳಿಕೊಂಡಿರಲಿಲ್ಲ. ಆದರೆ, ಸಿದ್ದರಾಮಯ್ಯ ತಾನು ಆರ್ಥಿಕ ತಜ್ಞ ಎಂದು ಹೇಳಿ ಬೀಗುತ್ತಿದ್ದುದನ್ನು ನಾನು ಪ್ರಶ್ನಿಸಿದ್ದು ತಪ್ಪೇ ಎಂದ ಪ್ರತಾಪ್ ಸಿಂಹ, ಕಾಂಗ್ರೆಸ್‌ನವರು ಚಡ್ಡಿ ಸುಟ್ಟಾಯ್ತು, ಈಗ ನನ್ನ ಪೋಸ್ಟ್ ಸುಡುತ್ತಿದ್ದಾರೆ. ನನ್ನನ್ನು ರಾಜಕೀಯವಾಗಿ ಎದುರಿಸಲಾಗದೆ ಈ ರೀತಿ ವಿವಾದ ಮಾಡುತ್ತಿದ್ದಾರೆ ಎಂದು ಪ್ರತಾಪ್ ಸಿಂಹ ಆರೋಪಿಸಿದರು.

ನಾನು ಸಿದ್ದರಾಮಯ್ಯರನ್ನು ವೈಯಕ್ತಿಕವಾಗಿ ಟೀಕಿಸಿದ್ದೇನಷ್ಟೆ, ಕೇವಲ ಲಾ ಪ್ರಾಕ್ಟೀಸ್ ಮಾಡಿರುವ ವ್ಯಕ್ತಿ ಎಂದು ಹೇಳಿದ್ದೆ. ಅದರಲ್ಲಿ ವಕೀಲ ಸಮೂಹಕ್ಕೆ ಅವಮಾನ ಮಾಡುವ ಪ್ರಶ್ನೆ ಎಲ್ಲಿಂದ ಬರುತ್ತೆ ನನ್ನನ್ನು ಆರ್ಥಿಕ ತಜ್ಞನಲ್ಲ. ಬರೀ ಅಂಕಣಕಾರ ಎಂದರೆ ಅದು ಪತ್ರಕರ್ತರಿಗೆ ಮಾಡಿದ ಅವಮಾನವೇ? ಎಂದು ಅವರು ಪ್ರಶ್ನಿಸಿದರು.

ರಾಹುಲ್ ಗಾಂಧಿ ಇಡಿ ವಿಚಾರಣೆ ಸಂಬಂಧ ಪ್ರತಿಕ್ರಿಯಿಸಿದ ಪ್ರತಾಪ್ ಸಿಂಹ, ಈ ದೇಶದ ಕಾನೂನು ಎಲ್ಲರಿಗೂ ಒಂದೇ. ಕಾಂಗ್ರೆಸ್‌ನವರು ತನಿಖೆ ಎದುರಿಸಲಿ. ಈ ಹಿಂದೆ ಮೋದಿ ಸಿಎಂ ಆಗಿದ್ದಾಗ ವಿಚಾರಣೆ ಎದುರಿಸಿಲ್ಲವೇ? ಅಮಿತ್ ಷಾರನ್ನೂ ಒಂದು ಪ್ರಕರಣದಲ್ಲಿ ಕಾಂಗ್ರೆಸ್ ಫಿಟ್ ಮಾಡಿ ಜೈಲಿಗೆ ಕಳುಹಿಸಿತ್ತು. ಅದನ್ನು ಎದುರಿಸಿ ಅವರು ಗೆದ್ದು ಬಂದರು. ಕಾಂಗ್ರೆಸ್‌ನವರು ತಾವು ತಪ್ಪು ಮಾಡಿಲ್ಲವೆಂದರೆ ತನಿಖೆ ಎದುರಿಸಲು ಭಯವೇಕೇ ಎಂದರು.

ನಕ್ಕರೆ ಅದೇ ಸ್ವರ್ಗ

ಟೀಚರ್ : "ಏಯ್, ನಾನು ಪಾಠ ಮಾಡ್ತಾ ಇರಬೇಕಾದ್ರೆ ನೀನು ಯಾಕೆ ಮಾತಾಡ್ತಾ ಇದ್ದೀಯಾ?"

ವಿದ್ಯಾರ್ಥಿ : "ಇಲ್ಲ ಟೀಚರ್, ನಾನು ಮಾತಾಡ್ತಾ ಇರಬೇಕಾದ್ರೆ ನೀವೇ ಪಾಠ ಮಾಡ್ತಾ ಇರೋದು!"

ಮೈಸೂರು ಮಿತ್ರ

ಗುರುವಾರ, 16 ಜೂನ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಶಾಂತಿಗೆ ಸಮನಾದ ತಪಸ್ಸಿಲ್ಲ, ಸಂತೋಷಕ್ಕಿಂತ ಹೆಚ್ಚಿನ ಸುಖವಿಲ್ಲ, ಆಸೆಗಿಂತ ಕೆಟ್ಟ ರೋಗವಿಲ್ಲ, ದಯೆಗಿಂತ ದೊಡ್ಡ ಧರ್ಮವಿಲ್ಲ. –ಮಹಾಭಾರತ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಇದ್ದಾಗ ನೂರ್ ಚಿಂತೆ, ಇಲ್ಲದಿದ್ದಾಗ ಸುಮ್ನೆ ಕುಂತೆ

ನಿಮ್ಮ ಪತ್ರಗಳು

ಫುಟ್‌ಪಾತ್ ಒತ್ತುವರಿ ವ್ಯಾಪಾರ



ಮಾನ್ಯರೆ,

ಮೈಸೂರಿನ ಹೃದಯ ಭಾಗವಾದ ಜಗನ್ಮೋಹನ ಪ್ಯಾಲೇಸ್ ಸರ್ಕಲ್‌ಗೆ ಹೊಂದಿಕೊಂಡಂತೆ ಹಳೇ ರಾಜಭವನದ ಪಕ್ಕ ಹೋಟೆಲೊಂದಿದೆ. ಈ ಹೋಟೆಲ್‌ನವರು ಪಕ್ಕದ ಫುಟ್‌ಪಾತ್ ಅನ್ನು ಉದ್ದಕ್ಕೂ ಒತ್ತುವರಿ ಮಾಡಿಕೊಂಡು, ಅದರ ಮೇಲೆ ಸಾರ್ವಜನಿಕರು ಓಡಾಡದಂತೆ ತುದಿಯಲ್ಲಿ ಹೂ ಕುಂಡಗಳನ್ನು ಇಟ್ಟು ಫುಟ್‌ಪಾತ್ ಮೇಲೆ ಗಿರಾಕಿಗಳಿಗಾಗಿ ಟೇಬಲ್, ಕುರ್ಚಿಗಳನ್ನು ಹಾಕಿ, ಮೇಲೆ ಚಾವಣಿ ರೂಪದಲ್ಲಿ ಟೆಂಟ್ ಅನ್ನು ಶಾಶ್ವತವಾಗಿ ಅಳವಡಿಸಿಕೊಂಡು ವ್ಯಾಪಾರ ಮಾಡುತ್ತಿದ್ದಾರೆ. ಈ ಫುಟ್‌ಪಾತ್ ಈ ಹೋಟೆಲ್‌ಗೆ ಸೇರಿದ ಖಾಸಗಿ ಆಸ್ತಿಯೇ? ಹೀಗೆ ಒತ್ತುವರಿ ಮಾಡಿ ವ್ಯವಹಾರ ಮಾಡಲು ಯಾರು ಅವಕಾಶ ಮಾಡಿಕೊಟ್ಟಿದ್ದಾರೆ? ನಗರ ಪಾಲಿಕೆ ಆಯುಕ್ತರೇ, ಪೊಲೀಸ್ ಆಯುಕ್ತರೇ, ಟ್ರಾಫಿಕ್ ಪೊಲೀಸ್ ಅಧಿಕಾರಿಗಳೇ ಅಥವಾ ಸಂಬಂಧಪಟ್ಟ ಜನಪ್ರತಿನಿಧಿಗಳೇ?. ಈ ಫುಟ್‌ಪಾತ್ ಪಕ್ಕದಲ್ಲೇ ಇಲ್ಲಿನ ಹೋಟೆಲ್, ಲಾಡ್ಜ್‌ಗಳಿಗೆ ಬರುವ ಗಿರಾಕಿಗಳು ತಮ್ಮ ದೊಡ್ಡ ಕಾರುಗಳು, ಇತರ ವಾಹನಗಳನ್ನು ತಂದು ರಸ್ತೆಯಲ್ಲಿ ನಿಲ್ಲಿಸುತ್ತಾರೆ. ಈ ಹೋಟೆಲ್‌ನವರು ಮಾಡಿರುವ ಫುಟ್‌ಪಾತ್ ಒತ್ತುವರಿ ಅಲ್ಲದೇ ವಾಹನಗಳಿಂದ ರಸ್ತೆ ಕೂಡ ಒತ್ತುವರಿ ಆಗಿದೆ. ಇದಕ್ಕೆ ನಗರ ಟ್ರಾಫಿಕ್ ಪೊಲೀಸರು ಹೇಗೆ ಅವಕಾಶ ಮಾಡಿಕೊಟ್ಟಿದ್ದಾರೆ? ಸುತ್ತಮುತ್ತ ಬಹಳ ಶಾಲಾ–ಕಾಲೇಜುಗಳಿದ್ದು, ಸಾವಿರಾರು ವಿದ್ಯಾರ್ಥಿಗಳು, ಮಕ್ಕಳು, ಪ್ರವಾಸಿಗರು, ಹಿರಿಯ ನಾಗರಿಕರು ಈ ರೀತಿ ಫುಟ್‌ಪಾತ್ ಒತ್ತುವರಿ, ಅಡ್ಡಾದಿಡ್ಡಿ ವಾಹನಗಳ ಪಾರ್ಕಿಂಗ್ ಸಮಸ್ಯೆಯಿಂದಾಗಿ, ಇಲ್ಲಿ ರಸ್ತೆ ಮಧ್ಯದಲ್ಲೇ ಓಡಾಡಬೇಕಾದ ಪರಿಸ್ಥಿತಿ ಇದೆ. ಇದರಿಂದ ವೇಗವಾಗಿ ಬರುವ ವಾಹನಗಳಿಗೆ ಸಿಲುಕಿ ಅನಾಹುತಗಳಾಗುವ ಸಾಧ್ಯತೆ ಹೆಚ್ಚಾಗಿದೆ. ಇದಕ್ಕೆ ಯಾರು ಹೊಣೆಯಾಗುತ್ತಾರೆ? ಈ ಸರ್ಕಲ್‌ನಲ್ಲಿ ಮೊದಲು ಟ್ರಾಫಿಕ್ ಪೊಲೀಸ್ ಇರುತ್ತಿದ್ದರು. ಈಗ ಯಾರೂ ಇಲ್ಲದೇ ಟ್ರಾಫಿಕ್ ವ್ಯವಸ್ಥೆ ಕೂಡ ನಿಯಂತ್ರಣ ಇಲ್ಲದೇ ಕೆಟ್ಟು ಹೋಗಿದೆ. ಟ್ರಾಫಿಕ್ ಸಿಬ್ಬಂದಿ ಇದರ ಬಗ್ಗೆ ಹೆಚ್ಚು ಕಾಳಜಿ, ನಿಗಾವಹಿಸುತ್ತಾರೆಯೇ? ವಾರ್ಡ್ ನಂ. 23ರ ನಗರ ಪಾಲಿಕೆ ಸದಸ್ಯರ ಕಚೇರಿ ಹತ್ತಿರದಲ್ಲೇ ಇದೆ. ಈ ಸಮಸ್ಯೆ ಬಗ್ಗೆ ಅವರು ಗಮನಹರಿಸಿ ಆಗುತ್ತಿರುವ ತೊಂದರೆಯನ್ನು ತಪ್ಪಿಸಲು ಈ ಮೂಲಕ ಕೋರುತ್ತೇನೆ.

–ಪ್ರೊ. MSS ಶರ್ಮ, ಸಮಾಜ ಸೇವಕರು, ಮೈಸೂರು.

ಅತಿಥಿ ಉಪನ್ಯಾಸಕರ ವೇತನ ಹೆಚ್ಚಳ ಮಾಡಿ

ಮಾನ್ಯರೆ,

ಪದವಿ ಕಾಲೇಜುಗಳಲ್ಲಿ ಕೆಲಸ ಮಾಡುವ ಅತಿಥಿ ಉಪನ್ಯಾಸಕರ ವೇತನ ಹೆಚ್ಚಳ ಮಾಡಿ ಅವರ ಜೀವನಮಟ್ಟವನ್ನು ಒಂದಷ್ಟು ಸುಧಾರಣೆ ಮಾಡಿದೆ ಘನ ಸರ್ಕಾರ. ಇಲ್ಲಿ ತುಂಬಾ ಗಮನಿಸಬೇಕಾದ ಮುಖ್ಯ ವಿಷಯವೆಂದರೆ ಪದವಿ ಕಾಲೇಜು ಅಧ್ಯಾಪಕರನ್ನು ಖಾಯಂಗೊಳಿಸುವುದರ ಬದಲು ಈಗ ಕೊಡುತ್ತಿರುವ ವೇತನವನ್ನು ಒಂದಷ್ಟು ಹೆಚ್ಚು ಮಾಡಿಬಿಟ್ಟರೆ ಅಲ್ಲಿಗೆ ತಮ್ಮ ಕರ್ತವ್ಯ ಮುಗಿಯಿತೆಂದು ಸರ್ಕಾರ ತನ್ನ ನಿಲುವನ್ನು ಸಮರ್ಥಿಸಲು ಈ ಯೋಜನೆ ಜಾರಿ ಮಾಡಿತು. ಅಲ್ಲದೇ ಅವರನ್ನು ಖಾಯಂಗೊಳಿಸಲು ಕಾನೂನು ತೊಡಕಿದೆಯೆಂದು ಪ್ರತಿಪಾದಿಸಿತು. ಈ ಮೂಲಕ ತಮ್ಮನ್ನು ಖಾಯಂ ಮಾಡಿ ಎಂದ ಕೆಲ ಅಧ್ಯಾಪಕರ ಪ್ರತಿಭಟನೆಯನ್ನು ವ್ಯವಸ್ಥಿತವಾಗಿ ಹತ್ತಿಕ್ಕಲಾಯಿತು.

ಇನ್ನೂ ಉಳಿದಿರುವ ಪದವಿಪೂರ್ವ ಕಾಲೇಜು ಅತಿಥಿ ಉಪನ್ಯಾಸಕರ ವೇತನ ಹೆಚ್ಚಳ ಮಾಡಬೇಕಾಗಿರುವುದು. ಇಲ್ಲಿ ಉಪನ್ಯಾಸ ಮಾಡುವ ಮಂದಿ ಒಗ್ಗಟ್ಟಾಗಿ ಹೋರಾಡದಿರುವುದು, ಜನಪ್ರತಿನಿಧಿಗಳ ಬೆಂಬಲವಿಲ್ಲದಿರುವುದು ಸಹ ಪ್ರಮುಖ ಕಾರಣವಾಗಿದೆ.

ಹೀಗೆಲ್ಲ ಇದ್ದರೂ ಇಂದಿನ ದಿನಗಳಲ್ಲಿ ಎಲ್ಲಾ ಅಗತ್ಯ ವಸ್ತುಗಳ ಬೆಲೆಗಳು ನಿರಂತರವಾಗಿ ಏರುತ್ತಿರುವ ಸಂದರ್ಭದಲ್ಲಿ ತಿಂಗಳಿಗೆ 9000 ಕೊಡುತ್ತಿರುವುದು ಯಾವುದಕ್ಕೂ ಸಾಲದಾಗಿದೆ. ಕೆಲ ಖಾಸಗಿ ಕಾಲೇಜುಗಳಲ್ಲಿ ಇದರ ಪರಿಣಾಮವಾಗಿ ತಾವು ವಿದ್ಯಾರ್ಥಿಗಳಿಂದ ಅಧಿಕ ಶುಲ್ಕ ಪಡೆದರೂ ಕಡಿಮೆ ಸಂಬಳ ಪಾವತಿ ಮಾಡಿ ಅಧಿಕ ಕೆಲಸ ಮಾಡಿಸಿಕೊಳ್ಳುತ್ತಿರುವುದು ವ್ಯವಸ್ಥೆಯ ದುರಂತ ಎನ್ನಬಹುದು. ಈ ಶೈಕ್ಷಣಿಕ ವರ್ಷದಿಂದಲಾದರೂ ಅತಿಥಿ ಉಪನ್ಯಾಸಕರ ಜೀವನಮಟ್ಟವನ್ನು ಪರಿಗಣಿಸಿ ಸಂಬಳ ಹೆಚ್ಚು ಮಾಡಬೇಕೆಂದು ಸಂಬಂಧಿಸಿದವರಲ್ಲಿ ಕಳಕಳಿಯ ಮನವಿ.

–ಎ.ಎಸ್.ಗೋವಿಂದೇಗೌಡ,
ಅರೇನಹಳ್ಳಿ ಗ್ರಾಮ,
ಪಿರಿಯಾಪಟ್ಟಣ ತಾಲೂಕು

20 ವರ್ಷವಾದರೂ ಡಾಂಬರ್ ಕಾಣದ ರಸ್ತೆಗಳು

ಮಾನ್ಯರೆ,

ಮಂಡ್ಯ ತಾಲೂಕು ದುದ್ದ ಹೋಬಳಿ, ಮಾದೇಗೌಡನಕೊಪ್ಪಲು, ಅವ್ವೇರಹಳ್ಳಿ, ಪಾಂಡವಪುರ ತಾಲೂಕಿನ ಅಗಟಹಳ್ಳಿ ಅಕ್ಕಪಕ್ಕದ ಗ್ರಾಮಗಳಾಗಿವೆ. ಬೆಂಗಳೂರು–ಮೈಸೂರು ಹೆದ್ದಾರಿಯಿಂದ ಸಮೀಪವಿರುವ ಯರಹಳ್ಳಿ ಮಾರ್ಗದ ಅವ್ವೇರಹಳ್ಳಿ, ಮಾದೇಗೌಡನಕೊಪ್ಪಲು, ಅಗಟಹಳ್ಳಿ ಗ್ರಾಮಗಳ ರಸ್ತೆಯು ತುಂಬಾ ಗುಂಡಿಮಯವಾಗಿದ್ದು, ಸುಮಾರು 20 ವರ್ಷಗಳಿಂದಲೂ ಸದರಿ ರಸ್ತೆಗೆ ಡಾಂಬರೀಕರಣ ಮಾಡಿರುವುದಿಲ್ಲ. ಈ ರಸ್ತೆ ಮಳೆ ಬಂದಾಗ ಗುಂಡಿ ಯಾವುದು, ರಸ್ತೆ ಯಾವುದು ತಿಳಿಯದೇ ಅವಘಡ ಸಂಭವಿಸುತ್ತಲೇ ಇರುತ್ತವೆ. ಈ ಹಳ್ಳಿಗಳು ಮಂಡ್ಯ ತಾಲೂಕಿನ ಗಡಿ ಗ್ರಾಮಗಳಾಗಿದ್ದು ಈ ಹಳ್ಳಿಗಳು ಯಾವುದೇ ಅಭಿವೃದ್ಧಿ ಕಂಡಿರುವುದಿಲ್ಲ. ಈ ವಿಚಾರವಾಗಿ ಅನೇಕ ಬಾರಿ ಲೋಕೋಪಯೋಗಿ ಇಲಾಖೆ ಅಧಿಕಾರಿಗಳಿಗೂ, ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಯಾವುದೇ ಪ್ರಯೋಜನವಾಗಿಲ್ಲ. ಹಾಗೂ ಈ ಬಗ್ಗೆ ಜನಪ್ರತಿನಿಧಿಗಳಾಗಲೀ, ಸಂಸದರಾಗಲೀ ಅಥವಾ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳಾಗಲೀ ಇಲ್ಲಿಯವರೆವಿಗೂ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಆದುದರಿಂದ ಈ ಗ್ರಾಮಗಳಿಗೆ ತೆರಳುವ ರಸ್ತೆಯನ್ನು ದುರಸ್ತಿಪಡಿಸಿ ಡಾಂಬರೀಕರಣ ಮಾಡಬೇಕೆಂದು ಈ ಮೂಲಕ ಮನವಿ.

– ಮಾದೇಗೌಡನಕೊಪ್ಪಲು ಗ್ರಾಮಸ್ಥರು, ಮಂಡ್ಯ ತಾ.



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಶೀಲ್ದಾರರು
ಮೊ : 94482 08746 / 97421 79000

ಚಿಂತನೆ

ಅವಶ್ಯಕತೆ ಪೂರೈಸಿದ ನಂತರದ ಕೃತಜ್ಞತೆ!!

ನಮ್ಮಲ್ಲಿ 'ಕೃತಜ್ಞತೆ' ಹಾಗೂ 'ಕೃತಘ್ನತೆ' ಎರಡೂ ಪದಗಳು ಬಳಕೆಯಲ್ಲಿವೆ. ಕೇಳಲು ಹೆಚ್ಚೂಕಮ್ಮಿ ಎರಡೂ ಒಂದೇ ರೀತಿಯಾದರೂ ಅವುಗಳು ನೀಡುವ ಅರ್ಥ ಮಾತ್ರ ವಿಭಿನ್ನವಾಗಿದೆ. ನಮಗಾದ ಉಪಕಾರವನ್ನು ಸ್ಮರಿಸುವುದು ಕೃತಜ್ಞತೆಯಾದರೆ, ಇತರರು ಮಾಡಿದ ಉಪಕಾರವನ್ನು ಸ್ಮರಿಸದೆ ದೂರುವುದು ಕೃತಘ್ನತೆ. ಇದು ಬೇರೆ ಬೇರೆ ಸಮಯದಲ್ಲಿ ಬಳಕೆಯಾಗುತ್ತದೆ ಎಂದೇನೂ ಇಲ್ಲ. ಇದು ನಮ್ಮ ಮನಸ್ಸಿಗೆ ಸಂಬಂಧಿಸಿದ್ದು. ನಮ್ಮ ಅಗತ್ಯತೆ ಪೂರೈಸಿದಾಗ ನಾವು ಹೇಳುವ ಕೃತಜ್ಞತೆ ಔಪಚಾರಿಕವಾಗಿ, ಕೆಲವೇ ಸಮಯದಲ್ಲಿ ಅದು ಕೃತಘ್ನತಾ ಭಾವವಾಗಿಯೂ ಹೊರಹೊಮ್ಮಬಹುದು.

ನಮಗೆ ಬಹಳ ಅಗತ್ಯತೆ ಇದೆ ಎಂದಾದಾಗ, ಅದು ನಮಗೆ ದೊರೆತರೆ ಸಹಜವಾಗಿ ಕೃತಜ್ಞತಾ ಭಾವ ಮೂಡಬೇಕು. ಈಗ ನಮಗೆ ಯಾವುದೋ ತುರ್ತು ಕೆಲಸಕ್ಕಾಗಿ ಹತ್ತು ಸಾವಿರ ರೂಪಾಯಿ (ಅದು ಲಕ್ಷವೂ ಆಗಬಹುದು) ಬೇಕಾಗಿದೆ. ಆದರೆ ಯಾರನ್ನು ಕೇಳಿದರೂ ಸಾಲ ಸಿಗುವುದಿಲ್ಲ. ಕೊನೆಗೆ ಅತ್ಯಂತ ನಿರಾಶರಾಗುತ್ತಿರುವ ಹಂತದಲ್ಲಿ, ಒಬ್ಬರು ಆ ಹಣವನ್ನು ನೀಡುತ್ತಾರೆ ಎಂದು ಭಾವಿಸೋಣ. ಆಗ ಮನಸ್ಸು ಕೃತಜ್ಞತೆಯಿಂದ ತುಂಬಿ ಬರುತ್ತದೆ. ಆದರೆ ನಂತರ ಆ ಹಣವನ್ನು ಹಿಂದಿರುಗಿಸಬೇಕಾದ ಸಮಯದಲ್ಲೂ ನಮ್ಮ ಮನಸ್ಸು ಕೃತಜ್ಞತೆಯಿಂದ ಕೂಡಿರಬೇಕಾದದ್ದು ಅಪೇಕ್ಷಣೀಯ. ಅದನ್ನು ಬಿಟ್ಟು ಸಾಲ ಕೊಟ್ಟವನು ಸ್ಥಿತಿವಂತ, ಅವನಿಗೆ ಈ ಹತ್ತು ಸಾವಿರ ರೂಪಾಯಿ ದೊಡ್ಡದೇನಲ್ಲಾ, ಆದರೂ ಪದೇಪದೆ ಹಣ ಹಿಂದಿರುಗಿಸುವಂತೆ ಕೇಳುತ್ತಾನೆ... ಈ ಎಲ್ಲಾ ತಕರಾರು ನಮ್ಮ ಮನಸ್ಸಿಗೆ ಬಂದರೆ ಅದು ಕೃತಘ್ನತೆ ಎನಿಸಿಕೊಳ್ಳುತ್ತದೆ. ಮೊದಲು ಮೂಡಿದ್ದ ಕೃತಜ್ಞತಾ ಭಾವದ ಜಾಗದಲ್ಲಿ ಕೃತಘ್ನತಾ ಭಾವ ಮೂಡುತ್ತದೆ. ಇದು ಸರಿಯಲ್ಲ. ಸಾಲ ಎಂದು ಪಡೆದ ನಂತರ ಆ ಹಣವನ್ನು ಅಥವಾ ವಸ್ತುವನ್ನು ಹಿಂದಿರುಗಿಸಬೇಕಾದದ್ದು ನಮ್ಮ ಕರ್ತವ್ಯ. ಇದಕ್ಕೇ 'ಸಾಲವನು ಕೊಂಬಾಗ ಹಾಲೋಗರ ಉಂಡಂತೆ' ಎಂದು ಸರ್ವಜ್ಞ ಹೇಳಿರುವುದು. ಸಾಲ ಪಡೆದಾಗ ಮೂಡುವ ಕೃತಜ್ಞತಾ ಭಾವ ಸಾಲ ಹಿಂದಿರುಗಿಸುವಾಗಲೂ ಇರಬೇಕು.

ಈ ಹಿಂದಿನ ಕೋವಿಡ್ ಸಮಯದಲ್ಲಿ ಇಂತಹ ಕೃತಘ್ನತಾ ಸಂದರ್ಭಗಳನ್ನು ನಾವು ಕಂಡಿದ್ದೇವೆ. ಮನೆಯಲ್ಲಿ ಒಬ್ಬರಿಗೆ ಕೋವಿಡ್ ತಗುಲಿದೆ ಎಂದರೆ ಅದೆಂತಹ ಪರದಾಟ!! ಖಾಯಿಲೆ ಇದೆ ಎಂದು ಗೊತ್ತಾದ ಕೂಡಲೇ, ಆ ವ್ಯಕ್ತಿಯನ್ನು ಉಳಿಸಿಕೊಳ್ಳಲು ಯಾವುದಾದರೂ ಆಸ್ಪತ್ರೆ ಅಥವಾ ನರ್ಸಿಂಗ್ ಹೋಮಿಗೆ ದಾಖಲಿಸಲು ಮನೆಯವರು ಚಡಪಡಿಸುತ್ತಿದ್ದರು. ಆದರೆ ಎಲ್ಲೂ ಬೆಡ್ ಖಾಲಿ ಇಲ್ಲ ಎಂದಾದಾಗ ಅದೆಂತಹ ಪರದಾಟ, ಆತಂಕ ಮನದಲ್ಲಾಗುತ್ತಿತ್ತು. ಕೊನೆಗೆ ಯಾವುದೋ ಒಂದು ಕಡೆ ಒಂದು ಬೆಡ್ ದೊರಕಿತು ಎಂದರೆ ಬೆಡ್ ಕೊಡಿಸಿದವರಿಗೆ, ಮನೆ ದೇವರಿಗೆ ಕೃತಜ್ಞತೆ ಸಲ್ಲಿಸುತ್ತಿದ್ದರು. ಏಕೆಂದರೆ ಅದು ಜೀವದ ಪ್ರಶ್ನೆಯಾಗಿರುತ್ತಿತ್ತು. ಒಂದೆರಡು ದಿನದಲ್ಲಿ ಅವರು ಚೇತರಿಸಿಕೊಂಡ ನಂತರ, ಹೀಗೆ ದಾಖಲಾದವರು ಅಲ್ಲಿ ಕೊಡುವ ಊಟ ಚೆನ್ನಾಗಿಲ್ಲ, ತಿಂಡಿ ಚೆನ್ನಾಗಿಲ್ಲ, ಡಾಕ್ಟರ್ ಬರುವುದೇ ಇಲ್ಲ, ನರ್ಸಿಂಗ್ ಸರಿಯಾಗಿಲ್ಲ ಎಂಬಂತಹ ಟೀಕೆಗಳು ಆರಂಭವಾಗುತ್ತಿತ್ತು. ಆರಂಭದಲ್ಲಿದ್ದ ಕೃತಜ್ಞತಾ ಭಾವದ ಜಾಗದಲ್ಲಿ ಕೃತಘ್ನತಾ ಭಾವ ಮೂಡುತ್ತಿತ್ತು. ಅಂದರೆ ನಮ್ಮ ಅವಶ್ಯಕತೆ ಪೂರೈಸಿದ ನಂತರ ನಾವು ಮೊದಲಿನಂತಿರದೆ ಬದಲಾಗಿ ಬಿಡುತ್ತೇವೆ. ಅಲ್ಲಿ ಕೃತಜ್ಞತಾ ಭಾವ ಮಾಸಿಹೋಗಿ, ಕೃತಘ್ನತಾ ಭಾವ ಮೂಡುತ್ತದೆ,

ಹಿಂದೆ ಓದಿದ ಒಂದು ಕಥೆ ನೆನಪಾಗುತ್ತದೆ. ಒಬ್ಬ ವ್ಯಕ್ತಿ ಕಾಡಿನಲ್ಲಿ ದಾರಿ ತಪ್ಪಿ, ದಿಕ್ಕೆಡುತ್ತಾನೆ. ಮೂರ್‍ನಾಲ್ಕು ದಿನಗಳ ಕಾಲ ಅಲ್ಲಿ ಅಲೆದಾಡಿದರೂ ಅವನಿಗೆ ತಿನ್ನಲು ಏನೂ ಸಿಗಲಿಲ್ಲ. ಇನ್ನು ಹಸಿವಿನಿಂದಲೇ ನಾನು ಸತ್ತು ಹೋಗುತ್ತೇನೆ ಎಂಬ ಭಾವನೆ ಅವನಲ್ಲಿ ಮೂಡತೊಡಗಿತು. ಅಷ್ಟರಲ್ಲಿ ಅವನಿಗೆ ಒಂದು ಹಣ್ಣಿನ ಮರ ಕಾಣಿಸಿತು. ಅದನ್ನು ಕಂಡ ಅವನ ಆನಂದ ಹೇಳತೀರದಂತಾಗಿತ್ತು. ಧಡಧಡ ಹೋಗಿ ಮರದಿಂದ ಒಂದು ಹಣ್ಣು ಕಿತ್ತು ತಿನ್ನಲು ಆರಂಭಿಸುತ್ತಾನೆ. ಅದು ಸಿಹಿಯಾದ, ರುಚಿಕರವಾದ ಹಣ್ಣಾಗಿರುತ್ತದೆ. ಅವನ ಮನಸ್ಸು ಕೃತಜ್ಞತೆಯಿಂದ ತುಂಬಿಹೋಗುತ್ತದೆ. ಆ ಮರವನ್ನು ಹುಟ್ಟು ಹಾಕಿದ ದೇವರಿಗೆ (ವ್ಯಕ್ತಿಗೆ), ಮರಕ್ಕೆ ನೀರೆರೆದು ಪೋಷಿಸಿದ ವರುಣ ದೇವರಿಗೆ (ಮಳೆಗೆ) ಮನಸಾರೆ ವಂದಿಸುತ್ತಾನೆ. ಅದೆಂತಹ ಕೃತಜ್ಞತಾ ಭಾವ ಎಂದರೆ ಜೀವ ಉಳಿದಾಗ ಬರುವಂತಹ ಭಾವ. ಅವನು ಮೊದಲ ಹಣ್ಣೂ ತಿಂದ ನಂತರ ಎರಡನೇ ಹಣ್ಣು ಕಿತ್ತು ತಿನ್ನುತ್ತಾನೆ,

> ನಮಗೆ ಅಗತ್ಯ ಹಾಗೂ ಬೇಕುಗಳ ನಡುವೆ ವ್ಯತ್ಯಾಸವಿರುವುದು ಗೊತ್ತಾಗಬೇಕು. ಕೆಲವು ವಸ್ತುಗಳು, ಅದರಲ್ಲೂ ಆಹಾರ ಪದಾರ್ಥಗಳು ಇಲ್ಲದೆ ಬದುಕಬಲ್ಲೆನೇ? ಎಂಬ ಭಾವದಲ್ಲಿ, ಸಿಕ್ಕಿದ್ದೇ ಪರಮಾನ್ನ ಎಂಬ ಕೃತಜ್ಞತಾ ಭಾವ ಮೂಡುತ್ತದೆ. ಕರ್ಫ್ಯೂ ಸಮಯದಲ್ಲಿ ಒಂದು ಕಂತೆ ಕೊತ್ತಂಬರಿ ಸೊಪ್ಪು ಸಿಗದೆ ಪರದಾಡಿದ್ದನ್ನು ಜೀವಮಾನಪೂರ್ತಿ ಸ್ಮರಿಸಿ, ಅದು ಯಥೇಚ್ಛವಾಗಿ ಸಿಕ್ಕಾಗಲೂ ಅದೇ ಭಾವ ಇರುವುದು ಅವಶ್ಯಕ.

ನಂತರ ಇನ್ನೊಂದು–ಮಗದೊಂದು. ಹೀಗೆ ಒಂದೊಂದು ಹಣ್ಣು ಹೊಟ್ಟೆಗೆ ಸೇರುತ್ತಿದ್ದಂತೆ ಅವನ ಮನದ ಕೃತಜ್ಞತಾ ಭಾವ ಕಡಿಮೆಯಾಗುತ್ತಾ ಹೋಗುತ್ತದೆ. ಕೊನೆಗೆ ಹೊಟ್ಟೆ ತುಂಬುವ ಹಂತಕ್ಕೆ ಬಂದಾಗ, ಅಂದರೆ ಏಳೆಂಟು ಹಣ್ಣುಗಳನ್ನು ತಿಂದ ನಂತರ, ಅವನು 'ಥೂ, ಇದೂ ಒಂದು ಹಣ್ಣಾ?, ಸ್ವಲ್ಪವೂ ರುಚಿಯಿಲ್ಲ ಎಂದು ಅದನ್ನು ಉಗಿಯುವ ಹಂತಕ್ಕೆ ಹೋಗಿ ಬಿಡುತ್ತಾನೆ. ಅಂದರೆ ಮೊದಲ ಹಣ್ಣು ಸಿಕ್ಕಾಗ ಮೂಡಿದ್ದ ಕೃತಜ್ಞತಾ ಭಾವ, ಹೊಟ್ಟೆ ತುಂಬಿದ ನಂತರ ಕೃತಘ್ನತಾ ಭಾವದತ್ತ ಹೊರಳಿರುತ್ತದೆ. ಒಂದೇ ಮರದ ಮೊದಲ ಹಣ್ಣು ಹಾಗೂ ಕೊನೆಯ ಹಣ್ಣು ಎರಡೂ ರಸಭರಿತ. ರುಚಿಯಲ್ಲಿ ಸ್ವಲ್ಪವೂ ವ್ಯತ್ಯಾಸವಾಗಿಲ್ಲ. ಆದರೆ, ಬದಲಾಗಿದ್ದು ಅವನ ಮನಸ್ಥಿತಿ ಮಾತ್ರ. ಅಲ್ಲಿ 'ಮನಸ್ಸು ಮರ್ಕಟವಿದ್ದಂತೆ' ಎಂದು ಹೇಳುವ ಭಾವ ಸಾಬೀತಾದಂತೆ ಅನ್ನಿಸುತ್ತದೆ. ಆತ ಮೊದಲ ಹಣ್ಣು ತಿನ್ನುವಾಗ ಅವನಿಗೆ ಅದರ ಅವಶ್ಯಕತೆ ಇತ್ತು. ಕೊನೆಯ ಹಣ್ಣಿನ ಹೊತ್ತಿಗೆ ಹೊಟ್ಟೆ ತುಂಬಿದ್ದರಿಂದಾಗಿ ಹಸಿದ ಹೊಟ್ಟೆಗೂ, ತುಂಬಿದ ಹೊಟ್ಟೆಗೂ ಭಾವನೆಗಳಲ್ಲಿ ವ್ಯತ್ಯಾಸವಾಗಿ ಹೋಗುತ್ತದೆ. ಅಂದರೆ ನಮ್ಮ ಅವಶ್ಯಕತೆ ಪೂರೈಕೆಯ ಹಂತದಲ್ಲಿ ಮೂಡುವ ಕೃತಜ್ಞತಾ ಭಾವನೆ ಅದು ದೊರಕಿದ ನಂತರ ಇಲ್ಲವಾಗಿ ಬಿಡುತ್ತದೆ. ನಮ್ಮಲ್ಲಿ ಅನೇಕರು ಕೆಲಸ ಹುಡುಕುತ್ತಿರುತ್ತಾರೆ. ಯಾವ ಕೆಲಸವಾದರೂ ಪರವಾಗಿಲ್ಲ, ಯಾವ ಊರಾದರೂ ಪರವಾಗಿಲ್ಲ, ಹೋಗಿ ಕೆಲಸ ಮಾಡುತ್ತೇವೆ ಎನ್ನುತ್ತಿರುತ್ತಾರೆ. ಹಾಗೆ ಕೆಲಸ ಸಿಕ್ಕಾಗ ಅವರಲ್ಲಿ ಕೃತಜ್ಞತೆ ಮೂಡಿರುತ್ತದೆ. ಆದರೆ ಕ್ರಮೇಣ ಕೆಲಸ ಜಾಸ್ತಿಯಾಯಿತು, ನನ್ನ ಮನೆ ಹತ್ತಿರ ಕೆಲಸ ಸಿಕ್ಕಿದ್ದರೆ ಚೆನ್ನಾಗಿತ್ತು, ಸಂಬಳ ಕಡಿಮೆ ಇತ್ಯಾದಿ ಮಾತುಗಳು ಅವರಿಂದ ಬರುತ್ತದೆ. ಇಲ್ಲೂ ಅವಶ್ಯಕತೆ ಪೂರೈಸಿದ ನಂತರದ ಭಾವವನ್ನು ಗುರುತಿಸಬಹುದು.

ಅದೇ ಕೊರೊನಾ ಸಮಯದಲ್ಲಿ ಉಸಿರಾಟಕ್ಕೆ ತೊಂದರೆಯಾದಾಗ, ಆಕ್ಸಿಜನ್ ಬೇಕೆನಿಸಿದಾಗ, ಅದು ಸಿಗದೆ ಪರದಾಡಿ ಪ್ರಾಣ ಬಿಟ್ಟವರು ಹಲವರು. ಆದರೆ ಅದೇ ಜೀವಮಾನ ಪೂರ್ತಿ ಪ್ರಕೃತಿ ನಮಗೆ ನೀಡುತ್ತಿರುವ ಆಮ್ಲಜನಕದ ಬಗ್ಗೆ ನಮ್ಮ ಮನಸ್ಸು ಕೃತಜ್ಞತೆಯಿಂದ ಸ್ಮರಿಸಿಕೊಳ್ಳದೇ, ಸ್ವಾರ್ಥಕ್ಕಾಗಿ ಮರಗಳನ್ನೇ ಕಡಿದು ಕೃತಘ್ನತಾ ಭಾವ ಪ್ರದರ್ಶಿಸಿಬಿಡುತ್ತದೆ. ಬೇಸಿಗೆ ಸಮಯದಲ್ಲಿ ಕುಡಿವ ನೀರಿಗೆ ಅಭಾವವಾದಾಗ ಕಿಲೋಮೀಟರುಗಟ್ಟಲೆ ದೂರ ಹೋಗಿ ನೀರು ತಂದವರು, ಅದೇ ಕುಡಿವ ನೀರು ಧಾರಾಳವಾಗಿ ದೊರೆತರೆ ಅದನ್ನು ಪೋಲು ಮಾಡಿ ಕೃತಘ್ನತಾ ಭಾವ ಪ್ರದರ್ಶಿಸುವುದನ್ನು ಕಾಣಬಹುದು.

ನಮಗೆ ಮಳೆಗಾಲದಲ್ಲಿ ಬಿಸಿಲಿರದೆ, ಒಗೆದು ಹಾಕಿದ ಬಟ್ಟೆಗಳು ಒಣಗದಿದ್ದಾಗ, ಮಳೆಯನ್ನು ಶಪಿಸುತ್ತೇವೆ. ಅದೇ ಬಿಸಿಲು ದಿನಗಟ್ಟಲೇ ಇದ್ದಾಗ ಗೊಣಗುತ್ತೇವೆ. ಅಲಾಸ್ಕದಂತಹ ಪ್ರದೇಶಗಳಲ್ಲಿ ಅಲ್ಲಿನ ಜನರು ಬಿಸಿಲು ಕಾಣುವುದು ವರ್ಷಕ್ಕೆ ನಾಲ್ಕು ತಿಂಗಳುಗಳು ಮಾತ್ರ. ಅವರಿಗೆ ಬಿಸಿಲಿನ ಮಹತ್ವ ಗೊತ್ತಿರುತ್ತದೆ. ಹಿಮಾಲಯದ ಕಣಿವೆಗಳಲ್ಲಿ ವರ್ಷಕ್ಕೆ ಐದಾರು ತಿಂಗಳು ಹಿಮ ಬಿದ್ದು, ಓಡಾಡಲು ಆಗದ ಪರಿಸ್ಥಿತಿ ಇರುತ್ತದೆ. ಅಲ್ಲಿ ಬೇಸಿಗೆ ಬಂದಾಗ ಜನರು ಕೃತಜ್ಞತೆ ಸಲ್ಲಿಸುತ್ತಾರೆ. ಅದೇ ಹಿಮಾಲಯದ ಕೆಲವು ಕಡೆ ಆಮ್ಲಜನಕದ ಕೊರತೆಯಾಗುತ್ತದೆ. ಅಲ್ಲಿನವರಿಗೆ ಆಮ್ಲಜನಕದ ಮಹತ್ವ ಗೊತ್ತಿರುತ್ತದೆ.

ನಮಗೆ ಅಗತ್ಯ ಹಾಗೂ ಬೇಕುಗಳ ನಡುವೆ ವ್ಯತ್ಯಾಸವಿರುವುದು ಗೊತ್ತಾಗಬೇಕು. ಕೆಲವು ವಸ್ತುಗಳು, ಅದರಲ್ಲೂ ಆಹಾರ ಪದಾರ್ಥಗಳು ಇಲ್ಲದೆ ಬದುಕಬಲ್ಲೆನೇ? ಎಂಬ ಭಾವದಲ್ಲಿ, ಸಿಕ್ಕಿದ್ದೇ ಪರಮಾನ್ನ ಎಂಬ ಕೃತಜ್ಞತಾ ಭಾವ ಮೂಡುತ್ತದೆ. ಕರ್ಫ್ಯೂ ಸಮಯದಲ್ಲಿ ಒಂದು ಕಂತೆ ಕೊತ್ತಂಬರಿ ಸೊಪ್ಪು ಸಿಗದೆ ಪರದಾಡಿದ್ದನ್ನು ಜೀವಮಾನಪೂರ್ತಿ ಸ್ಮರಿಸಿ, ಅದು ಯಥೇಚ್ಛವಾಗಿ ಸಿಕ್ಕಾಗಲೂ ಅದೇ ಭಾವ ಇರುವುದು ಅವಶ್ಯಕ.

ನಮ್ಮಲ್ಲಿ ಆಗಾಗ್ಗೆ ಮಾರುಕಟ್ಟೆಯಲ್ಲಿ ದರದ ಉತ್ತುಂಗಕ್ಕೆ ಏರುವ ಈರುಳ್ಳಿ ಹಾಗೂ ಟೊಮ್ಯಾಟೋ ಇದಕ್ಕೆ ಉತ್ತಮ ಉದಾಹರಣೆ. ಸಿಗದಿದ್ದಾಗ ಅಥವಾ ಬೆಲೆ ಜಾಸ್ತಿ ಕೊಟ್ಟು ಅದನ್ನು ತಂದಾಗ ಒಂದು ತುಂಡೂ ಹಾಳಾಗದಂತೆ ಎಚ್ಚರ ವಹಿಸುವ ನಾವು, ಅದರ ಬೆಲೆ ಇಳಿದಾಗ ಆ ಮನೋಭಾವ ಇಲ್ಲದೆ ಅದನ್ನು ಪೋಲು ಮಾಡುತ್ತೇವೆ. ನಮ್ಮ ಮನಸ್ಥಿತಿ ಯಾವಾಗಲೂ ಸಮಸ್ಥಿತಿಯಲ್ಲಿ ಇರಬೇಕು. ಕೃತಜ್ಞತಾ ಭಾವ ಇದ್ದಾಗ ಅಂತಹ ವ್ಯಕ್ತಿ ದೊಡ್ಡವ ಎನಿಸಿಕೊಳ್ಳುತ್ತಾನೆ. ಇಲ್ಲಿ ನಮ್ಮಲ್ಲಿರುವ ಹಣಕ್ಕಿಂತ ನಮ್ಮ ಕೃತಜ್ಞತಾ ಭಾವನೆ ನಮ್ಮನ್ನು ದೊಡ್ಡರನ್ನಾಗಿಸುತ್ತದೆ.

ಇತ್ತೀಚೆಗೆ ನಮ್ಮಲ್ಲಿ ನಡೆಯುತ್ತಿರುವ ಪ್ರತಿಭಟನೆಗಳನ್ನು ಗಮನಿಸಬಹುದು. ಅವೆಲ್ಲಾ ಹೊಟ್ಟೆ ತುಂಬಿದವರು ಮಾಡುವ/ಮಾಡಿಸುವ ಪ್ರತಿಭಟನೆಗಳು. ಹಸಿವೆಯಿಂದ ಇರುವವರಿಗೆ ದುಡ್ಡುಕೊಟ್ಟು ಮೆರವಣಿಗೆ ಕರೆತರುವ ಜಾಯಮಾನ ಇತ್ತೀಚೆಗೆ ಜಾಸ್ತಿಯಾಗುತ್ತಿದೆ. ಹೀಗೆ ಮಾಡುವವರಿಗೆ ತಮ್ಮದೇ ಆದ ಅಜೆಂಡಾ ಇರುತ್ತದೆ. ಆದರೆ ಅದು ಸಾಮಾನ್ಯ ಜನರಿಗೆ ಬೇಕಾಗಿರುವುದಿಲ್ಲ. ಆದರೆ ಬಡತನದ ಕಾರಣ ಹಣ ಕೊಟ್ಟವರ ಪರವಾಗಿ ಅವರು ನಿಲ್ಲುತ್ತಾರೆ. ಮರುದಿನ ಅದಕ್ಕೆ ವಿರುದ್ಧವಾದ ಪ್ರತಿಭಟನೆ ಸಮಯದಲ್ಲೂ ಅವರು ಹಣ ಪಡೆದು ಅವರೊಡನೆ ನಿಲ್ಲುತ್ತಾರೆ. ಇಲ್ಲಿ ಹಣಕ್ಕೆ ಅವರ ಕೃತಜ್ಞತಾ ಭಾವ ಸೀಮಿತವಾಗಿರುತ್ತದೆ. ಆದರೆ ಇಂತಹವರನ್ನು ಹಣ ಕೊಟ್ಟು ಕರೆದುಕೊಂಡು ಬರುವವರಿಗೆ ಆ ಬಗೆಗಿನ ಕೃತಜ್ಞತಾ ಭಾವ ಇರುವುದಿಲ್ಲ. ಇದು ಇತರರ ನೋವನ್ನು ಉಪಯೋಗಿಸುವ ತಂತ್ರವಾಗಿ ಕಂಡುಬರುತ್ತದೆ. ಮಾನವೀಯತೆ ಇರುವವರು ಕೃತಘ್ನರಾಗಿರುವುದಿಲ್ಲ. ನಾವು 'ಕೃತಜ್ಞತಾ ಭಾವವೇ ಕೊನೆಗೆ ಗೆಲ್ಲುತ್ತದೆ' ಎಂಬ ನಂಬಿಕೆ ಇಟ್ಟುಕೊಳ್ಳಬೇಕು. ಅಂತಹ ಮನೋಭಾವ ನಮ್ಮದಾಗಿರಬೇಕು.

ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಸ್ಪೈರಲ್ ಎಂಟರೋಸ್ಕೋಪಿ ಸೌಲಭ್ಯ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಉದ್ಘಾಟನೆ



ಮೈಸೂರು: ಮೈಸೂರಿನ ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಇತ್ತೀಚೆಗೆ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಸ್ಪೈರಲ್ ಎಂಟರೋಸ್ಕೋಪಿ ಯಂತ್ರವನ್ನು ಅನಾವರಣಗೊಳಿಸಿದರು.

ಈ ಯಂತ್ರದ ಮೂಲಕ ಕರುಳಿನ ಹುಣ್ಣು ಸೇರಿದಂತೆ ಕರುಳಿನ ಸಮಸ್ಯೆಯಿಂದ ಬಳಲುತ್ತಿರುವ ರೋಗಿಗಳಿಗೆ ಅತ್ಯಾಧುನಿಕ ವಿಧಾನದಲ್ಲಿ ಚಿಕಿತ್ಸೆ ನೀಡಿ ಗುಣಪಡಿಸಲಾಗಿದೆ ಎಂದು ಆಸ್ಪತ್ರೆಯ ಕ್ಲಿನಿಕಲ್ ನಿರ್ದೇಶಕ ಡಾ. ಎಂ.ಎನ್.ರವಿ ತಿಳಿಸಿದ್ದಾರೆ.

ಈ ಹಿಂದೆ ಕರುಳು, ದೊಡ್ಡ ಕರುಳು ಮತ್ತು ಸಣ್ಣ ಕರುಳನ್ನು ಒಳಗೊಂಡಿರುವ ಜೀರ್ಣಾಂಗ ಸಮಸ್ಯೆ ಹಾಗೂ ಸಣ್ಣ ಕರುಳಿನ ಸಮಸ್ಯೆಗಳನ್ನು ಗುರುತಿಸುವುದು ಕಷ್ಟವಾಗುತ್ತಿತ್ತು. ಆದರೆ ಸ್ಪೈರಲ್ ಎಂಟರೋಸ್ಕೋಪಿ ಯಂತ್ರದ ಮೂಲಕ ಈ ಸಮಸ್ಯೆಗಳನ್ನು ಗುರುತಿಸುವುದು ಸುಲಭವಾಗಿದ್ದು, ಪರಿಣಾಮಕಾರಿಯಾದ ಚಿಕಿತ್ಸೆ ನೀಡುವ ಮೂಲಕ ರೋಗಿಗಳನ್ನು ಗುಣಪಡಿಸಲಾಗುತ್ತಿದೆ. ದೀರ್ಘ ಸುರುಳಿಯಾಕಾರದ ಸಣ್ಣ ಕರುಳಿನ ಸೂಕ್ಷ್ಮ ರೋಗಾಣುಗಳನ್ನು ಸಾಂಪ್ರದಾಯಿಕ ವಿಧಾನಗಳ ಮೂಲಕ ಗುರುತಿಸುವುದು ಕಷ್ಟವಾಗಿದ್ದು, ಈ ಯಂತ್ರವು ಸಣ್ಣ ಕರುಳಿನ ರೋಗ ನಿರ್ಣಯ ಮತ್ತು ಚಿಕಿತ್ಸೆಗಳಿಗೆ ಹೆಚ್ಚು ಪರಿಣಾಮಕಾರಿಯಾಗಿದೆ ಎಂದರು.

ಸಣ್ಣ ಕರುಳಿನ ಗಾಯಗಳು, ಹುಣ್ಣು, ಅಜ್ಞಾತ ಕಾರಣಗಳ, ರಕ್ತಹೀನತೆಯ ಮತ್ತು ಕಿಬ್ಬೊಟ್ಟೆಯ ನೋವನ್ನು ಪತ್ತೆ ಹಚ್ಚಲು ಈ ಯಂತ್ರ ಸಹಾಯಕವಾಗಿದ್ದು, ಸಣ್ಣ ಕರುಳಿನ ಚಿಕಿತ್ಸೆಯಲ್ಲಿ ಹಾಗೂ ಶಸ್ತ್ರಚಿಕಿತ್ಸೆ ಇಲ್ಲದೇ ಪಾಲಿಪ್ಸ್ (ಗೆಡ್ಡೆ) ಅನ್ನು ತೆಗೆದು ಹಾಕುವಲ್ಲಿ ಉಪಯುಕ್ತವಾಗಿದೆ. ಇದರೊಂದಿಗೆ ಸಣ್ಣ ಕರುಳಿನ ರಕ್ತಸ್ರಾವವನ್ನು ಗುರುತಿಸಬಹುದಾಗಿದ್ದು, ಶಸ್ತ್ರಚಿಕಿತ್ಸೆ ಇಲ್ಲದೇ ಚಿಕಿತ್ಸೆ ನೀಡಬಹುದು ಎಂದು ಆಸ್ಪತ್ರೆಯ ವೈದ್ಯಕೀಯ ಗ್ಯಾಸ್ಟ್ರೋ ಎಂಟರಾಲಜಿ ತಜ್ಞ ಡಾ.ಎ.ಕೆ.ಸತೀಶ್ ರಾವ್ ತಿಳಿಸಿದರು.

5 ಮೀ. ಸಣ್ಣ ಕರುಳನ್ನು ಎಂಟರೋಸ್ಕೋಪಿ ಯಂತ್ರದ ಮೂಲಕ ಸಂಪೂರ್ಣವಾಗಿ ಪರೀಕ್ಷಿಸಬಹುದು. ಇದರಿಂದಾಗಿ ರೋಗಿಗಳು ಹೆಚ್ಚು ಕಾಲ ಆಸ್ಪತ್ರೆಯಲ್ಲಿ ಉಳಿಯುವ ಅವಶ್ಯಕತೆ ಇರುವುದಿಲ್ಲ. ಈಗಾಗಲೇ ಈ ಯಂತ್ರದ ಮೂಲಕ ಇಬ್ಬರು ರೋಗಿಗಳಿಗೆ ಶಸ್ತ್ರ ಚಿಕಿತ್ಸೆ ನೆರವೇರಿಸಲಾಗಿದೆ. ಈ ಅತ್ಯಾಧುನಿಕ ಯಂತ್ರ ಹೊಂದಿರುವ ರಾಜ್ಯದ ಎರಡನೇ ಹಾಗೂ ಮೈಸೂರಿನ ಮೊದಲ ಆಸ್ಪತ್ರೆ ನಮ್ಮ ಆಸ್ಪತ್ರೆಯಾಗಿದೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಆಸ್ಪತ್ರೆಯ ದಕ್ಷಿಣ ಪ್ರಾದೇಶಿಕ ನಿರ್ದೇಶಕ ಡಾ.ವಿಜಯ ಸಿಂಗ್, ಆಸ್ಪತ್ರೆಯ ಫೆಸಿಲಿಟಿ ಡೈರೆಕ್ಟರ್ ಪವನ್‌ಕುಮಾರ್ ಇದ್ದರು.

ಸ್ಕೂಟರ್‌ನಲ್ಲಿ ತೆರಳುತ್ತಿದ್ದ ಮಹಿಳೆಯ ಸರ ಕದ್ದ ಖದೀಮ

ಮಂಡ್ಯ, ಜೂ.15–ಸ್ಕೂಟರ್‌ನಲ್ಲಿ ತೆರಳುತ್ತಿದ್ದ ಶ್ರೀ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸ್ವ–ಸಹಾಯ ಸಂಘದ ಸೇವಾ ಪ್ರತಿನಿಧಿಯ ಮಾಂಗಲ್ಯ ಸರವನ್ನು ದುಷ್ಕರ್ಮಿ ಕಿತ್ತುಕೊಂಡು ಹೋಗಿರುವ ಘಟನೆ ಮಂಡ್ಯ ತಾಲೂಕು ಮುತ್ತೇಗೆರೆ ಗ್ರಾಮದ ಬಳಿ ನಡೆದಿದೆ.



ಹನಗನಹಳ್ಳಿಯ ಸೇವಾ ಪ್ರತಿನಿಧಿ ರಶ್ಮಿ (35) ಜೂ.13ರಂದು ಮಧ್ಯಾಹ್ನ 3.10ರ ಸುಮಾರಿನಲ್ಲಿ ಕೆಂಚನಹಳ್ಳಿ ಗ್ರಾಮದ ಕೆರೆ ಬಳಿಯ ಬಸರಾಳು–ಮುತ್ತೇಗೆರೆ ರಸ್ತೆಯಲ್ಲಿ ಹೋಂಡಾ ಆಕ್ಟಿವಾ ಸ್ಕೂಟರ್‌ನಲ್ಲಿ (ಕೆಎ 11 ಇಎಫ್ 7467) ತೆರಳುತ್ತಿದ್ದಾಗ ಹಿಂಬದಿಯಿಂದ ಬೈಕ್‌ನಲ್ಲಿ ಬಂದ ಖದೀಮ ಸ್ಕೂಟರ್ ಚಾಲನೆಯಲ್ಲಿರುವಾಗಲೇ ರಶ್ಮಿಯವರ ಕತ್ತಿನಲ್ಲಿದ್ದ 36 ಗ್ರಾಂ ತೂಕದ ಮಾಂಗಲ್ಯ ಸರವನ್ನು ಕಸಿದಿದ್ದಾನೆ. ಈ ವೇಳೆ ರಶ್ಮಿಯವರು ನಿಯಂತ್ರಣ ತಪ್ಪಿ ಸ್ಕೂಟರ್ ಸಮೇತ ಬಿದ್ದಿದ್ದು, ಅವರಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಈ ಸಂಬಂಧ ಬಸರಾಳು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರಲ್ಲಿ 'ಹೈ ಲೈಫ್' ಫ್ಯಾಷನ್, ಲೈಫ್‌ಸ್ಟೈಲ್ ವಸ್ತು ಪ್ರದರ್ಶನ

ಮೈಸೂರು, ಜೂ.15–ಮೈಸೂರು ರ್‍ಯಾಡಿಸನ್ ಬ್ಲ್ಯೂ ಪ್ಲಾಜಾ ಹೋಟೆಲ್‌ನಲ್ಲಿ



ಜೂ.17 ಮತ್ತು 18 ರಂದು ಭಾರತದ ಅತ್ಯಂತ ಅಚ್ಚುಮೆಚ್ಚಿನ ಫ್ಯಾಷನ್ ಮತ್ತು ಲೈಫ್ ಸ್ಟೈಲ್ ಎಕ್ಸಿಬಿಷನ್ 'ಹೈ ಲೈಫ್' ಏರ್ಪಡಿಸಲಾಗಿದೆ. ಇದು ಭಾರತದ ಅತ್ಯಂತ ಬೃಹತ್ ಹಾಗೂ ಅತೀ ಜನಪ್ರಿಯ ಫ್ಯಾಷನ್ ಷೋ ಕೇಸ್ ಆಗಿದೆ. ಇದರಲ್ಲಿ ದೇಶಾದ್ಯಂತ ಹೆಸರುವಾಸಿ ಪ್ರದರ್ಶಕರು ಮತ್ತು ಡಿಸೈನರ್‌ಗಳು ತಮ್ಮ ಆಯ್ದ ಅತ್ಯಂತ ಆಕರ್ಷಕ ಸಂಗ್ರಹಗಳನ್ನು ಪ್ರದರ್ಶಿಸಲಿದ್ದಾರೆ. ಇಂತಹ ಬಹು ನಿರೀಕ್ಷಿತ ಪ್ರದರ್ಶನವು ಎಲ್ಲರ ಮನ ಗೆಲ್ಲುವ ವಿಶ್ವಾಸವನ್ನು ಸಂಘಟಕರು ವ್ಯಕ್ತಪಡಿಸಿದ್ದಾರೆ. ಬ್ರೈಡಲ್ ವೇರ್, ಡಿಸೈನರ್ ಅಪರೇಲ್ಸ್, ಜುವೆಲರಿ, ಫ್ಯಾಷನ್ ಆ್ಯಕ್ಸೆಸರೀಸ್ ಮತ್ತು ಹೋಂ ಆ್ಯಕ್ಸೆಸರೀಸ್, ಟೇಸ್ಟ್‌ಫುಲ್ ಆರ್ಟಿಫ್ಯಾಕ್ಟ್ಸ್ ಮತ್ತು ಡೆಕೋರ್ ವ್ಯವಸ್ಥೆ ಮಾಡಲಾಗಿದೆ.

ಈಗಾಗಲೇ ಬೆಂಗಳೂರು, ಅಹಮದಾಬಾದ್, ಸೂರತ್, ಕೊಚ್ಚಿ, ಹೈದರಾಬಾದ್, ಚೆನ್ನೈ, ನಾಗಪುರ್, ರಾಯಪುರ್, ವೀಜಗ್, ಕ್ಯಾಲಿಕಟ್, ಕೊಯಮತ್ತೂರು, ಪುಣೆ, ಮುಂಬೈ, ಜಯಪುರ್, ಇಂದೋರ್ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಶ್ರೀಲಂಕಾಗಳಲ್ಲಿ 'ಹೈ ಲೈಫ್' ವಸ್ತುಪ್ರದರ್ಶನ ಜನಪ್ರಿಯವಾಗಿದೆ.

ನೂತನ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ್ ಪ್ರಮಾಣ ವಚನ



ಬೆಂಗಳೂರು, ಜೂ.15– ರಾಜ್ಯದ ನೂತನ ಲೋಕಾಯುಕ್ತರಾಗಿ ನೇಮಕಗೊಂಡಿರುವ ನ್ಯಾಯಮೂರ್ತಿ ಬಿ.ಎಸ್. ಪಾಟೀಲ್ ಅವರು ಇಂದು ಪ್ರಮಾಣ ವಚನ ಸ್ವೀಕರಿಸಿದರು.

ಇದಕ್ಕೂ ಮೊದಲು ಬಿ.ಎಸ್.ಪಾಟೀಲ್ ಅವರು ಉಪ ಲೋಕಾಯುಕ್ತರಾಗಿ ಸೇವೆ ಸಲ್ಲಿಸುತ್ತಿದ್ದರು. ರಾಜಭವನದ ಗಾಜಿನ ಮನೆಯಲ್ಲಿ ಪ್ರಮಾಣ ವಚನ ಸ್ವೀಕಾರ ಸಮಾರಂಭ ನಡೆದಿದ್ದು, ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರು ಪ್ರಮಾಣ ವಚನ ಬೋಧನೆ ಮಾಡಿದರು.

ಪ್ರಮಾಣ ವಚನ ಸಮಾರಂಭದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ವಿಧಾನಸಭೆ ವಿಪಕ್ಷ ನಾಯಕ ಸಿದ್ದರಾಮಯ್ಯ, ಗೃಹ ಸಚಿವ ಆರಗ ಜ್ಞಾನೇಂದ್ರ, ಸಚಿವರಾದ ವಿ. ಸೋಮಣ್ಣ, ಹಾಲಪ್ಪ ಆಚಾರ್ ಮತ್ತು ಶಾಸಕರು ಉಪಸ್ಥಿತರಿದ್ದರು.

ಲೋಕಾಯುಕ್ತರಾಗಿದ್ದ ನ್ಯಾಯಮೂರ್ತಿ ಪಿ. ವಿಶ್ವನಾಥ ಶೆಟ್ಟಿ 2022ರ ಜನವರಿ 27ರಂದು ನಿವೃತ್ತರಾಗಿದ್ದರು. ಅಂದಿನಿಂದ ಖಾಲಿ ಇದ್ದ ಹುದ್ದೆಗೆ 2019ರ ನವೆಂಬರ್ ಉಪ ಲೋಕಾಯುಕ್ತರಾಗಿ ಸೇವೆ ಸಲ್ಲಿಸುತ್ತಿರುವ ನ್ಯಾ. ಬಿ.ಎಸ್.ಪಾಟೀಲ್ ಅವರನ್ನು ನೂತನ ಲೋಕಾಯುಕ್ತರಾಗಿ ನೇಮಕ ಮಾಡಲಾಗಿದೆ

ಸಿದ್ದರಾಮಯ್ಯ ಶುಭಾಶಯ: ರಾಜ್ಯದ ನೂತನ ಲೋಕಾಯುಕ್ತರಾಗಿ ನೇಮಕಗೊಂಡ ನಿವೃತ್ತ ನ್ಯಾಯಮೂರ್ತಿ ಭೀಮನಗೌಡ ಸಂಗನಗೌಡ ಪಾಟೀಲ್ ಅವರನ್ನು ವಿಧಾನಸಭೆ ವಿಪಕ್ಷ ನಾಯಕ ಸಿದ್ದರಾಮಯ್ಯ ಅವರು ಅಭಿನಂದಿಸಿ ಶುಭ ಹಾರೈಸಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ವರ್ಗೀಕೃತ ಜಾಹೀರಾತು


ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ತಕ್ಷಣ ಬೇಕಾಗಿದ್ದಾರೆ
ಮೈಸೂರಿನಲ್ಲಿ ಕೆಲಸ ಮಾಡಲು ಹುಡುಗರು ಹಾಗೂ ಹುಡುಗಿಯರು ಬೇಕಾಗಿದ್ದಾರೆ. ವಿದ್ಯಾರ್ಹತೆ: 7 ರಿಂದ SSLC, PUC, ITI, Diploma, BE ಯವರೆಗೂ
7899752014

ಮನೆ ಬಾಡಿಗೆಗಿದೆ
30x40, 2 BHK ಸೋಲಾರ್ ಸೌಲಭ್ಯವಿರುವ Semifurnished ಮನೆ ವಸಂತನಗರದಲ್ಲಿ ಬಾಡಿಗೆಗಿದೆ. ಸಂಪರ್ಕಿಸಿ:
9901717842 / 7406299802

ಮಂಟಪ ಮನೆ

ನಮ್ಮಲ್ಲಿ ಬೀಟೆ ಮತ್ತು ಹಲಸು ಮರಗಳಿಂದ ತಯಾರಾದ ಮೀನಾಕ್ಷಿ ಮಂಟಪ, ಮಂದಾಸನ ದೊರೆಯುತ್ತದೆ. ಕಂತುಗಳಲ್ಲಿ ಸಹ ಪಡೆಯಬಹುದು. ಶ್ರೀನಗರ ಮೈಸೂರು
9448207634 / 7658982244

HOME APPLIANCES SERVICE
ಫ್ರಿಡ್ಜ್, ವಾಷಿಂಗ್ ಮೆಶೀನ್, ಮೈಕ್ರೋ ವೋವೆನ್, LED, LCD, AC Sales & Service
Contact: Srinivas
9379699229

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ. ತರಬೇತಿಗಾಗಿ:
7406375196, 9880548596

TV ಕೆಟ್ಟಿದೆಯೇ?
LCD, LED TV
ಫ್ರಿಡ್ಜ್, ವಾಷಿಂಗ್ ಮೆಷಿನ್, Micro Oven Doorstep ಸರ್ವೀಸ್ ಮಾಡಿಕೊಡಲಾಗುತ್ತದೆ
ನುರಿತ ಸರ್ವೀಸ್ ಇಂಜಿನಿಯರ್‌ಗಳಿಂದ ಅತ್ಯಾಧುನಿಕ ಯಂತ್ರ ಬಳಸಿ LCD, LED ಪ್ಯಾನಲ್ ಬಾಂಡಿಂಗ್ ಕಡಿಮೆ ದರದಲ್ಲಿ ಮಾಡಿಕೊಡಲಾಗುತ್ತದೆ
ತೇಜು ಎಲೆಕ್ಟ್ರಾನಿಕ್ಸ್ ತ್ಯಾಗರಾಜ ರಸ್ತೆ, ಅಗ್ರಹಾರ
9342114069

ಬೇಕಾಗಿದ್ದಾರೆ
ಅಕೌಂಟೆಂಟ್ – 1 ಹುದ್ದೆ
ಟೆಲಿಕಾಲರ್ – 1 ಹುದ್ದೆ
ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
7829668666

FOR SALE / RENT
40 x 60 (Home / North Face)Near JSS School, 2nd Main Metagalli, Car for Sale (Taxi), Tata Manza (2016) B/w Tata indigo 2015 white, Rent House at Gokulam 7th Main 3rd stage 35,000 (Furnished)
9972837203

ಮನೆ ಮತ್ತು ರೂಂ ಬಾಡಿಗೆಗೆ ಇದೆ
ಅರವಿಂದನಗರ, 17ನೇ ಕ್ರಾಸ್, 2 ಬೆಡ್ ರೂಂ, Ground Floor ಮನೆ, UPS, Solar, Geyser ವ್ಯವಸ್ಥೆಯಿರುವ ಮನೆ ಮತ್ತು ಒಂದು ಹೊಸ ರೂಂ (attached) 1ನೇ ಮಹಡಿ, ಆರ್.ಕೆ.ನಗರ, ಸಾಯಿಬಾಬಾ ದೇವಸ್ಥಾನದ ಹತ್ತಿರ.
ಮನೆ: 9448247580
ರೂಂ: 9686863383

ಬ್ರಾಹ್ಮಣ ಪುರುಷ ಅಡುಗೆಯವರು ಬೇಕಾಗಿದ್ದಾರೆ
ಸ್ಥಳ: ವಿಜಯನಗರ, 3ನೇ ಹಂತ
8217561356
9448470706

ವಾಸ್ತು ಪ್ರಕಾರ
ಹೊಸದಾಗಿ ಮನೆ ಮತ್ತು ಆಲ್ಟ್ರೇಷನ್ ಕೆಲಸ / ಕನ್‌ಸ್ಟ್ರಕ್ಷನ್ ಮಾಡಿಕೊಡಲಾಗುತ್ತದೆ. ಒಂದು ಚದರಕ್ಕೆ 1,80,000 – *ಷರತ್ತು ಅನ್ವಯ. ಸ್ವಾಮಿ ಎಂ. ಸಿವಿಲ್ ಕಂಟ್ರಾಕ್ಟರ್
9945442361 / 9380885787

ಬೇಕಾಗಿದ್ದಾರೆ
ಹೋಟೆಲ್ ಕೆಲಸಕ್ಕೆ ವೆಯಿಟರ್ಸ್, ಕೌಂಟರ್ ಬಾಯ್ಸ್, ಚಾಟ್ಸ್, ಜ್ಯೂಸ್ ಮಾಸ್ಟರ್, ಕ್ಯಾಪ್ಟನ್‌ಗಳು ಬೇಕಾಗಿದ್ದಾರೆ. ಆಸಕ್ತರು ನೇರವಾಗಿ ವಿವರಗಳೊಡನೆ ಸಂಪರ್ಕಿಸಿ. ವ್ಯವಸ್ಥಾಪಕರು: ಹೋಟೆಲ್ ವಿಷ್ಣುಭವನ್, ಬೀಮಾ ಜುವೆಲ್ ಕೆಳಗೆ, ಬಿ ಎನ್ ರಸ್ತೆ, ಬಸ್ ನಿಲ್ದಾಣದ ಎದುರು ಮೈಸೂರು

airtel WANTED
Sales Executive Salary: 10,000/- + Incentive up to 8,000/-. Contact:
9972728134

ಶ್ರೀ ಗೌರಿಶಂಕರ ಟೂರಿಸ್ಟ್
10-07-22 (1 ದಿನ) ಕೋಟಿಲಿಂಗ ಘಾಟಿ ಸುಬ್ರಹ್ಮಣ್ಯ ಇತ್ಯಾದಿ.
12-08-22 (7 ದಿನ) ಕಾಶಿ, ಪ್ರಾಯಾಗ್‌ರಾಜ್, ಅಯೋಧ್ಯ, ಗಯಾ, ಬುದ್ಧಗಯಾ ಇತ್ಯಾದಿ.
8-10-22 (14 ದಿನ) ಗಂಗೋತ್ರಿ, ಯಮುನೋತ್ರಿ, ಕೇದಾರ್‌ನಾಥ್, ಬದರಿನಾಥ್, ಉತ್ತರಕಾಶಿ, ಮಸುರಿ, ಹರಿದ್ವಾರ್, ಋಷಿಕೇಶ್ ಇತ್ಯಾದಿ. (ವಿಮಾನ, ಟ್ರೈನ್ ಮತ್ತು ಎ.ಸಿ. ಬಸ್ಸು) (ಊಟ, ವಸತಿ ಸೇರಿರುತ್ತದೆ)
9620002114

WANTED
Marketing Executives having knowledge in Sales of Ceramic Tiles - 02 Nos (Male). Tiles Showroom Receptionist having knowledge in Tally 9 - 01 No. (Female) Raghuveer Home Trendz, #121, Rahul Arcade, Ground Floor, Service Road of Ring Road, R.R.Nagar, Mysore.
9902954721

Govt. Job ಇರುವ ವಿಧುರನಿಗೆ 2ನೇ ಸಂಬಂಧಕ್ಕೆ ವಧು ಬೇಕಾಗಿದೆ
Smart ಗೌಡ/ 5.7/ BE Govt. Engineer PWD Sector ಇರುವಂತಹ ಮಕ್ಕಳಿಲ್ಲದಂತಹ ವಿಧುರನಿಗೆ ನೌಕರಸ್ಥ/ ವಿಧವೆ/ ವಿಚ್ಛೇದಿತೆ ವಿದ್ಯಾವಂತ ವಧು ಬೇಕಾಗಿದೆ. ಯಾವುದೇ ಜಾತಿಯ ಅಭ್ಯಂತರವಿಲ್ಲ (ಮಕ್ಕಳಿದ್ದರು ಪರವಾಗಿಲ್ಲ), ಮೈಸೂರು
9742458242

Gem Selections
(A Part of Khanna Gems Group)
100% Natural Govt. Lab Certified Gemstones
ಶೇಕಡಾ 100 ರಷ್ಟು ನೈಸರ್ಗಿಕ ಸರ್ಕಾರಿ ಪ್ರಯೋಗಾಲಯದಿಂದ ಪ್ರಮಾಣೀಕೃತ ರತ್ನದ ಹರಳುಗಳು ದೊರೆಯುತ್ತವೆ.
HIG-3, Near Akshaya Bhandar, New Kantharaju Urs Rd. Kuvempu Nagar, Mysuru, Karnataka-570023
8152066999

TEACHERS TRAINING
NURSERY/ MONTESSORI/ KINDERGARTEN
ನೀವು ಒಬ್ಬ ಶಿಕ್ಷಕಿ ಯಾಗಬೇಕೇ ! SSLC ಪಾಸಾಗಿದೆ ಯಲ್ಲವೇ, ತಕ್ಷಣ ಸಂಪರ್ಕಿಸಿ , ತರಬೇತಿ ಪಡೆಯಿರಿ ನಂತರ ತಕ್ಷಣ ಕೆಲಸ PUC & DEGREE PASS OR FAIL APPLY, N T T TRAINING, EXAM & CERTIFICATE, Regs. By Govt of NCT (New Delhi)
9113980741

ಹೊಸ ಚೀಟಿಗಳ ಪ್ರಾರಂಭ
ಶ್ರೀ ನರಸಿಂಹಸ್ವಾಮಿ ಚಿಟ್ಸ್ (ಕ) ಪ್ರೈ.ಲಿ, ಮೈಸೂರು / ಹಾಸನ

ಚೀಟಿ ಮೊತ್ತ	ತಿಂಗಳು	ತಿಂಗಳ ಕಂತು	3ನೇ ತಿಂಗಳಿಂದ
1 ಲಕ್ಷ	25	4000/-	3000/-
2 ಲಕ್ಷ	25	8000/-	6000/-
5 ಲಕ್ಷ	25	20,000/-	15,000/-
10 ಲಕ್ಷ	50	20,000/-	15,000/-
10 ಲಕ್ಷ	100	10,000/-	7,500/-
25 ಲಕ್ಷ	100	25,000/-	18,750/-

7892303484 / 8749077453

ಬೇಕಾಗಿದ್ದಾರೆ
ನುಡಿ ಕನ್ನಡ ಟೈಪಿಂಗ್ ಮಾಡಬಲ್ಲ ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ. ಶ್ರೀ ರೇಣುಕಾ ಎಂಟರ್ ಪ್ರೈಸಸ್ ಪೂರ್ವ ಉಪ-ನೋಂದಣಾಧಿಕಾರಿಗಳ ಕಛೇರಿ ಎದುರು ಡಾ|| ರಾಜಕುಮಾರ್ ರಸ್ತೆ, ತ್ರಿವೇಣಿ ವೃತ್ತ, ಸಾತಗಳ್ಳಿ ಬಡಾವಣೆ, ಮೈಸೂರು
ಎಸ್.ಚಂದ್ರಶೇಖರ್: 9986030489

ಬೇಕಾಗಿದ್ದಾರೆ
ಬ್ರಾಹ್ಮಣ ಮಹಿಳೆ ಅಡುಗೆ ಸಹಾಯಕಿ ಬೇಕಾಗಿದ್ದಾರೆ.
9449380528
7026498386

WE ARE HIRING
Receptionist (Female)
Digital Marketing (Male)
Marketing & Sales Executives (Male) Manager (Male)
RVIN Group
Mail: rvingroup@gmail.com
Call / WA: 9901387775

HVAC
ADI DUCTS Since - 1986
TDF Ducting CLITS and Corner Factory Made Available in Mysore
Emai:- airduct59@gmail.com
9448059802
9590421998

ಬೋಳು ತಲೆಯ ಸಮಸ್ಯೆಯೇ?

ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಪ್ರೋತ್ಸಾಹಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU: 9611028523 MANGALORE: 9343142258

SDJ JEWELERS
ಪುರುಷರು ಮತ್ತು ಮಹಿಳೆಯರು Tele Callers ಮತ್ತು Sales Executive ಬೇಕಾಗಿದ್ದಾರೆ.
Qualification: SSLC/ PUC/ Degree/ Post Graduation
ಉಳಿದುಕೊಳ್ಳಲು PG ವ್ಯವಸ್ಥೆ ಇರುತ್ತದೆ
Salary : 20,000
8884304444

ಸೋಲಾರ್ ವಾಟರ್ ಹೀಟರ್
Solar Water Heater

ಸೇಲ್ಸ್, ಸರ್ವೀಸ್ ರಿಪೇರಿ, ಎಕ್ಸ್‌ಚೇಂಜ್ ಹಾಗೂ ಬಿಡಿ ಭಾಗಗಳಿಗಾಗಿ ಸಂಪರ್ಕಿಸಿ
Vinaykrishna
9611648636

S.M GOLD
ಗಿರವಿ ಚಿನ್ನಾಭರಣ ಖರೀದಿ
ಒಂದು ಗ್ರಾಂ ಚಿನ್ನಕ್ಕೆ 5100
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನ ಆಭರಣಗಳನ್ನು ನಾವೇ ಬಿಡಿಸಿ ಇಂದಿನ ಬೆಲೆಗೆ ತೆಗೆದುಕೊಳ್ಳುತ್ತೇವೆ ಕೂಡಲೇ ಸಂಪರ್ಕಿಸಿ.(T&C)
8050518881

Join ASFT
Fashion Design Courses
* Certification Course
* Diploma Course
* Advance Diploma Course
Alpha School of Fashion Technology & Interior Design
AT: SRIRAMPURA, GOKULAM, UDAYAGIRI, MYSORE
Mob: 7829937469, 9901803394

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree Pass / Fail ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ+ಟಿಟಿ, 15,200–86,000
9740733021 / 9535028750

ತಕ್ಷಣ ಬೇಕಾಗಿದ್ದಾರೆ
ಫ್ಯಾನ್ಸಿ ಗಿಫ್ಟ್ ಅಂಗಡಿಗೆ ಸೇಲ್ಸ್ ಕೆಲಸಕ್ಕೆ ಹುಡುಗರು ಅಥವಾ ಹುಡುಗಿಯರು ತಕ್ಷಣ ಬೇಕಾಗಿದ್ದಾರೆ. ವಯೋಮಿತಿ 25 ವರ್ಷಕ್ಕಿಂತ ಒಳಗೆ. ಮೆಗಾಶಾಪ್, ದೇವೇಗೌಡ ಸರ್ಕಲ್, ಮೈಸೂರು. ಸಂಪರ್ಕಿಸಿ:
7619270650
9148748787

ಬೇಕಾಗಿದ್ದಾರೆ
ಕನ್ನಡ ನುಡಿ ಹಾಗೂ ಇಂಗ್ಲಿಷ್ ಟೈಪಿಂಗ್ ಗೊತ್ತಿರುವ ಸ್ಪೀಡ್ ಇದ್ದು ನುರಿತ ಅನುಭವಿ ಮಹಿಳಾ DTP ಆಪರೇಟರ್ ಬೇಕಾಗಿದ್ದಾರೆ. ಜಿಲ್ಲಾ ಪತ್ರ ಬರಹಗಾರರು, ಶ್ರೀ ಕಾಳಿದಾಸ ಎಂಟರ್ ಪ್ರೈಸಸ್, ಡಾ||ರಾಜಕುಮಾರ್ ರಸ್ತೆ, ಸಾತಗಳ್ಳಿ, ತ್ರಿವೇಣಿ ಸರ್ಕಲ್, ಮೈಸೂರು
9880999105

MOBILE ರಿಪೇರಿ ಟ್ರೈನಿಂಗ್
18 ವರ್ಷದಿಂದ Mobile, Electrical, Electronics ಮತ್ತು Computer Hardware ರಿಪೇರಿ ಹೇಳಿಕೊಡುತ್ತಿರುವ ಏಕೈಕ ಸಂಸ್ಥೆಯಲ್ಲಿ ಶೀಘ್ರದಲ್ಲಿ ಹೊಸ ಬ್ಯಾಚ್ ಪ್ರಾರಂಭ. ಯಾವುದೇ ವಿದ್ಯಾರ್ಹತೆ ಹಾಗೂ ವಯೋಮಿತಿಯ ಅಗತ್ಯವಿಲ್ಲ. PG ವ್ಯವಸ್ಥೆಯು ಇರುತ್ತದೆ. ಕೂಡಲೇ ಸಂಪರ್ಕಿಸಿ:
SMM Institute,
ಶ್ರೀ ಬೀರಭದ್ರೇಶ್ವರಸ್ವಾಮಿ ದೇವಸ್ಥಾನದ ಎದುರು, ದಳವಾಯಿ ಶಾಲೆಯ ರಸ್ತೆ, ಕೆ.ಆರ್.ಮೊಹಲ್ಲಾ ಮೈಸೂರು.
Mob.: 9986926101

Singh BPO Solution
We are hiring urgently.
Any Qualification. Language: Hindi, Tamil, Telugu, Kannada, Malayalam (Any 2 language needed. Salary: 9K to 12K.
6366462651, 8660175473
Please contact to below given address: 2698/D4, 5th Cross, K.D. Road, V.V. Mohalla, Mysuru-02

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:
7676844160
6361056646

ತಕ್ಷಣ ಬೇಕಾಗಿದ್ದಾರೆ
GOLD COMPANYಯಲ್ಲಿ Field Executives ಕೆಲಸ ಮಾಡಲು ಯುವಕ ಯುವತಿಯರು ಬೇಕಾಗಿದ್ದಾರೆ ಸಂಬಳ = 10000+ Incentives ಉಳಿದುಕೊಳ್ಳಲು ರೂಮ್ ವ್ಯವಸ್ಥೆ ಇರುತ್ತದೆ. ಕೂಡಲೇ ಸಂಪರ್ಕಿಸಿ –
7338667866

ಹೊಸ ಮನೆ ಮಾರಾಟಕ್ಕಿದೆ
25X52, 39 ಚದರ, 3ನೇ ಮಹಡಿ, 11ಬಿ, ಖಾತಾ, ಶ್ರೀ ಸರಸ್ವತಿ ಸ್ಕೂಲ್ ಹತ್ತಿರ, ಬ್ಯಾಂಕ್ ಕಾಲೋನಿ ಮೇನ್ ರೋಡ್, ಬೋಗಾದಿ ಗ್ರಾಮ, ಮೈಸೂರು.
9900940340

WANTED FEMALE TELECALLERS
Language: Kannada, English & Hindi
Qualification: SSLC/ PUC/ Degree/ Post Graduation
Salary: Rs8,000 to Rs15,000 + Incentive
9538688412

Sudarshan Saur
SOLAR WATER HEATER

ATTRACTIVE OFFER
ಸೇಲ್ಸ್&ಸರ್ವೀಸ್
10 ವರ್ಷಗಳ ಗ್ಯಾರಂಟಿ
Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
9845175443

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

ಮನೆಯಿಂದಲೇ ಸಂಪಾದಿಸಿ
ಮನೆಯಿಂದಲೇ ಮೊಬೈಲ್, ಕಂಪ್ಯೂಟರ್ ಅಥವಾ ಕೈ ಬರವಣಿಗೆ ಮೂಲಕ ಉದ್ಯೋಗ ಮಾಡಿ 10,000 ರಿಂದ 30,000 ಸಂಪಾದಿಸಿ
7795560970

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ
9731891409

ಜಮೀನು ಮಾರಾಟಕ್ಕಿದೆ
ಮೈಸೂರು, ಹೆಚ್.ಡಿ.ಕೋಟೆ ಮುಖ್ಯ ರಸ್ತೆಯ 1 ಎಕರೆ, 18 ಗುಂಟೆ ಜಮೀನು, ಕಾಂಪೌಂಡ್ ಗೇಟ್ ಪೂರ್ಣ ಅಭಿವೃದ್ಧಿ ಪಡಿಸಲಾಗಿದೆ. ಕಮರ್ಷಿಯಲ್ ಪೆಟ್ರೋಲ್ ಬಂಕ್ ಹೋಟೆಲ್, ಡಾಬ ಉಪಯೋಗಕ್ಕೆ ಸೂಕ್ತವಾಗಿದೆ. ಸಂಪರ್ಕಿಸಿ.
9945661696
7975110748

ಸೈಟುಗಳು ಮಾರಾಟಕ್ಕಿದೆ
30x40, 30x50, 40x60
ಮೈಸೂರಿನಲ್ಲಿ ಕೇವಲ 99 ಸಾವಿರದಂತೆ ಮುಂಗಡ ಹಣ ಕಟ್ಟಿ ಪ್ರತಿ ತಿಂಗಳು 5 ಸಾವಿರದಂತೆ ಕಂತು ಕಟ್ಟಿ ಸೈಟು ನಿಮ್ಮದಾಗಿಸಿಕೊಳ್ಳಿ, ಮೈಸೂರು Airport ಹತ್ತಿರ
8660980069
9620803628

ಬಂಧನ ಮ್ಯಾರೇಜ್ ಬ್ಯೂರೋ
ಕರ್ನಾಟಕದ ಎಲ್ಲಾ ಜಾತಿಯ ಡಾಕ್ಟರ್ಸ್, ಇಂಜಿನಿಯರ್ಸ್ ಮತ್ತು ವಿದ್ಯಾವಂತ, ವಧು – ವರರಿಗೆ ನೇರ ಸಂಪರ್ಕಿಸಿ. ಫೋಟೋ & ಬಯೋಡೆಟಾ ವಾಟ್ಸಾಪ್ ಮಾಡಿರಿ. ನಮ್ಮ ಕಚೇರಿ, ಮೈಸೂರು / ಬೆಂಗಳೂರು
9449408551
bhandhana.com

LADIES STAFF REQUIRED
ಲೇಡಿಸ್ ಸ್ಟಾಫ್ ಬೇಕಾಗಿದ್ದಾರೆ
ಮ್ಯಾಚಿಂಗ್ ಹಾಗೂ ಬಟ್ಟೆ ಅಂಗಡಿಯಗಾಗಿ, ವಿವೇಕಾನಂದ ಸರ್ಕಲ್, ಮೈಸೂರು
7600601077
9449247590

HOUSE FOR LEASE
20x30 1st Floor, at No.1292, E & F Block, 14th Cross, Ramakrishna Nagar. Contact:
9945242865
9008179341

SHOP FOR RENT
Shop 12x12 in Irwin Road, Lakshkar Mohalla, Opp. to Sharadha Nursing Home.
9008179341
9945242865

ನಿಮ್ಮ ತಾರಸಿ ಸೋರುತ್ತಿದಿಯೇ
ನಿಮ್ಮ ಮನೆಯಲ್ಲಿ ನಲ್ಲಿ ಕೆಲಸ, ಟೈಲ್ಸ್ ಕೆಲಸ, ತಾರಸಿ ಸೋರಿಕೆ, ಬಣ್ಣದ ಕೆಲಸ ಹಾಗೂ ಸಿವಿಲ್ ಆಲ್ಟ್ರೇಷನ್ ಕೆಲಸದ ತೊಂದರೆ ಇದ್ದರೆ.. ಕರೆಮಾಡಿ
VASANTHA BUILDERS
9035012579
8151035074

ಹೆಲ್ತ್ ಕೇರ್ ತರಬೇತಿ
SSLC/PUC ಆದವರಿಗೆ ಡಿಪ್ಲಮೋ ಇನ್ ಹೆಲ್ತ್ ಕೇರ್ ತರಬೇತಿ ಕೊಡಲಾಗುತ್ತದೆ. ತರಬೇತಿ ಪಡೆದವರು ಉತ್ತಮ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ANM / GNM ಆದವರಿಗೆ ಕೆಲಸವಿದೆ. ಸೆಂಟ್ ಮೇರೀಸ್ ಆಸ್ಪತ್ರೆ, ಸಿಲ್ಕ್ ಫ್ಯಾಕ್ಟರಿ ಸರ್ಕಲ್, ಎನ್‌ಐಇ ಕಾಲೇಜು ಪಕ್ಕ, ಮೈಸೂರು
9916908454

TEACHERS REQUIRED
Qualification: D.Ed/B.Sc. B.Ed/B.A. B.Ed at Jnana Keerthi Convent, 7th Cross, S.C Road Janatha Nagar Mysore. Contact -
9538696655
9980968022

ಖಾತಾ ಕಳೆದಿದೆ
ನಿ.ಸಂ.161, 'ಎ' ಬ್ಲಾಕ್, ಅಳತೆ 9x12 ಮೀ ವನಿತಾರವರ ಹೆಸರಿನ ಮುಡಾ ಎಕ್ಸ್‌ಟ್ರಾಕ್ಟ್ ಕಳೆದು ಹೋಗಿರುತ್ತದೆ. ಬೆಮೆಲ್ ಎಂಪ್ಲಾಯಿಸ್ ಹೌಸ್ ಬಿಲ್ಡಿಂಗ್ ಕೋ ಆಪರೇಟಿವ್ ಸೊಸೈಟಿ ಬೋಗಾದಿ. ಸಿಕ್ಕಿದವರು ಕೂಡಲೇ ಸಂಪರ್ಕಿಸಿ
9008505061

ಬ್ಯುಸಿನೆಸ್ ಪ್ಲ್ಯಾನ್
ಬ್ಯುಸಿನೆಸ್ ಪ್ಲ್ಯಾನ್ ನಿಮ್ಮದು, ಬಂಡವಾಳ ನಮ್ಮದು. ಬಂದ ಆದಾಯದಲ್ಲಿ 50–50 ಈ ರೀತಿ ಬ್ಯುಸಿನೆಸ್ ಪ್ಲ್ಯಾನ್ ಇರುವವರು ಕೂಡಲೇ ಸಂಪರ್ಕಿಸಿ:
9901080314

HIRING
Duty Doctors required for a Reputed Hospital in City centre BAMS preferably Married
9845049079
7892974436

RENT / LEASE
30x40 independent & Ground House Rent at Vijaynagar, 3rd Stage. 40x60 G.F at Kuvempunagar. 30x40 Duplex House at Srirampura
9663136318

ಬೇಕಾಗಿದ್ದಾರೆ
ವೆಜ್, ನಾನ್‌ವೆಜ್ ಅಡುಗೆ ಭಟ್ಟರು, ಕ್ಲೀನಿಂಗ್ ಸ್ಟಾಫ್, ಸಪ್ಲೆಯರ್ಸ್ ಮತ್ತು ಹೆಲ್ಪರ್ಸ್ ಬೇಕಾಗಿದ್ದಾರೆ. ಸಂಪರ್ಕಿಸಿ:
9945389166
9845356677

WANTED
Required Security Officer for 8 hours duty (26 days) Salary: Rs.26,000/- Preferred: Ex Army Interest Candidates send your CV to nimishpvtltd@gmail.com Contact with Bio - Data : #380/A, 2nd Floor, Krishna Vilasa Road, Mysore-570001
9513999755

HOUSE FOR SALE
30X40 MUDA New 4 BHK Duplex, East Facing Door & Site, at Ramkrishnagar, Near Andolana Circle - Rs.1.55 Cr.
30X40 New 3 BHK Duplex with Borewell, N/F Site & E/F Door, Vijayanagar 4th Stage - Rs.1.58 Cr. (Brokers Excuse)
8660105902

ಬೇಕಾಗಿದ್ದಾರೆ
ಹೋಟೆಲ್ ಕೆಲಸಕ್ಕೆ ನುರಿತ ಕೆಲಸಗಾರರು ತಕ್ಷಣ ಬೇಕಾಗಿದ್ದಾರೆ.
1) ದೋಸೆ ಭಟ್ಟರು – ರೂ.20,000/– ರಿಂದ 25,000/–
2) ಅಡುಗೆ ಭಟ್ಟರು – ರೂ.25,000/– ರಿಂದ 30,000/–
3) ರುಬ್ಬುವವರು – 15,000/– ರಿಂದ 20,000/–
4) ಕೌಂಟರ್ ಮತ್ತು ಪಾರ್ಸಲ್ ಕಟ್ಟುವವರು 10,000/– ರಿಂದ 15,000/–
9916256503 / 9986205777

IMMEDIATE HIRING
1) PHP Developer
2) Digital Marketing
3) Animation Vedio Editor, Graphic Designer
4) Telecaller
5) Sales and Marketing
9742289302 / 9900327273

NAATYA (R)
Dance Academy
Dance Classes
Kids - Adult - Ladies Batches
Weekend Acting Classes, Fittness Class- Karate Class- Music Class
9964491957 / 9964566070

LIMITED SITES AVAILABLE
30x40, 30x50 MUDA Approved, Just 3.5km from Bogadi Ring Road.
7829872142
7411848781

ಕೆಲಸಕ್ಕೆ ಬೇಕಾಗಿದ್ದಾರೆ
Shop Assistant -1 Post (Male)
ವಯಸ್ಸು:– 18 ರಿಂದ 25 ವರ್ಷ, ವಿದ್ಯಾರ್ಹತೆ: SSLC, PUC, Degree, ಸಂಬಳ:– 10,000/– ದಿಂದ 15,000/–
ಗಾನವಿ ಇಂಟರ್ ನ್ಯಾಷನಲ್, 01, ಓಲ್ಡ್ ಮಹದೇವಪುರ ಮೇನ್ ರೋಡ್, ಫೋರಮ್ ಮಾಲ್ ಹತ್ತಿರ, ಉದಯಗಿರಿ, ಮೈಸೂರು
8123819136 / 9900283883

HOUSE FOR SALE / LEASE
25x30 Measurement, Shivrathreeshwara Nagar, Bannimantapa, B Layout, Contact:
9880496953
9008959015

SITES FOR SALE
(30x75) Saraswathipuram,
(50x80) Vijayanagar IV Stage (Near Ring Road 1.6 Cr)
9538839926

WANTED
Office Assistant with Computer Knowledge in Excel, Invoice & Billing Operator with 1 or 2 Year experience, Male Candidiates only.
9880104160
9880050459

SITE FOR SALE
30x50 E/F Nisarga Nagar, MUDA Katha, 3km from Srirampura Ring Road, Ready to Construct, Rate: 32 Lakhs.Contact:
9742491306

ಬೇಕಾಗಿದ್ದಾರೆ
ಮೈಸೂರು, ಕೊಡಗು, ಮಂಗಳೂರು ಮಾರ್ಗಗಳಲ್ಲಿ ಸಂಚರಿಸುವ ಲಾರಿಗಳಲ್ಲಿ ಪಾರ್ಸಲ್ ವಿತರಿಸಲು ದೃಢಕಾಯ ಯುವಕರು ಬೇಕಾಗಿದ್ದಾರೆ.
1) ಡೆಲಿವರಿ ಬಾಯ್ಸ್ 10000/–,
2) ಹೆವಿ ಡ್ರೈವರ್ 17,000/–
9740408488

ಹೋಟೆಲ್‌ಗೆ ಬೇಕಾಗಿದ್ದಾರೆ
ಸೌತ್ ಇಂಡಿಯನ್ ಭಟ್ಟರು, ನಾರ್ತ್ ಇಂಡಿಯನ್ ಭಟ್ಟರು, ದೋಸೆಭಟ್ಟರು, ರುಬ್ಬುವವರು ಮತ್ತು ರೋಟಿ, ಚೈನಿಸ್ ಮತ್ತು ಚಾಟ್ಸ್, ಹೆಲ್ಪರ್, ಸಪ್ಲೇಯರ್ ಕೌಂಟರ್ ಬಾಯ್, ಕ್ಲೀನರ್
8088337564

FOR SALE
Local Teakwood logs
9741174219
9035566255

2ಲೀ ಸನ್‌ಪ್ಯೂರ್ ಎಣ್ಣೆ ಉಚಿತ
25Kg MRಗೋಲ್ಡ್ BTರೈಸನ್ನು ಖರೀದಿಸಿದರೆ 2 ಲೀಟರ್ ಸನ್‌ಪ್ಯೂರ್ ಅಡುಗೆ ಎಣ್ಣೆ ಉಚಿತ ಅಥವಾ 5Kg ಬ್ರಾಂಡೆಡ್ ಗೋದಿ ಹಿಟ್ಟು 2Kgಸಕ್ಕರೆ, 1Kg ಫೈನ್ ತೊಗರಿಬೇಳೆಯನ್ನು ಉಚಿತವಾಗಿ ಕೊಡುತ್ತೇವೆ ಬೆಲೆ ರೂ 1350/- ಮಾತ್ರ (ಷರತ್ತು ಅನ್ವಯ)
ಸನ್‌ಶೈನ್ ಟ್ರೇಡರ್ಸ್
ಶಿವರಾಂಪೇಟೆಯ ಮೋರ್ ಮೆಗಾಸ್ಟೋರ್ ಎದುರಿನ ರಸ್ತೆ
9206470833 ಮೈಸೂರು

ಬೇಕಾಗಿದ್ದಾರೆ
ಸ್ವಯಂ ಸೇವಾ ಸಂಸ್ಥೆಯಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ. ಸಮಾಜ ಸೇವೆಯಲ್ಲಿ ಅನುಭವ ಪಡೆದಿರಬೇಕು. ಸಂಪರ್ಕಿಸುವ ದೂರವಾಣಿ ಸಂಖ್ಯೆ:
9035383823
9480373823

ಬೇಕಾಗಿದ್ದಾರೆ
ಮೈಸೂರಿನ BMO - COMPANY ಯಲ್ಲಿ ವಿವಿಧ ಹುದ್ದೆಗಳಿಗೆ SSLC ಮೇಲ್ಪಟ್ಟ 58 ಹುಡುಗ – ಹುಡುಗಿಯರು ಬೇಕಾಗಿದ್ದಾರೆ. ಹೊರಗಿನವರಿಗೆ ಉಚಿತ ವಸತಿ. ತಿಂಗಳಿಗೆ 15000–32000 ಗಳಿಸಬಹುದು. ಮೊದಲು ಬಂದವರಿಗೆ ಆದ್ಯತೆ. (ವಯೋಮಿತಿ 18–28) ಕರೆ ಮಾಡಿ. ಸಂಜನಾ:
7406719144 / 6366395484

ಅಂಜನ ಶಾಸ್ತ್ರದ ಮೂಲಕ ಪರಿಹಾರ
ಶ್ರೀ ಅಂಜನ ದೇವಿ ಆರಾಧಕರು ಪಂ|| ಶ್ರೀನಿವಾಸ್ ಆಚಾರ್ಯ
ಮೈಸೂರಿನಲ್ಲಿ ಬಹು ವರ್ಷದಿಂದ ಖಾಯಂ ಆಗಿ ನೆಲೆಸಿರುತ್ತಾರೆ. ಅನೇಕ ಜನರು ಇವರಲ್ಲಿ ಪರಿಹಾರ ಪಡೆದಿರುತ್ತಾರೆ. ಇವರು ವಂಶ ಪಾರಂಪರ್ಯ ಜ್ಯೋತಿಷ್ಯರು ಇವರಲ್ಲಿ ಜ್ಯೋತಿಷ್ಯ ಕೇಳಿದರೆ ನಿರಾಶೆ ಆಗುವ ಮಾತೇ ಇಲ್ಲ. ಫೋನಿನ ಮೂಲಕ ಪರಿಹಾರ.
9663466548

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೂರೆ ನಾಲ್ವರ ದೈವ ಚೌಡ್ಸ್ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ: ಸುಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳಕೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ಕೊಳ್ಳೇಗಾಲದ ಜ್ಯೋತಿಷ್ಯರು
ಮೋಡಿ ಮಾಂತ್ರಿಕರು ಪಂ.ಎಸ್.ಕುಮಾರಸ್ವಾಮಿ
ಮೊ.: 9880583804
ಸ್ತ್ರೀ ಪುರುಷ ಪ್ರೇಮ, ಸಂತಾನ, ದಾಂಪತ್ಯ ಸಮಸ್ಯೆ (Divorce) ಡಿವೋರ್ಸ್ ಪ್ರಾಬ್ಲಮ್, ಸಾಲಭಾದೆ, ಶತ್ರುಭಾದೇ, ದುಷ್ಟಶಕ್ತಿ, ಇಷ್ಟಪಟ್ಟವರು ನಿಮ್ಮಂತಾಗಲು, ಕೊಳ್ಳೇಗಾಲ ಮೋಡಿ ಮಾಂತ್ರಿಕ ಶಕ್ತಿಯಿಂದ ನಿಮ್ಮ ಯಾವುದೇ ಸಮಸ್ಯೆಗಳಿಗೆ ಎರಡೇ ದಿನದಲ್ಲಿ ಶಾಶ್ವತ ಪರಿಹಾರ ಶತಸಿದ್ಧ. ನಂಬಿ ಬನ್ನಿ. ಖಾಯಂ ವಿಳಾಸ: (Reliance Smart) ಹತ್ತಿರ, ATM ಪಕ್ಕ, ಟಿಕೇಟ್ ಬುಕ್ಕಿಂಗ್ ಕೌಂಟರ್ ಹತ್ತಿರ, (KSRTC) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 6 ರಲ್ಲಿ

ಮೈಸೂರು ಮಿತ್ರ ಗುರುವಾರ 16 ಜೂನ್ 2022

ಕುತ್ತಿಗೆ ಸೀಳಿ ಮಹಿಳೆಯ ಭೀಕರ ಹತ್ಯೆ

ಕಿಕ್ಕೇರಿಯಲ್ಲಿ ಹಾಡುಹಗಲೇ ಅಮಾನುಷ ಘಟನೆ



ಕಿಕ್ಕೇರಿ, ಜೂ.15– ವಿಶ್ರಾಂತಿಗೆಂದು ಮನೆಗೆ ತೆರಳಿದ್ದ ಮಹಿಳೆಯ ಕುತ್ತಿಗೆ ಸೀಳಿ ಭೀಕರವಾಗಿ ಹತ್ಯೆ ಮಾಡಿರುವ ಘಟನೆ ಪಟ್ಟಣದ ರಾಜ್ಯ ಹೆದ್ದಾರಿ ಬಳಿ ಬುಧವಾರ ಮಧ್ಯಾಹ್ನ ಸಂಭವಿಸಿದೆ.

ಪಟ್ಟಣದ ನಿವಾಸಿ ದಿವಂಗತ ಶ್ರೀಕಾಂತ್ ಅವರ ಪತ್ನಿ ಪುಷ್ಪಲತಾ (46) ಎಂಬುವರೇ ಕೊಲೆಯಾದವರಾಗಿದ್ದಾರೆ.

ಪುಷ್ಪಲತಾ ಅವರು ತಮ್ಮ ಪತಿ ಶ್ರೀಕಾಂತ್ ಕೆಲವು ವರ್ಷಗಳ ಹಿಂದೆ ನಿಧನರಾದ ನಂತರ ತಮ್ಮ ಪತಿಯ ಶ್ರೀಕಾಂತ್ ಮೆಡಿಕಲ್ ಸ್ಟೋರ್ ಮಾಲೀಕತ್ವ ವಹಿಸಿಕೊಂಡು ವ್ಯಾಪಾರ ಮಾಡಿ ಕೊಂಡಿದ್ದರು. ಒಂಟಿಯಾಗಿದ್ದ ಇವರು ಡಾಣನ ಹಳ್ಳಿಯಲ್ಲಿರುವ ತಮ್ಮ ಜಮೀನಿನಲ್ಲಿ ಫಾರಂ ಹೌಸ್ ನಿರ್ಮಿಸಿಕೊಂಡು ಅಲ್ಲಿಯೇ ವಾಸವಾಗಿದ್ದರು. ಜೊತೆಗೆ ಅಲ್ಲಿಂದಲೇ ಓಡಾಡಿಕೊಂಡಿದ್ದರು.

ತುರ್ತು ಸಂದರ್ಭದಲ್ಲಿ ಪಟ್ಟಣದಲ್ಲಿ ಇರಲು ಮೈಸೂರು– ಅರಸೀಕೆರೆ ರಾಜ್ಯ ಹೆದ್ದಾರಿಯಲ್ಲಿರುವ ತಮ್ಮ ಅಂಗಡಿ ಹತ್ತಿರದಲ್ಲಿರುವ ದೇವರಹಳ್ಳಿ ಮಂಜಣ್ಣ ಅವರ ಮನೆಯನ್ನು ಬಾಡಿಗೆ ಪಡೆದಿದ್ದರು. ಅಂಗಡಿಯಲ್ಲಿ ವ್ಯಾಪಾರ ಮಾಡಿ ಆಯಾಸವಾದಾಗ ಆ ಮನೆಗೆ ತೆರಳಿ ವಿಶ್ರಾಂತಿ ಪಡೆಯುತ್ತಿದ್ದರು.



ಪುಷ್ಪಲತಾ ವಾಸವಾಗಿದ್ದ ಮನೆಯ ಮುಂದೆ ಸೇರಿರುವ ಜನಸ್ತೋಮ.

ಬುಧವಾರ ಎಂದಿನಂತೆ ವ್ಯಾಪಾರ ಮಾಡಿ ಆಯಾಸಗೊಂಡ ಕಾರಣ ಸ್ವಲ್ಪ ಹೊತ್ತು ವಿಶ್ರಾಂತಿ ಪಡೆಯಲೆಂದು ಬಾಡಿಗೆ ಮನೆಗೆ ತೆರಳಿದ್ದರು. ಈಕೆಯ ಸಹೋದರ ನವೀನ ಕುಮಾರ್ ಪುಷ್ಪಲತಾ ಅವರ ಮೊಬೈಲ್‌ಗೆ ಕರೆ ಮಾಡಲಾಗಿ ಸ್ವಿಚ್ ಆಫ್ ಆಗಿದ್ದ ಕಾರಣ ಮನೆಗೆ ಹುಡುಕಿಕೊಂಡು ಬಂದಾಗ ತನ್ನ ಸಹೋದರಿ ಪುಷ್ಪಲತಾ ಕತ್ತು ಸೀಳಿ ರಕ್ತದ ಮಡುವಿನಲ್ಲಿ ಬಿದ್ದಿರುವ ದೃಶ್ಯ ಕಂಡು ಶಾಕ್ ಆದರು. ದುಷ್ಕರ್ಮಿಗಳು ಪುಷ್ಪಲತಾ ಅವರ ಚಲನವಲನಗಳನ್ನು ಗಮನಿಸಿ, ಅವರು ಮನೆಗೆ ವಿಶ್ರಾಂತಿಗೆಂದು ತೆರಳಿದ ಸಂದರ್ಭದಲ್ಲಿ ಹಿಂಬಾಲಿಸಿ, ಮನೆಗೆ ನುಗ್ಗಿ ಕುತ್ತಿಗೆ ಕೊಯ್ದು ಕೊಲೆ ಮಾಡಿ ಪರಾರಿಯಾಗಿರಬಹುದು ಎಂದು ಪೊಲೀಸರು ಸಂಶಯ ವ್ಯಕ್ತಪಡಿಸಿದ್ದಾರೆ.

ಕಿಕ್ಕೇರಿ ಪೊಲೀಸರಿಗೆ ಪುಷ್ಪಲತಾ ಅವರ ಪುತ್ರ ಶಮಂತ್ ದೂರು ನೀಡಿದ್ದು, ಪೊಲೀಸರು ದೂರು ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯತೀಶ್, ಡಿವೈಎಸ್‌ಪಿ ನವೀನಕುಮಾರ್ ಭೇಟಿ ನೀಡಿ, ಸ್ಥಳ ಪರಿಶೀಲನೆ ನಡೆಸಿದರು. ಜಿಲ್ಲಾ ಬೆರಳಚ್ಚು ತಜ್ಞರ ತಂಡ, ಶ್ವಾನದಳದವರು ಆಗಮಿಸಿ ಪರಿಶೀಲನೆ ನಡೆಸಿದರು. ದುಷ್ಕರ್ಮಿಯ ಪತ್ತೆಗಾಗಿ ಆಸುಪಾಸಿನಲ್ಲಿರುವ ಸಿಸಿ ಕ್ಯಾಮೆರಾ, ಮಾಹಿತಿ ಕಲೆ ಹಾಕುತ್ತಿರುವುದಾಗಿ ತಿಳಿಸಿದ್ದಾರೆ.

ನಾಯಿಯನ್ನು ಬೇಟೆಯಾಡಿದ ಚಿರತೆ

ಗ್ರಾಮದಲ್ಲಿ ಆತಂಕದ ವಾತಾವರಣ

ಮದ್ದೂರು, ಜೂ.15– ಚಿರತೆಯೊಂದು ನಾಯಿಯೊಂದರ ಮೇಲೆ ದಾಳಿ ಮಾಡಿ ತಿಂದು ಹಾಕಿರುವ ಘಟನೆ ಮಂಗಳ ವಾರ ರಾತ್ರಿ ತಾಲೂಕಿನ ಕಬ್ಬಾರೆ ಗ್ರಾಮದ ಬಳಿ ನಡೆದಿದೆ. ಗ್ರಾಮದ ಸ್ವಲ್ಪ ದೂರದಲ್ಲಿಯೇ ಚಿರತೆಯು ನಾಯಿ ಮೇಲೆ ದಾಳಿ ನಡೆಸಿರುವುದರಿಂದ, ಗ್ರಾಮಸ್ಥರು ಭಯಭೀತರಾಗಿದ್ದು, ಬುಧವಾರ ಬೆಳಗ್ಗೆ ಈ ಬಗ್ಗೆ ಸಂಬಂಧಪಟ್ಟ ಅರಣ್ಯಾಧಿಕಾರಿಗಳ ಗಮನಕ್ಕೆ ವಿಷಯ ತಿಳಿಸಿ ಚಿರತೆಯನ್ನು ಕೂಡಲೇ ಸೆರೆ ಹಿಡಿಯಬೇಕು ಹಾಗೂ ಅದಕ್ಕಾಗಿ ಬೋನನ್ನು ಇಡಬೇಕು ಎಂದು ಒತ್ತಾಯಿಸಿದ್ದಾರೆ.

ಅರಣ್ಯ ಇಲಾಖೆಯಲ್ಲಿ ನಮ್ಮ ತಾಲೂಕಿನ ವ್ಯಾಪ್ತಿಗೆ 3 ಬೋನ್‌ಗಳಿದ್ದು, ಅವುಗಳನ್ನು ಈಗಾಗಲೇ ಹಲವು ಕಡೆ ಚಿರತೆಗಳನ್ನು ಸೆರೆ ಹಿಡಿಯಲು ಇಡಲಾಗಿದೆ. ಸದ್ಯಕ್ಕೆ ಬೋನ್‌ಗಳಿಲ್ಲ ಎಂಬ ಬೇಜವಾಬ್ದಾರಿ ಉತ್ತರಕ್ಕೆ ಗ್ರಾಮಸ್ಥರು ಬೇಸರಗೊಂಡಿದ್ದಾರೆ. ಕೂಡಲೇ ಚಿರತೆಯನ್ನು ಹಿಡಿಯಲು ಗ್ರಾಮದ ಬಳಿ ಪರಿಶೀಲನೆ ಮಾಡಿ ಬೋನ್ ಇಡುವ ವ್ಯವಸ್ಥೆಯನ್ನು ಅರಣ್ಯಾಧಿಕಾರಿಗಳು ಮಾಡಲು ಕ್ರಮ ವಹಿಸಬೇಕು, ಆ ಮೂಲಕ ಗ್ರಾಮಸ್ಥರು ನೆಮ್ಮದಿಯಿಂದ ಭೀತಿಯಿಲ್ಲದೆ ಇರುವಂತೆ ಮಾಡಬೇಕು ಎಂದು ಗ್ರಾ.ಪಂ ಸದಸ್ಯ ಕಬ್ಬಾರೆ ರಾಘವೇಂದ್ರ ಅರಣ್ಯಾಧಿಕಾರಿಗಳನ್ನು ಒತ್ತಾಯಿಸಿದ್ದಾರೆ.

ಮರಳಿಗ ಗ್ರಾಪಂ ಅಧ್ಯಕ್ಷ ಸ್ಥಾನದ ಆಕಾಂಕ್ಷಿಯ ಅಪಹರಣ ಆರೋಪ

ಬೆಸಗರಹಳ್ಳಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ ಗ್ರಾಪಂ ಸದಸ್ಯ ಚೆಲುವರಾಜು

ಮದ್ದೂರು, ಜೂ.15– ಗ್ರಾಮ ಪಂಚಾಯತಿ ಅಧ್ಯಕ್ಷ ಚುನಾವಣೆಯಲ್ಲಿ ಸ್ಪರ್ಧಿಸುವುದನ್ನು ತಡೆಯಲು ಸದಸ್ಯನನ್ನೇ ಅಪಹರಿಸಿದ ಬಗ್ಗೆ ತಾಲೂಕಿನ ಬೆಸಗರಹಳ್ಳಿ ಠಾಣೆಯಲ್ಲಿ ದೂರು ದಾಖಲಾಗಿದೆ.

ತಾಲೂಕಿನ ಮರಳಿಗ ಗ್ರಾಪಂ ಸದಸ್ಯ ಚೆಲುವರಾಜು ಎಂಬುವರು ಹಾಲಿ ಅಧ್ಯಕ್ಷ ಜಿ.ಎನ್.ಸತ್ಯ ಸೇರಿದಂತೆ 9 ಮಂದಿ ವಿರುದ್ಧ ಪ್ರಕರಣ ದಾಖಲಿಸಿ, ಅಧ್ಯಕ್ಷ ಸ್ಥಾನದ ಆಕಾಂಕ್ಷಿಯಾಗಿದ್ದ ತನ್ನನ್ನು ಅಪಹರಿಸಿ ಮೈಸೂರಿನ ಲಾಡ್ಜ್‌ವೊಂದರಲ್ಲಿ ಕೂಡಿ ಹಾಕುವ ಮೂಲಕ ಚುನಾವಣೆಗೆ ಸ್ಪರ್ಧಿಸದಂತೆ ಮಾಡಿ, ಜಿ.ಎನ್.ಸತ್ಯ ಅವರು ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ ಎಂದು ದೂರಿದ್ದಾರೆ.

ವಿವರ: ಮರಳಿಗ ಗ್ರಾಮ ಪಂಚಾಯತಿ ಅಧ್ಯಕ್ಷ ಸ್ಥಾನಕ್ಕೆ ಜೂ.1ರಂದು ಚುನಾವಣೆ ನಿಗದಿಯಾಗಿತ್ತು. ಅಧ್ಯಕ್ಷ ಸ್ಥಾನದ ಮೀಸಲಾತಿಯನ್ನು ಹಿಂದುಳಿದ ವರ್ಗ 'ಎ'ಗೆ ಮೀಸಲಿಡಲಾಗಿತ್ತು. ಹೀಗಾಗಿ ತಾನು ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಲು ತಯಾರಿ ಮಾಡಿಕೊಂಡಿದ್ದು, ಮೇ 30ರಂದು ಜಿ.ಎನ್. ಸತ್ಯ ತಾಕೀತಿನ ಮೇರೆಗೆ ಸದಸ್ಯ ರವೀಂದ್ರ ಹಾಗೂ ಸಂಗಡಿಗರು ತನ್ನನ್ನು ಅಧ್ಯಕ್ಷನನ್ನಾಗಿ ಮಾಡುತ್ತೇವೆ ಎಂದು ಹೇಳಿ, ಎಂಸಿಡಿಸಿಸಿ ಬ್ಯಾಂಕ್ ಬೆಸಗರಹಳ್ಳಿ ಶಾಖೆಯ 2 ಖಾಲಿ ಚೆಕ್‌ಗಳಿಗೆ ಹಾಗೂ ಆನ್‌ಡಿಮ್ಯಾಂಡ್ ಪ್ರೋನೋಟ್‌ಗೆ ಸಹಿ ಮಾಡಿಸಿಕೊಂಡು ಚಾಮುಂಡಿಬೆಟ್ಟಕ್ಕೆ ಹೋಗಿ ಪೂಜೆ ಮಾಡಿಕೊಂಡು ಬರೋಣ ಎಂದು ಕರೆದರು. ಇವರ ಮಾತನ್ನು ನಂಬಿ ನಾನು ಮೈಸೂರಿಗೆ ಹೋಗಿದ್ದೆ ಎಂದು ಚೆಲುವರಾಜು ತನ್ನ ದೂರಿನಲ್ಲಿ ತಿಳಿಸಿದ್ದಾರೆ.

ಮೈಸೂರಿಗೆ ಹೋದ ನಂತರ ಅಲ್ಲಿನ ವಿಎನ್‌ಎಸ್ ಲಾಡ್ಜ್‌ನಲ್ಲಿ ನನ್ನನ್ನು ಕೂಡಿಹಾಕಿದ್ದಲ್ಲದೇ, ಸತ್ಯ ಮತ್ತಿತರರು ಕೊಲೆ ಬೆದರಿಕೆಯನ್ನು ಹಾಕಿದ್ದಾರೆ. ಅಧ್ಯಕ್ಷ ಸ್ಥಾನದ ಚುನಾವಣೆ ಮುಗಿದ ನಂತರ ತನ್ನನ್ನು ರವೀಂದ್ರ ಮತ್ತು ಪುಟ್ಟಸ್ವಾಮಿ ಇತರರು ಮಂಡ್ಯದ ಬಸ್ ನಿಲ್ದಾಣದಲ್ಲಿ ಬಿಟ್ಟು ಹೋಗಿದ್ದಾರೆ ಎಂದು ಆರೋಪಿಸಿರುವ ಚೆಲುವರಾಜು, ತನ್ನ ಅಪಹರಣ ಕೃತ್ಯದಲ್ಲಿ ಅವಿರೋಧವಾಗಿ ಅಧ್ಯಕ್ಷ ಸ್ಥಾನಕ್ಕೆ ಆಯ್ಕೆಯಾಗಿರುವ ಜಿ.ಎನ್. ಸತ್ಯ, ಎಂ.ಹೆಚ್. ಜೀವನ್, ಎಂ. ಸ್ವಾಮಿ, ಎಂ.ಸಿ. ಯೋಗಾನಂದ, ಎಂ.ಸಿ. ಪುಟ್ಟಸ್ವಾಮಿ (ತಾತಪ್ಪ), ಎಂ.ಎನ್. ಶ್ರೀನಿವಾಸ್, ಎಂ.ಬಿ. ವೆಂಕಟೇಶ್ ಭಾಗಿಯಾಗಿದ್ದಾರೆ ಎಂದು ಜೂನ್ 13ರಂದು ನೀಡಿದ ದೂರಿನಲ್ಲಿ ತಿಳಿಸಿದ್ದಾರೆ.

ಬೆಸಗರಹಳ್ಳಿ ಠಾಣೆ ಪೊಲೀಸರು ಈ ಸಂಬಂಧ ಭಾರತೀಯ ದಂಡ ಸಂಹಿತೆ 363, 342, 506, 34ರಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ರಸ್ತೆ ಅಭಿವೃದ್ಧಿ ಕಾಮಗಾರಿ ಪರಿವೀಕ್ಷಣೆ

ಮಂಡ್ಯ, ಜೂ.15– ರಾಷ್ಟ್ರೀಯ ಗುಣ ನಿಯಂತ್ರಕ ರಮೇಶ್ ಕುಮಾರ್ ಖಾರೆ ಅವರು ಜಿಲ್ಲೆಯ ಕೆ.ಆರ್.ಪೇಟೆ, ಮದ್ದೂರು, ಮಳವಳ್ಳಿ, ಮಂಡ್ಯ, ನಾಗಮಂಗಲ ಮತ್ತು ಪಾಂಡವಪುರ ತಾಲೂಕಿನ ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆ ಹಂತ–3ರ ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಜೂ.17ರ ವರೆಗೆ ಪರಿವೀಕ್ಷಣೆ ಮಾಡಲಿದ್ದಾರೆ ಎಂದು ಮಂಡ್ಯ ಆರ್‌ಡಿಪಿಆರ್ ಯೋಜನಾ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಕ್ತಕ್ಕೆ ರಕ್ತವೇ ಪರ್ಯಾಯ: ಡಾ.ಅನಿಲ್‌ಕುಮಾರ್



ಮಂಡ್ಯ,ಜೂ.15(ಮೋಹನ್‌ರಾಜ್)– ಪ್ರಪಂಚದಲ್ಲಿ ವೈಜ್ಞಾನಿಕವಾಗಿ ಹಲವಾರು ಆವಿಷ್ಕಾರಗಳಾದರೂ ರಕ್ತಕ್ಕೆ ರಕ್ತವೇ ಪರ್ಯಾಯ ಎಂದು ಜಿಲ್ಲಾ ಆರ್.ಸಿ.ಎಚ್ ಹಾಗೂ ನೋಡಲ್ ಅಧಿಕಾರಿ ಡಾ. ಅನಿಲ್‌ಕುಮಾರ್ ಹೇಳಿದರು.

ನಗರದಲ್ಲಿರುವ ಜಿಲ್ಲಾ ಕಾರಾಗೃಹದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯ್ತಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಏಡ್ಸ್ ಪ್ರತಿಬಂಧಕ ಮತ್ತು ನಿಯಂತ್ರಣ ಘಟಕ, ಜಿಲ್ಲಾ ಕೇಂದ್ರ ಕಾರಾ ಗೃಹ, ಅನನ್ಯ ಸಂಸ್ಥೆ, ನಗರ ಪ್ರಾಥಮಿಕ ಆರೋಗ್ಯ ಕೇಂದ್ರ ಕ್ಯಾತುಂಗೆರೆ ಬಡಾವಣೆ ಇವರು ಆಯೋಜಿಸಿದ್ದ ವಿಶ್ವ ರಕ್ತದಾನಿಗಳ ದಿನಾಚರಣೆ ಅಂಗವಾಗಿ ರಕ್ತದಾನ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಆರೋಗ್ಯವಂತ ಮಹಿಳೆ ಮತ್ತು ಪುರುಷರು ರಕ್ತದಾನ ಮಾಡಲು ಅರ್ಹರು, ಸ್ವಯಂ ಪ್ರೇರಿತ ರಕ್ತದಾನದಿಂದ 4 ಮಂದಿಗೆ ಜೀವ ಉಳಿಸುವ ಸದುಪಯೋಗವಿದೆ ಅಪಘಾತ, ರಕ್ತಹೀನತೆಯುಳ್ಳವರಿಗೆ ಶಸ್ತ್ರಚಿಕಿತ್ಸೆಯಲ್ಲಿ ರಕ್ತದ ಬೇಡಿಕೆ ಹೆಚ್ಚಿರುತ್ತದೆ ಎಂದರು.

ಬಳಿಕ ಮಾತನಾಡಿದ ಕೃಷಿಕ ಲಯನ್ಸ್ ಸಂಸ್ಥೆ ಆಡಳಿತಾಧಿಕಾರಿ ಕೆ.ಟಿ. ಹನುಮಂತು ಅವರು, ಭಾರತದಲ್ಲಿ ಪ್ರತಿ ವರ್ಷ 5 ಕೋಟಿ ರಕ್ತದ ಯುನಿಟ್ ಅವಶ್ಯ ವಿದೆ, ಕೇವಲ 2.5 ಕೋಟಿ ಯುನಿಟ್ ರಕ್ತ ಸಂಗ್ರಹವಾಗುತ್ತಿದೆ. ಜೀವ ಉಳಿವಿಗಾಗಿ ರಕ್ತ ದಾನ ಅತ್ಯಗತ್ಯ ಎಂದು ಮಾಹಿತಿ ನೀಡಿದರು.

ರಾಜ್ಯದಲ್ಲಿ ಸುಮಾರು 248 ರಕ್ತನಿಧಿ ಕೇಂದ್ರಗಳಿವೆ. ಪ್ರತಿದಿನ 24 ಗಂಟೆ ರಕ್ತ ಸಂಗ್ರಹ ಕಾರ್ಯ ಮಾಡಲಾಗುತ್ತದೆ. ಕರ್ನಾಟಕ ರಾಜ್ಯ ರಕ್ತದಾನದಲ್ಲಿ ಕೊರತೆ ಎದುರಿಸುತ್ತಿಲ್ಲ. ಕಳೆದ ಕೋವಿಡ್–19ರ ಆರಂಭ ದಿನಗಳಲ್ಲಿ ಸಾಕಷ್ಟು ರಕ್ತದ ಸಂಗ್ರಹ ಕೊರತೆ ಎದುರಿಸಿದ್ದೇವೆ ಎಂದರು.

ರಾಜ್ಯದಲ್ಲಿ ಪ್ರತಿವರ್ಷ 8 ಲಕ್ಷ ಯುನಿಟ್ ರಕ್ತದ ಅವಶ್ಯವಿದೆ. ಕೋವಿಡ್–19ರ ದಿನಗಳಲ್ಲಿ ಮಾತ್ರ ತೊಂದರೆ ಉಂಟಾಗಿದೆ, 5 ಲಕ್ಷ ಯುನಿಟ್ ರಕ್ತ ಮಾತ್ರ ಸಂಗ್ರಹ ವಾಗಿದೆ. 3 ಲಕ್ಷ ಕೊರತೆ ಉಂಟಾಗಿತ್ತು. 2022ನೇ ಸಾಲಿನಲ್ಲಿ 7.5 ಕೋಟಿ ಯುನಿಟ್ ರಕ್ತ ಸಂಗ್ರಹವಾಗಿದೆ. ಬೇರೆ ಬೇರೆ ರಾಜ್ಯಗಳಲ್ಲಿ ಸಮಗ್ರ ರಕ್ತ ಸಂಗ್ರಹ ಅರಿವು ಕಡಿಮೆ ಎಂದು ಮಾಹಿತಿ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಕಾರಾಗೃಹ ಅಧೀಕ್ಷಕ ಪಿ.ಕೆ.ಲೋಕೇಶ್ ಮಾತನಾಡಿ, ಜೈಲಿನಲ್ಲಿರುವ ವಿಚಾರಾಧೀನ ಖೈದಿಗಳು ರಕ್ತದಾನ ಮಾಡಲು ಪ್ರೇರಣೆಗಾಗಿ ಇಂತಹ ಅರಿವು ಕಾರ್ಯಕ್ರಮ ಮಾಡಲಾಗುತ್ತಿದೆ. ನ್ಯಾಯಾಧೀಶರ ಅನುಮತಿ ಮೇರೆಗೆ ಖೈದಿಗಳು ರಕ್ತದಾನ ಮಾಡಬಹುದು, ಸ್ವಯಂ ಪ್ರೇರಿತವಾಗಿ ಅರ್ಜಿ ಸಲ್ಲಿಸಿರುವುದನ್ನು ನ್ಯಾಯಾಧೀಶರ ಅನುಮತಿ ಪಡೆದು ರಕ್ತದಾನಕ್ಕೆ ಅವಕಾಶ ನೀಡಲಾಗುವುದು ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಪಿಇಎಸ್ ಇಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿಗಳು ಮತ್ತು ಜೈಲರ್ ಅಧಿಕಾರಿಗಳು ಸ್ವಯಂ ಪ್ರೇರಿತರಾಗಿ ಜೈಲ್ ಆವರಣದಲ್ಲಿ ರಕ್ತದಾನ ಮಾಡಿದ್ದನ್ನು ಮಿಮ್ಸ್ ರಕ್ತನಿಧಿ ಕೇಂದ್ರದ ವೈದ್ಯರು ಮತ್ತು ರಫೀಕ್ ನೇತೃತ್ವದಲ್ಲಿ ಸಿಬ್ಬಂದಿಗಳು ಸಂಗ್ರಹಿಸಿಕೊಂಡರು.

ಕಾರ್ಯಕ್ರಮದಲ್ಲಿ ನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ಆರ್. ಶಶಿಕಲಾ, ಪಿಇಎಸ್ ಇಂಜಿನಿಯರಿಂಗ್ ಕಾಲೇಜಿನ ಐಎಸ್‌ಟಿ ವಿಭಾಗದ ಡಾ.ಶಿವಕುಮಾರ್, ಡಾ.ವೀಣಾ, ಆರೋಗ್ಯ ಇಲಾಖೆಯ ಅಧಿಕಾರಿಗಳಾದ ಶಿವಾನಂದ, ಮಂಗಳಮ್ಮ, ಜೈಲರ್ ಜಯರಾಮು, ರವಿಕುಮಾರ್ ಹಾಗೂ ಕೃಷಿಕ ಲಯನ್ಸ್ ಸಂಸ್ಥೆಯ ಉಪಾಧ್ಯಕ್ಷ ಮೋಹನ್‌ಕುಮಾರ್, ಅನನ್ಯ ಹಾರ್ಟ್ ಸಂಸ್ಥೆಯ ಅಧ್ಯಕ್ಷೆ ಅನುಪಮಾ ಇದ್ದರು.

ನೇರ ಪ್ರವೇಶಾತಿ

ಮಂಡ್ಯ ಜೂ.15– ಪಾಂಡವಪುರ ತಾಲೂಕು ಚಿನಕುರುಳಿ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ವತಿಯಿಂದ ಜೂ.14 ರಿಂದ ಜೂ.27 ರವರೆಗೆ ಸಂಸ್ಥೆಯಲ್ಲಿ ನೇರ ಪ್ರವೇಶಾತಿ ಉಳಿಕೆ ಇರುವ ಸ್ಥಾನಗಳಿಗೆ (ಮೊದಲು ಬಂದವರಿಗೆ ಮೊದಲ ಆದ್ಯತೆ ಮೇರೆಗೆ) ಫಿಟ್ಟರ್, ಟರ್ನರ್, ಎಂಆರ್‌ಎಸಿ ಎಂ.ಎಂ.ವಿ, ಎಲೆಕ್ಟ್ರಿಷಿಯನ್, ಎಲೆಕ್ಟ್ರಾನಿಕ್ ಮೆಕಾನಿಕ್ ಮತ್ತು ಡೀಸೆಲ್ ಮೆಕಾನಿಕ್ ವೃತ್ತಿಗಳಿಗೆ ಅವಕಾಶ ಕಲ್ಪಿಸಲಾಗುವುದು.

ಆಸಕ್ತರು ಎಸ್‌ಎಸ್‌ಎಲ್‌ಸಿ ಉತ್ತೀರ್ಣರಾಗಿರುವ ಅಥವಾ ಪಿಯುಸಿ ಅನುತ್ತೀರ್ಣರಾಗಿರುವ ವಿದ್ಯಾರ್ಥಿಗಳು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳ ಬಹುದು.

ಹೆಚ್ಚಿನ ಮಾಹಿತಿಗಾಗಿ ಪಾಂಡವಪುರ ತಾಲೂಕು ಚಿನಕುರುಳಿ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಪ್ರಾಚಾರ್ಯರನ್ನು ಸಂಪರ್ಕಿಸಬಹುದೆಂದು ಪಾಂಡವಪುರ ತಾಲೂಕಿನ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರಳಕುಪ್ಪೆ ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ವಾಸುದೇವ್ ಆಯ್ಕೆ



ಪಾಂಡವಪುರ, ಜೂ.15– ತಾಲೂಕಿನ ಅರಳಕುಪ್ಪೆ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಆರ್.ವಾಸುದೇವ್ ಅವಿರೋಧವಾಗಿ ಆಯ್ಕೆಯಾದರು. ಸಂಘದ ಹಿಂದಿನ ಅಧ್ಯಕ್ಷ ಬಿ.ಸಿಂಗ್ರೀಗೌಡ ಅವರ ರಾಜೀನಾಮೆಯಿಂದ ತೆರವಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಬುಧವಾರ ನಡೆದ ಚುನಾವಣೆಯಲ್ಲಿ ಆರ್.ವಾಸುದೇವ್ ಮಾತ್ರ ನಾಮಪತ್ರ ಸಲ್ಲಿಸಿದ್ದರು. ಇವರನ್ನು ಹೊರತುಪಡಿಸಿ ಉಳಿದ ಯಾವೊಬ್ಬ ನಿರ್ದೇಶಕರು ನಾಮಪತ್ರವನ್ನು ಸಲ್ಲಿಸದ ಹಿನ್ನೆಲೆಯಲ್ಲಿ ಆರ್.ವಾಸುದೇವ್ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿದೆ ಎಂದು ಚುನಾವಣಾಧಿಕಾರಿ ಎಂ.ಎಸ್.ಪಾರ್ವತಮ್ಮ ಅವರು ಘೋಷಿಸಿದರು. ಈ ಸಂದರ್ಭದಲ್ಲಿ ಉಪಾಧ್ಯಕ್ಷೆ ಇಂದ್ರಮ್ಮ, ಮಾಜಿ ಅಧ್ಯಕ್ಷ ಬಿ.ಸಿಂಗ್ರೀಗೌಡ, ನಿರ್ದೇಶಕರಾದ ಸೋಮೇಗೌಡ, ಚಿಕ್ಕಯ್ಯ, ಸರೋಜಮ್ಮ, ಮಂಜುಳ, ಎ.ಸಿ.ಜ್ಞಾನೇಶ್‌ಕುಮಾರ್, ಪರಮೇಶ್, ರತ್ನಮ್ಮ, ಎಪಿಎಂಸಿ ಮಾಜಿ ಅಧ್ಯಕ್ಷ ಕುಳ್ಳೇಗೌಡ, ಗ್ರಾಪಂ ಮಾಜಿ ಅಧ್ಯಕ್ಷ ಮಹದೇವು, ಗ್ರಾಪಂ ಉಪಾಧ್ಯಕ್ಷ ಪೇಡರವಿ, ಸದಸ್ಯ ರಾಜು, ಜೆಡಿಎಸ್ ಮುಖಂಡರಾದ ಸೋಮು, ಉರುಳಿಮಹೇಶ್, ಪ್ರಜ್ವಲ್, ಪ್ರಕಾಶ್, ಪ್ರಶಾಂತ್, ಕಾರ್ಯದರ್ಶಿ ಕೆ.ಜಯದೇವು, ಹಾಲು ಪರೀಕ್ಷಕ ಎಸ್.ಮಹೇಂದ್ರ ಸೇರಿದಂತೆ ಹಲವರು ಹಾಜರಿದ್ದರು.

ಒಂದನೇ ಪುಟದಿಂದ

ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಆರಂಭ

ನಡೆಯಲಿದೆ. ಜು.2 ನಾಮಪತ್ರ ವಾಪಸ್ ಪಡೆಯುವುದಕ್ಕೆ ಕೊನೆಯ ದಿನವಾಗಿರಲಿದೆ. ಹಾಲಿ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರ ಅವಧಿ ಜು.24ಕ್ಕೆ ಪೂರ್ಣಗೊಳ್ಳಲಿದ್ದು, ಮತ ಎಣಿಕೆ ಜುಲೈ 21ರಂದು ನಡೆಯಲಿದೆ. ರಾಜ್ಯಗಳ ವಿಧಾನಸಭೆಯ ಶಾಸಕರು, ಕೇಂದ್ರಾಡಳಿತ ಪ್ರದೇಶಗಳ ಶಾಸಕರು, ಸಂಸತ್ ಸದಸ್ಯರು ಮತ ಚಲಾಯಿಸುವ ಮೂಲಕ ರಾಷ್ಟ್ರಪತಿಗಳನ್ನು ಆಯ್ಕೆ ಮಾಡಲಿದ್ದಾರೆ. ನಾಮನಿರ್ದೇಶನಗೊಂಡ ರಾಜ್ಯಸಭೆಯ ಸದಸ್ಯರು ಹಾಗೂ ವಿಧಾನಪರಿಷತ್‌ನ ಸದಸ್ಯರಿಗೆ ರಾಷ್ಟ್ರಪತಿಗಳನ್ನು ಆಯ್ಕೆ ಮಾಡಲು ಮತದಾನ ಮಾಡುವ ಅವಕಾಶ ಇರುವುದಿಲ್ಲ.

ಖಾಸಗಿ ರೈಲು ಕಾರ್ಯಾರಂಭ

ಖಾಸಗಿ ರೈಲುಸೇವೆಗೆ ಚಾಲನೆ ದೊರೆತಿದ್ದು, ರೈಲು ತಮಿಳುನಾಡಿನ ಕೊಯ ಮತ್ತೂರು ಉತ್ತರ ರೈಲು ನಿಲ್ದಾಣದಿಂದ ಶಿರಡಿ ನಡುವೆ ಸಂಚರಿಸುತ್ತದೆ. ಶಿರಡಿಗೆ ತಲುಪುವ ಮೊದಲು, ರೈಲು ತಿರುಪುರ್, ಈರೋಡ್, ಸೇಲಂ ಜೋಲಾರ್‌ಪೇಟ್, ಬೆಂಗಳೂರು ಯಲಹಂಕ, ಧರ್ಮಾವರ, ಮಂತ್ರಾಲಯ ರಸ್ತೆ (ನಿಲುಗಡೆ), ಮತ್ತು ವಾಡಿಯಲ್ಲಿ ನಿಲ್ಲುತ್ತದೆ. ಖಾಸಗಿ ರೈಲಿನ ದರಗಳು ಭಾರತೀಯ ರೈಲ್ವೆಗಳು ವಿಧಿಸುವ ನಿಯಮಿತ ರೈಲು ಟಿಕೆಟ್ ದರಗಳಿಗೆ ಸಮನಾಗಿರುತ್ತದೆ. ಶಿರಡಿ ಸಾಯಿ ಬಾಬಾ ದೇವಸ್ಥಾನದಲ್ಲಿ ವಿಶೇಷ ವಿಐಪಿ ದರ್ಶನ ಒದಗಿಸುತ್ತದೆ. ದಕ್ಷಿಣ ರೈಲ್ವೇ ಮಜ್ದೂರ್ ಯೂನಿಯನ್‌ಗೆ ಸೇರಿದ ರೈಲ್ವೇ ನೌಕರರ ಗುಂಪು ಖಾಸಗಿ ರೈಲು ಸೇವೆಗೆ ವಿರೋಧ ವ್ಯಕ್ತಪಡಿಸಿದ್ದಾರೆ. ಈ ಖಾಸಗಿ ರೈಲು ಸೇವೆ ಭಾರತೀಯ ರೈಲ್ವೆಯನ್ನು ಖಾಸಗೀಕರಣಗೊಳಿಸುವ ಯೋಜನೆಯಾಗಿದೆ ಎಂದು ಆರೋಪಿಸಿದ್ದಾರೆ.

ನೀರು ಸಂಪರ್ಕ ಸಕ್ರಮ

ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿರುವ ಜಲಮೂಲಗಳಿಂದ ನೀರನ್ನು ಪ್ರತಿ ಮನೆಗೂ ತಲುಪಿಸುವುದೇ ಈ ಕಾರ್ಯಕ್ರಮದ ಉದ್ದೇಶವಾಗಿದೆ. ಸ್ಥಳೀಯ ಸಂಸ್ಥೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯೇ ಇಲ್ಲದಂತೆ ನೋಡಿಕೊಳ್ಳುವುದು ಇದರ ಉದ್ದೇಶ ಎಂದು ಸಚಿವರು ಸ್ಪಷ್ಟಪಡಿಸಿದರು. ಜಲಮೂಲಗಳು ಇಲ್ಲದ ಕಡೆ ಏನು ಮಾಡಬೇಕು, ಯಾವ ರೀತಿ ಪರಿಹಾರ ಒದಗಿಸಬೇಕು ಎಂದು ಚಿಂತನೆ ನಡೆದಿದೆ ಎಂದ ಅವರು, ಒಟ್ಟಿನಲ್ಲಿ ಕರ್ನಾಟಕ ದಾಹಮುಕ್ತ ರಾಜ್ಯವಾಗಬೇಕು ಎಂಬುದು ನಮ್ಮ ಗುರಿ ಎಂದರು.

ಇಂದಿನಿಂದ ಸಿಇಟಿ

ಪರೀಕ್ಷೆ ನಡೆಯಲಿದ್ದು, ಈ ಪೈಕಿ 87 ಕೇಂದ್ರಗಳು ಬೆಂಗಳೂರಿನಲ್ಲಿವೆ. ಯಾವುದೇ ಅಕ್ರಮಕ್ಕೆ ಅವಕಾಶ ನೀಡಬಾರದೆಂಬ ಉದ್ದೇಶದಿಂದ ಈ ಬಾರಿ ಪ್ರತಿಯೊಂದು ಕೇಂದ್ರದ ಪರೀಕ್ಷಾ ಪ್ರಕ್ರಿಯೆಯನ್ನೂ ಸಮಗ್ರವಾಗಿ ವಿಡಿಯೋ ಚಿತ್ರೀಕರಣ ಮಾಡಲಾಗುವುದು. ಜತೆಗೆ ಪ್ರಶ್ನೆಪತ್ರಿಕೆ ಪೂರೈಕೆ ಇತ್ಯಾದಿಗಳನ್ನು ಹದ್ದಿನ ಕಣ್ಣಿನ ಪಹರೆಯಲ್ಲಿ ನಡೆಸಲಾಗುವುದು ಎಂದರು. ಸಿಇಟಿ ಪರೀಕ್ಷೆಯಲ್ಲಿ ಪ್ರಶ್ನೆ ಮತ್ತು ಉತ್ತರಗಳನ್ನು ಇಂಗ್ಲಿಷ್ ಹಾಗೂ ಕನ್ನಡ ಎರಡರಲ್ಲೂ ಕೊಡಲಾಗುವುದು ಎಂದು ಮಾಹಿತಿ ನೀಡಿದರು. ಪ್ರತಿಯೊಂದು ಕೇಂದ್ರಕ್ಕೂ ಸಹಾಯಕ ಆಯುಕ್ತರ ದರ್ಜೆಯ ಅಧಿಕಾರಿಯೊಬ್ಬರನ್ನು ಪರೀಕ್ಷಾ ವೀಕ್ಷಕರಾಗಿ ನೇಮಿಸುವಂತೆ ಡಿಸಿಗಳಿಗೆ ಸೂಚಿಸಲಾಗಿದೆ. ಒಟ್ಟಾರೆ, 486 ವೀಕ್ಷಕರು, 972 ವಿಶೇಷ ತಪಾಸಣಾ ದಳದ ಸದಸ್ಯರು, 486 ಪ್ರಶ್ನೆಪತ್ರಿಕೆ ಪಾಲಕರು, 9,600 ಕೊಠಡಿ ಮೇಲ್ವಿಚಾರಕರು ಮತ್ತು 20 ಸಾವಿರಕ್ಕೂ ಹೆಚ್ಚು ಅಧಿಕಾರಿಗಳನ್ನು ಸಿಇಟಿ ಪರೀಕ್ಷಾ ಪ್ರಕ್ರಿಯೆಯನ್ನು ಸುಗಮವಾಗಿ ನಡೆಸಲು ಕರ್ತವ್ಯಕ್ಕೆ ನಿಯೋಜಿಸಲಾಗಿದೆ ಎಂದು ವಿವರಿಸಿದರು.

ಹರಾಜಿಗೆ ಕೇಂದ್ರ ಅಸ್ತು

10 ಪಟ್ಟು ಹೆಚ್ಚಿನದಾಗಿರುತ್ತದೆ ಎಂದು ಸಂಪುಟ ಹೇಳಿದೆ. ಜುಲೈ ಅಂತ್ಯದ ವೇಳೆಗೆ 20 ವರ್ಷಗಳ ಮಾನ್ಯತೆಯೊಂದಿಗೆ 72097.85 MHz ಸ್ಪೆಕ್ಟ್ರಮ್‌ನ ಒಟ್ಟು ಹರಾಜಿಗೆ ಹಾಕಲಾಗುತ್ತದೆ. ಇದು ಜುಲೈ 2022ರ ಅಂತ್ಯದ ವೇಳೆಗೆ ನಡೆಯಲಿದೆ ಎಂದು ಹೇಳಲಾಗುತ್ತಿದೆ. ಈ ಕುರಿತು ಮಾಹಿತಿ ನೀಡಿದ ಟೆಲಿಕಾಂ ಮತ್ತು ಐಟಿ ಸಚಿವ ಅಶ್ವಿನಿ ವೈಷ್ಣವ್ ಅವರು ಸ್ಪೆಕ್ಟ್ರಮ್ ಹರಾಜನ್ನು ಘೋಷಿಸಲಾಗಿದೆ. ಇದು ಭಾರತದ 5G ಪರಿಸರ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವ ಅವಿಭಾಜ್ಯ ಅಂಗವಾಗಿದೆ ಎಂದರು.

ಪಿಐಬಿ ಅಧಿಕೃತವಾಗಿ 600 MHz, 700 MHz, 800 MHz, 900 MHz, 1800 MHz, 2100 MHz, 2300 MHz), ಮಧ್ಯಮ (3300 MHz) ಮತ್ತು ಹೈ (2600 MHz) ಸ್ಪೆಕ್ಟ್ರಮ್‌ಗಾಗಿ ಹರಾಜು ನಡೆಯಲಿದೆ. MHz) ಆವರ್ತನ ಬ್ಯಾಂಡ್‌ಗಳು ಮಾಹಿತಿ ಬಿಡುಗಡೆ ಮಾಡಿದೆ. ಪ್ರಧಾನಿ ಮೋದಿಯವರ ಡಿಜಿಟಲ್ ಇಂಡಿಯಾದ ದೃಷ್ಟಿಕೋನದೊಂದಿಗೆ ಮುನ್ನಡೆಯುತ್ತಿದ್ದು, ಇಂದಿನ ಸ್ಪೆಕ್ಟ್ರಮ್ ಹರಾಜು ಅಭಿವೃದ್ಧಿಯ ಅವಿಭಾಜ್ಯ ಅಂಗವಾಗಿದೆ ಎಂದು ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ.

ಸೆ.2021ರಲ್ಲಿ ಘೋಷಿಸಲಾದ ಟೆಲಿಕಾಂ ವಲಯದ ಸುಧಾರಣೆಗಳಿಂದ ಸ್ಪೆಕ್ಟ್ರಮ್ ಹರಾಜಿನ ಲಾಭ ಪಡೆಯಲಾಗುವುದು. ಮೊದಲ ಬಾರಿಗೆ, ಯಶಸ್ವಿ ಬಿಡ್ದಾರರು ಮುಂಗಡ ಪಾವತಿಗಳನ್ನು ಮಾಡಲು ಯಾವುದೇ ಕಡ್ಡಾಯ ಅಗತ್ಯವಿಲ್ಲ ಎಂದು ಸರ್ಕಾರ ಹೇಳಿದೆ.

ಸರ್ಕಾರಿ ನೌಕರರು, ಅವಲಂಬಿತರಿಗೆ ಉಚಿತ ವೈದ್ಯಕೀಯ ಚಿಕಿತ್ಸೆಗಾಗಿ ಪ್ರತ್ಯೇಕ ಕೋಶ

ಮೈಸೂರು, ಜೂ.15(ಎಸ್‌ಪಿಎನ್)–ರಾಜ್ಯ ಸರ್ಕಾರಿ ನೌಕರರು ಹಾಗೂ ಅವರ ಅವಲಂಬಿತ ಕುಟುಂಬದ ಸದಸ್ಯರಿಗೆ ನಗದು ರಹಿತ ವೈದ್ಯಕೀಯ ಚಿಕಿತ್ಸೆ ಒದಗಿಸಲು ಪ್ರತ್ಯೇಕ ಕೋಶ ತೆರೆಯಲು ಸರ್ಕಾರ ಅನುಮತಿ ನೀಡಿದೆ. 2020–21 ಹಾಗೂ 2021–22 ಸಾಲಿನ ಆಯ–ವ್ಯಯದಲ್ಲಿ ಸರ್ಕಾರಿ ನೌಕರರು ಮತ್ತು ಅವಲಂಬಿತರಿಗೆ ನಗದುರಹಿತ ಚಿಕಿತ್ಸೆ ನೀಡುವ ಯೋಜನೆಯನ್ನು ಘೋಷಿಸಲಾಗಿತ್ತು. ಉದ್ದೇಶಿತ ಯೋಜನೆಯನ್ನು ಸವಿಸ್ತಾರ ವರದಿ ಸಲ್ಲಿಸುವಂತೆ ಬೆಂಗಳೂರಿನ ಸುವರ್ಣ ಆರೋಗ್ಯ ಟ್ರಸ್ಟ್ ಕಾರ್ಯಕಾರಿ ನಿರ್ದೇಶಕರಿಗೆ ಆದೇಶಿಸಲಾಗಿತ್ತು. ಅದರಂತೆ 2022ರ ಜನವರಿ 27ರಂದು ಆರೋಗ್ಯ ಸಂಜೀವಿನಿ ಅನುಷ್ಠಾನ ಕುರಿತು ಸವಿಸ್ತಾರ ವರದಿ ಸಲ್ಲಿಕೆಯಾಗಿತ್ತು.

ಈ ನೂತನ ಯೋಜನೆಯನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವ್ಯಾಪ್ತಿಗೆ ಬರುವ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಅನುಷ್ಠಾನಗೊಳಿಸಲು ತೀರ್ಮಾನಿಸಿ, ಈ ಯೋಜನೆ ನಿರ್ವಹಣೆ ಮತ್ತು ಅನುಷ್ಠಾನಕ್ಕೆ 23 ಅಧಿಕಾರಿ ಮತ್ತು ಸಿಬ್ಬಂದಿಗಳನ್ನು ನೇಮಿಸಿಕೊಳ್ಳುವಂತೆ ಸೂಚಿಸಿದೆ ಎಂದು ಸಿಬ್ಬಂದಿ ಆಡಳಿತ ಸುಧಾರಣಾ ಇಲಾಖೆ (ಸಿಆಸುಇ) ಕಾರ್ಯದರ್ಶಿ ಜೆ.ಡಿ.ಮಧುಚಂದ್ರ ತೇಜಸ್ವಿ ತಿಳಿಸಿದ್ದಾರೆ.

ಸಿದ್ದರಾಮಯ್ಯ ವಿರುದ್ಧ ಹೇಳಿಕೆಗೆ ಕುರುಬ ಸಂಘ ಖಂಡನೆ



ಮೈಸೂರು,ಜೂ.15(ಪಿಎಂ)– ಮುಂಬರುವ ಲೋಕಸಭಾ ಚುನಾವಣೆಯಲ್ಲಿ ತಮ್ಮ ಪಕ್ಷದ ಟಿಕೆಟ್ ಕೈತಪ್ಪುವ ಭಯದಲ್ಲಿರುವ ಸಂಸದ ಪ್ರತಾಪ್ ಸಿಂಹ, ಅಸ್ತಿತ್ವ ಉಳಿಸಿಕೊಳ್ಳಲು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ವಿರುದ್ಧ ಟೀಕೆ ಮಾಡುತ್ತಿದ್ದು, ಆ ಮೂಲಕ ತಾವು ದೊಡ್ಡವರಾಗಬಹುದೆಂಬ ಭ್ರಮೆಯಲ್ಲಿದ್ದಾರೆಂದು ಕರ್ನಾಟಕ ಪ್ರದೇಶ ಕುರುಬರ ಸಂಘದ ರಾಜ್ಯಾಧ್ಯಕ್ಷ ಬಿ.ಸುಬ್ರಹ್ಮಣ್ಯ ಕಿಡಿಕಾರಿದ್ದಾರೆ.

ಆರ್‌ಎಸ್‌ಎಸ್‌ನಲ್ಲಿ ಗುರುತಿಸಿಕೊಳ್ಳಲು ಪ್ರತಾಪ್ ಸಿಂಹ ಹೀಗೆ ಮಾತನಾಡುತ್ತಿದ್ದು, 'ಮೈಸೂರಿಗೆ ಬಾಡೂಟಕ್ಕೆ, ಬೀಗರ ಊಟಕ್ಕೆ ವಾರಕ್ಕೆ ಎರಡು ಬಾರಿ ಸಿದ್ದರಾಮಯ್ಯ ಬರುತ್ತಾರೆ' ಎಂಬ ಅವರ ಹೇಳಿಕೆಯು ಸಂಸದರಾಗಿ ಅವರ ಕ್ಷುಲ್ಲಕ ಮನಸ್ಥಿತಿ ತೋರಿಸುತ್ತದೆ ಎಂದು ಖಂಡಿಸಿದ್ದಾರೆ. ಪ್ರತಾಪ್ ಸಿಂಹ ರಂತೆಯೇ ಅವರ ಪಕ್ಷದ ಹಲವರು ಸಿದ್ದರಾಮಯ್ಯರನ್ನು ಟೀಕಿಸಿ ದೊಡ್ಡವರಾಗಬಹುದೆಂದು ಭಾವಿಸಿದ್ದಾರೆ. ಸಿದ್ದರಾಮಯ್ಯರನ್ನು ಟೀಕಿಸಿದರೆ ಇವರು ದೊಡ್ಡವರಲ್ಲ, ದಡ್ಡರಾಗುತ್ತಾರೆ. ಪ್ರತಾಪ್ ಸಿಂಹ ಒಬ್ಬರೇ ಅಲ್ಲ, ಅವರ ಹಸಿ ಸುಳ್ಳಿನ 100 ಎಂಪಿಗಳು ಮಾತನಾಡಿದರೂ ಸಿದ್ದರಾಮಯ್ಯ ಇವರ ಸುಳ್ಳಿನ ಕಂತೆಯನ್ನು ಬೆತ್ತಲುಗೊಳಿಸುವ ಶಕ್ತಿ ಹೊಂದಿದ್ದಾರೆ.

ರೋಹಿಣಿ ಸಿಂಧೂರಿ ಅವರು ಮೈಸೂರಿನ ಡಿಸಿ ಆಗಿದ್ದಾಗ ಸ್ಟೆಪ್‌ಡೌನ್ ಆಸ್ಪತ್ರೆಗಳಲ್ಲಿ ಪ್ರತಾಪ್ ಸಿಂಹ ನಡೆಸುತ್ತಿದ್ದ ಅಕ್ರಮಗಳಿಗೆ ಕಡಿವಾಣ ಹಾಕಿದರು. ಅದಕ್ಕಾಗಿ ಅವರನ್ನು ಅವಹೇಳನ ಮಾಡಿ, ಎತ್ತಂಗಡಿ ಮಾಡಿಸಿದರು. ಪ್ರಧಾನಿ ನರೇಂದ್ರ ಮೋದಿ ಮೈಸೂರನ್ನು ಪ್ಯಾರಿಸ್ ಮಾಡುತ್ತೇವೆ ಅಂದಿದ್ದರು. ಮೈಸೂರನ್ನು ಸಿಂಗಪುರ ಮಾಡುತ್ತೇವೆ ಎಂದು ಪ್ರತಾಪ್ ಸಿಂಹ ಹೇಳಿದ್ದರು. 8 ವರ್ಷ ಕಳೆದರೂ ಏನೂ ಆಗಿಲ್ಲ. ಈಗ ಆ ರೀತಿ ಹೇಳೇ ಇಲ್ಲ ಎಂದು ಪ್ರತಾಪ್ ಸಿಂಹ ಉಲ್ಟಾ ಹೊಡೆಯುತ್ತಿದ್ದಾರೆ.

ಚಾಮುಲ್ ಮೂರನೇ ಅಧ್ಯಕ್ಷರು ಯಾರು...?

●ಬಿಜೆಪಿ ಬೆಂಬಲಿತರಿಗೆ ಹೆಚ್ಚಿನ ಅವಕಾಶ ●ರಾಜಕೀಯ ನಡೆದರಷ್ಟೇ ಕಾಂಗ್ರೆಸ್‌ಗೆ ಅಧಿಕಾರ

ಸಿದ್ದಲಿಂಗಸ್ವಾಮಿ

ಚಾಮರಾಜನಗರ, ಜೂ.15–ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ (ಚಾಮುಲ್)ದ ಮೂರನೇ ಅಧ್ಯಕ್ಷರು ಯಾರು...?

ಇದು ಸಹಕಾರಿಗಳು, ಡೈರಿ ಅಧ್ಯಕ್ಷರು, ರಾಜಕೀಯ ಆಸಕ್ತರು ಹಾಗೂ ರಾಜಕೀಯ ಮುಖಂಡರಲ್ಲಿ ಮೂಡಿರುವ ಪ್ರಶ್ನೆ.

ಚಾಮುಲ್‌ನ 9 ನಿರ್ದೇಶಕ ಸ್ಥಾನಗಳಿಗೆ ಮಂಗಳವಾರ ನಡೆದ ಚುನಾವಣೆಯಲ್ಲಿ ಯಾವ ಪಕ್ಷದ ಬೆಂಬಲಿತರಿಗೂ ಸ್ಪಷ್ಟ ಬಹುಮತ ದೊರೆತಿಲ್ಲ. ಕಾಂಗ್ರೆಸ್ ಬೆಂಬಲಿತರು 4 ಸ್ಥಾನಗಳಲ್ಲಿ, ಬಿಜೆಪಿ ಬೆಂಬಲಿತರು 2 ಸ್ಥಾನಗಳು, ಜೆಡಿಎಸ್ 1 ಸ್ಥಾನ, ಉಳಿದ 2 ಸ್ಥಾನಗಳಲ್ಲಿ ಪಕ್ಷೇತರರು ಜಯ ಗಳಿಸಿದ್ದಾರೆ. ಅಧ್ಯಕ್ಷ ಸ್ಥಾನಕ್ಕೆ ಮತದಾನ ಮಾಡಲು ಚುನಾವಣೆಯಲ್ಲಿ ಜಯ ಗಳಿಸಿರುವ 9 ನೂತನ ನಿರ್ದೇಶಕರು, ಸರ್ಕಾರ ನಿಯೋಜಿಸುವ ಓರ್ವ ನಾಮನಿರ್ದೇಶನ ಸದಸ್ಯ, ಕರ್ನಾಟಕ ಹಾಲು ಮಹಾಮಂಡಳಿಯ ಪ್ರತಿನಿಧಿ, ಪಶು ಸಂಗೋಪನಾ ಇಲಾಖೆಯ ಪ್ರತಿನಿಧಿ, ಸಹಕಾರ ಇಲಾಖೆ ಹಾಗೂ ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳಿಯ ಪ್ರತಿನಿಧಿ(ಒಟ್ಟು 14 ಜನರು)ಗೆ ಅವಕಾಶ ಇದೆ. ಆದರೆ ಇವರಲ್ಲಿ ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳಿಯ ಪ್ರತಿನಿಧಿ ರಾಜಕೀಯದಿಂದ ದೂರ ಇದ್ದಾರೆ. ಇವರು ಯಾವಾಗಲೂ ಮತ ಚಲಾಯಿಸುವ ಉದಾಹರಣೆಯೇ ಇಲ್ಲ. ಹೀಗಾಗಿ ಅಧ್ಯಕ್ಷರ ಆಯ್ಕೆ ಸಂದರ್ಭದಲ್ಲಿ 13 ಜನರು ಮಾತ್ರ ಮತ ಚಲಾಯಿಸಲಿದ್ದಾರೆ. ಅಧ್ಯಕ್ಷರಾಗುವವರು 7 ಮತಗಳನ್ನು ಪಡೆಯಬೇಕಾಗಿದೆ. ಯಾವುದೇ ಪಕ್ಷದ ಬೆಂಬಲಿತರು ಇಷ್ಟು ಸಂಖ್ಯೆಯ ನಿರ್ದೇಶಕರನ್ನು ಹೊಂದಿಲ್ಲದೇ ಇರುವುದರಿಂದ ಈಗ ಅಧ್ಯಕ್ಷರು ಯಾರಾಗಬಹುದು ಎಂಬ ಕುತೂಹಲ ಎದ್ದಿದೆ.





ಎಚ್.ಎಸ್.ಬಸವರಾಜು, ಎಂ.ಪಿ.ಸುನೀಲ್

ಬಿಜೆಪಿ ಬೆಂಬಲಿತರು 2 ಸ್ಥಾನಗಳಲ್ಲಿ ಗೆಲವು ಸಾಧಿಸಿದ್ದಾರೆ.(ಚಾಮರಾಜನಗರ ತಾಲೂಕಿನ ವಿ.ಸಿ.ಹೊಸೂರು ಹೆಚ್.ಎಸ್. ಬಸವರಾಜು ಹಾಗೂ ಯಳಂದೂರು ತಾಲೂಕಿನಿಂದ ವೈ.ಸಿ.ನಾಗೇಂದ್ರ) ಗುಂಡ್ಲುಪೇಟೆ ತಾಲೂಕಿನಿಂದ ಪಕ್ಷೇತರರಾಗಿ ಸ್ಪರ್ಧಿಸಿ ಜಯ ಗಳಿಸುವ ಎಂಡಿಸಿಸಿ ಬ್ಯಾಂಕ್ ಉಪಾಧ್ಯಕ್ಷರೂ ಆಗಿರುವ ಎಂ.ಪಿ.ಸುನೀಲ್ ಅವರು ತಾವು ಬಿಜೆಪಿ ಮುಖಂಡರು, ಈಗಲೂ ಬಿಜೆಪಿಯಲ್ಲಿಯೇ ಇದ್ದೇನೆ ಎಂದು ತಿಳಿಸಿರುವುದರಿಂದ ಆ ಪಕ್ಷದ ಬೆಂಬಲಿತರ ಸಂಖ್ಯೆ 3ಕ್ಕೇರಲಿದೆ. ಓರ್ವ ನಾಮನಿರ್ದೇಶನ ಸದಸ್ಯ ಹಾಗೂ ಮೂವರು ಅಧಿಕಾರಿಗಳು ಸರ್ಕಾರ ಇರುವ ಪಕ್ಷದ ಬೆಂಬಲಿತ ಅಭ್ಯರ್ಥಿಗೆ ಮತ ಚಲಾಯಿಸುವುದು ವಾಡಿಕೆ. ಹೀಗಾಗಿ ಬಿಜೆಪಿ ಬೆಂಬಲಕ್ಕೆ 7 ಮತಗಳು ಬರಲಿದೆ.

ಬಿಜೆಪಿ ಬೆಂಬಲಿತರಾಗಿ ಹೆಚ್.ಎಸ್. ಬಸವರಾಜು, ಎಂ.ಪಿ.ಸುನೀಲ್ ಹಾಗೂ ವೈ.ಸಿ.ನಾಗೇಂದ್ರ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಬಹುದಾಗಿದೆ. ಆದರೆ ಈ ಪೈಕಿ ಹಿರಿಯರಾಗಿರುವ ಹೆಚ್.ಎಸ್.ಬಸವರಾಜು ಹಾಗೂ ಎಂ.ಪಿ.ಸುನೀಲ್ ಅವರಲ್ಲಿ ಒಬ್ಬರಿಗೆ ಅವಕಾಶ ದೊರೆಯುವ ಸಾಧ್ಯತೆ ಹೆಚ್ಚಿದೆ.

ಇನ್ನೂ ಕಾಂಗ್ರೆಸ್ ಬೆಂಬಲಿತರು 4 ಸ್ಥಾನಗಳಲ್ಲಿ ಗೆದ್ದಿದ್ದು,(ಜಿಲ್ಲಾ ಮಹಿಳಾ ಕ್ಷೇತ್ರದಿಂದ ಶೀಲಾ ಪುಟ್ಟರಂಗಶೆಟ್ಟಿ, ಕೊಳ್ಳೇಗಾಲ ತಾಲೂಕಿನ ಮಧುವನಹಳ್ಳಿ ಎಂ.ನಂಜುಂಡಸ್ವಾಮಿ, ಹನೂರಿನಿಂದ ಶಾಹುಲ್ ಅಹಮ್ಮದ್ ಹಾಗೂ ಗುಂಡ್ಲುಪೇಟೆ ತಾಲೂಕಿನಿಂದ ಹೆಚ್.ಎಸ್.ನಂಜುಂಡ ಪ್ರಸಾದ್) ಈ ಪಕ್ಷದ ಬೆಂಬಲಿತರು ಅಧ್ಯಕ್ಷ ಸ್ಥಾನ ಪಡೆಯಲು ಇನ್ನು 3 ನಿರ್ದೇಶಕರ ಕೊರತೆ ಇದೆ. ಚಾಮರಾಜನಗರದ ತಾಲೂಕಿನಿಂದ ಕಾಂಗ್ರೆಸ್ ಬಂಡಾಯ ಅಭ್ಯರ್ಥಿಯಾಗಿ ಗೆಲವು ಸಾಧಿಸಿರುವ ಬಸವನಪುರ ಸದಾಶಿವಮೂರ್ತಿ ಅವರು ಮತದಾರರ ತೀರ್ಮಾನದಂತೆ ನಡೆದುಕೊಳ್ಳುವುದಾಗಿ ತಿಳಿಸಿದ್ದಾರೆ.

ಹನೂರು ತಾಲೂಕಿನ ಜೆಡಿಎಸ್ ಬೆಂಬಲಿತರಾಗಿ ಗೆಲುವು ಸಾಧಿಸಿರುವ ಎಸ್.ಮಹದೇವಸ್ವಾಮಿ(ಉದ್ದನೂರು ಪ್ರಸಾದ್) ಅವರು ನಮ್ಮ ಪಕ್ಷ ಹಾಗೂ ಜಿಲ್ಲೆಯ ವರಿಷ್ಠರಾದ ಮಂಜುನಾಥ್ ತೀರ್ಮಾನದಂತೆ ನಡೆದುಕೊಳ್ಳುವುದಾಗಿ ತಿಳಿಸಿದ್ದಾರೆ. ಒಂದು ಪಕ್ಷದಲ್ಲಿ ಇವರಿಬ್ಬರೂ ಸಹ ಕಾಂಗ್ರೆಸ್‌ಗೆ ಬೆಂಬಲ ನೀಡಿದರೆ ಆ ಪಕ್ಷದ ಬೆಂಬಲಿತರ ಸಂಖ್ಯೆ 6ಕ್ಕೇರಲಿದ್ದು, ಅಧ್ಯಕ್ಷ ಸ್ಥಾನ ಪಡೆಯಲು 1 ಮತ ಕೊರತೆ ಉಂಟಾಗಲಿದೆ.

ಸದ್ಯದ ರಾಜಕೀಯ ಪರಿಸ್ಥಿತಿ ಅವಲೋಕಿಸಿದರೆ ಬಿಜೆಪಿ ಬೆಂಬಲಿತರು ಅಧ್ಯಕ್ಷರಾಗಲು ಹೆಚ್ಚಿನ ಅವಕಾಶ ಇದೆ. ರಾಜಕೀಯದಲ್ಲಿ ಏನಾದರೂ ಬದಲಾವಣೆ ಆದರೆ ಮಾತ್ರ ಕಾಂಗ್ರೆಸ್ ಬೆಂಬಲಿತರು ಮತ್ತೆ ಚಾಮುಲ್‌ನ ಅಧಿಕಾರ ಅಲಂಕರಿಸಲಿದ್ದಾರೆ.

ಚಾಮುಲ್ ಸ್ಥಾಪನೆಯಾದ ಬಳಿಕ ನಡೆದ ಚುನಾವಣೆಯ ಬಳಿಕ ಮೊದಲ 5 ವರ್ಷದ ಅವಧಿಯಲ್ಲಿ ಕಾಂಗ್ರೆಸ್ ಬೆಂಬಲಿತರಾಗಿದ್ದ ಸಿ.ಎಸ್.ಗುರುಮಲ್ಲಪ್ಪ ಹಾಗೂ ಹೆಚ್.ಎಸ್.ನಂಜುಂಡಪ್ರಸಾದ್ ಕ್ರಮವಾಗಿ ತಲಾ ಎರಡೂವರೇ ವರ್ಷ ಮೊದಲ ಹಾಗೂ ಎರಡನೇ ಅವಧಿಯ ಅಧ್ಯಕ್ಷರಾಗಿದ್ದರು. ಈಗ 3ನೇ ಅಧ್ಯಕ್ಷರು ಯಾರು ಎಂಬುದು ಕುತೂಹಲ ಕೆರಳಿಸಿದೆ. ಇದೇ ಜೂ.29ಕ್ಕೆ ಹಾಲಿ ಅಧ್ಯಕ್ಷ ಹೆಚ್.ಎಸ್.ನಂಜುಂಡಪ್ರಸಾದ್ ಅವರ ಅವಧಿ ಮುಕ್ತಾಯವಾಗುವುದರಿಂದ ಅಂದೇ ಚುನಾವಣೆ ನಡೆಯುವ ಸಾಧ್ಯತೆಗಳಿವೆ.

● ಚಾಮುಲ್‌ನ ಈಗಿನ ಆಡಳಿತ ಮಂಡಳಿಯ ಅವಧಿ ಇದೇ ತಿಂಗಳ 29ಕ್ಕೆ ಕೊನೆಗೊಳ್ಳಲಿದೆ. ಈ ದಿನಾಂಕದೊಳಗೆ ನೂತನ ಅಧ್ಯಕ್ಷರ ಆಯ್ಕೆ ನಡೆಯಲಿದೆ. ನೂತನ ಅಧ್ಯಕ್ಷರು ಹಾಗೂ ನೂತನ ನಿರ್ದೇಶಕರ ಆಡಳಿತಾವಧಿ 5 ವರ್ಷಗಳು ಇರಲಿದೆ.
–ಎಂ.ರಾಜಶೇಖರಮೂರ್ತಿ, ಚಾಮುಲ್ ವ್ಯವಸ್ಥಾಪಕ ನಿರ್ದೇಶಕ.

● ಚಾಮುಲ್ ಚುನಾವಣೆ ಯಾವುದೇ ಪಕ್ಷದ ಚಿಹ್ನೆಯಡಿ ನಡೆದಿಲ್ಲ. ನಾನು ಈಗಲೂ ಬಿಜೆಪಿಯಲ್ಲಿದ್ದೇನೆ. ಮುಂದೆಯೂ ಬಿಜೆಪಿಯಲ್ಲಿ ಇರುತ್ತೇನೆ. ನಾನೊಬ್ಬ ಪಕ್ಷದ ಸಕ್ರಿಯ ಸದಸ್ಯ. ಅಧ್ಯಕ್ಷ ಸ್ಥಾನಕ್ಕೆ ಆಕಾಂಕ್ಷಿಯಾಗಿದ್ದೇನೆ.
–ಎಂ.ಪಿ.ಸುನೀಲ್, ಚಾಮುಲ್ ನಿರ್ದೇಶಕ, ಗುಂಡ್ಲುಪೇಟೆ ತಾಲೂಕು.

● ನಮ್ಮ ಪಕ್ಷದ(ಜೆಡಿಎಸ್) ವರಿಷ್ಠರು ಹಾಗೂ ಜಿಲ್ಲೆಯ ವರಿಷ್ಠರಾದ ಮಂಜುನಾಥ್ ಅವರ ಜೊತೆ ಚರ್ಚಿಸಿ ತೀರ್ಮಾನ ಕೈಗೊಳ್ಳುತ್ತೇನೆ. ಪಕ್ಷದ ಆದೇಶದಂತೆ ನಾನು ನಡೆದುಕೊಳ್ಳುತ್ತೇನೆ. **–ಎಸ್.ಮಹದೇವಸ್ವಾಮಿ(ಉದ್ದನೂರು ಪ್ರಸಾದ್), ಚಾಮುಲ್ ನಿರ್ದೇಶಕ, ಹನೂರು ತಾಲೂಕು.**

● ನನ್ನ ತಾಲೂಕಿನ ಮತದಾರರು ಹಾಗೂ ರೈತರೊಂದಿಗೆ ಚರ್ಚಿಸಿ ನಾನು ತೀರ್ಮಾನ ಕೈಗೊಳ್ಳುತ್ತೇನೆ. ಮತದಾರರು ಹಾಗೂ ರೈತರ ತೀರ್ಮಾನದಂತೆ ನಡೆದುಕೊಳ್ಳಲು ತೀರ್ಮಾನಿಸುತ್ತಿದ್ದೇನೆ.
–ಸದಾಶಿವಮೂರ್ತಿ, ಚಾಮುಲ್ ನಿರ್ದೇಶಕ, ಚಾಮರಾಜನಗರ ತಾಲೂಕು.

ನೀಲಗಾರ ಸಂಸ್ಕೃತಿ ಗೌರವಿಸಿ, ಪೋಷಿಸುವುದು ಅವಶ್ಯ

ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅಭಿಮತ



ಚಾಮರಾಜನಗರ, ಜೂ.15–ದೇಶದ ಶ್ರೀಮಂತ ಸಂಸ್ಕೃತಿ, ನೀಲಗಾರರ ಪರಂಪರೆ, ನೈಸರ್ಗಿಕ ಸಂಪತ್ತು ಹಾಗೂ ಸಾಹಿತ್ಯ ಕಲಾಪ್ರಕಾರಗಳ ಘನತೆಯನ್ನು ಮನವರಿಕೆ ಮಾಡಿಕೊಂಡು ಗೌರವಿಸುವುದು, ಪೋಷಿಸುವುದು ಅವಶ್ಯಕವಾಗಿದೆ ಎಂದು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅಭಿಪ್ರಾಯಪಟ್ಟರು.

ನಗರದ ಹೊರವಲಯದಲ್ಲಿರುವ ಸುವರ್ಣ ಗಂಗೋತ್ರಿಯ ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದ ನಿಜಗುಣ ಸಭಾಂಗಣದಲ್ಲಿಂದು ಶ್ರೀ ಮಂಟೇಸ್ವಾಮಿ, ಸಿದ್ದಪ್ಪಾಜಿ, ರಾಚಪ್ಪಾಜಿ ಅಧ್ಯಯನ ಪೀಠದಿಂದ ಆಯೋಜಿಸಿದ್ದ ಮಂಟೇಸ್ವಾಮಿ ಪರಂಪರೆಯ ನೀಲಗಾರ ಆತ್ಮಕಥನವಾದ 'ನಾವು ಕೂಗುವ ಕೂಗು' ಕೃತಿ ಬಿಡುಗಡೆಗೊಳಿಸಿ, ಸ್ನಾತಕೋತ್ತರ ಕೇಂದ್ರದ ವಿವಿಧ ಅಭಿವೃದ್ಧಿ ಕಾಮಗಾರಿ ಉದ್ಘಾಟಿಸಿ ಅವರು ಮಾತನಾಡಿದರು.

ಭಾರತವು ಸಮೃದ್ಧ ಸಂಸ್ಕೃತಿ ಹೊಂದಿದ ದೇಶ. ಹಾಗೆಯೇ ಜಿಲ್ಲೆಯು ಸಹ ಸಾಂಸ್ಕೃತಿಕ ಮತ್ತು ಪ್ರಾಕೃತಿಕವಾಗಿ ಶ್ರೀಮಂತಿಕೆ ಹೊಂದಿದೆ. ನೀಲಗಾರ ಪಂರಪರೆಯನ್ನು ಇಲ್ಲಿನ ಕಲಾವಿದರು ಯಾವುದೇ ಅಪೇಕ್ಷೆ ಇಲ್ಲದೆ ವಂಶಪಾರಂಪರ್ಯವಾಗಿ ಉಳಿಸಿಕೊಂಡು ಬಂದಿದ್ದಾರೆ. ನೀಲಗಾರರ ಬದುಕನ್ನು ಸುಲಲಿತವಾಗಿ ಹಾಡಿನ ಮೂಲಕ ಕಟ್ಟಿಕೊಡುವ ಮಳವಳ್ಳಿ ಮಹದೇವಸ್ವಾಮಿಯವರಿಗೆ ಲಭಿಸಿರುವ ಗೌರವ ಡಾಕ್ಟರೇಟ್ ನೀಲಗಾರರಿಗೆ ಸಂದ ಗೌರವ. ನೀಲಗಾರರ ಆರ್ಥಿಕ ಮತ್ತು ಸಾಮಾಜಿಕ ಜೀವನವನ್ನು 'ನಾವು ಕೂಗುವ ಕೂಗು' ಕೃತಿಯಲ್ಲಿ ಅಚ್ಚುಕಟ್ಟಾಗಿ ಬಿಂಬಿಸಲಾಗಿದೆ ಎಂದರು.

ಸುವರ್ಣ ಗಂಗೋತ್ರಿಯು ಅತೀ ವೇಗವಾಗಿ ಅಭಿವೃದ್ಧಿ ಹೊಂದುತ್ತಿದ್ದು, ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಹೆಚ್ಚು ಅನುಕೂಲವಾಗುತ್ತಿದೆ. ಮುಂದಿನ ದಿನಗಳಲ್ಲಿ ಸುವರ್ಣ ಗಂಗೋತ್ರಿ ಹೆಚ್ಚಿನ ಅಭಿವೃದ್ಧಿ ಕಾಣಲಿ ಎಂದು ಶ್ರೀಗಳು ಹಾರೈಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮೈಸೂರು ವಿ.ವಿ.ಕುಲಪತಿ ಪ್ರೊ.ಹೇಮಂತಕುಮಾರ್, ಮಂಟೇಸ್ವಾಮಿ ಅಧ್ಯಯನ ಪೀಠ ಹಾಗೂ ಕನ್ನಡ ವಿಭಾಗದ ಸಂದರ್ಶಕ ಪ್ರಾಧ್ಯಾಪಕ ಕೃಷ್ಣಮೂರ್ತಿ ಹನೂರು ಮಾತನಾಡಿದರು.

ಮೈಸೂರು ವಿ.ವಿ.ಕುಲಸಚಿವ ಆರ್.ಶಿವಪ್ಪ, ಹಣಕಾಸು ಅಧಿಕಾರಿ ಡಾ.ಸಂಗೀತ ಗಜಾನನ, ಸಿಂಡಿಕೇಟ್ ಸದಸ್ಯ ಪ್ರದೀಪ್‌ಕುಮಾರ್ ದೀಕ್ಷಿತ್, ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಪ್ರೊ.ಆರ್.ಮಹೇಶ್, ಮಾನಸ ಗಂಗೋತ್ರಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕರಾದ ಪ್ರೊ.ವಿಜಯಕುಮಾರಿ ಕರಿಕಲ್ ಕಾರ್ಯಕ್ರಮದಲ್ಲಿದ್ದರು.

ಪರವಾನಗಿ ಪಡೆಯಲು ಸೂಚನೆ

ಚಾಮರಾಜನಗರ, ಜೂ.15– ಯಳಂದೂರು ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಉದ್ದಿಮೆ ಹಾಗೂ ಅಂಗಡಿ ನಡೆಸುತ್ತಿರುವ ಮಾಲೀಕರು, ಖಾಸಗಿ ಆಸ್ಪತ್ರೆ, ಪೆಟ್ರೋಲ್ ಬಂಕ್, ಚಿತ್ರಮಂದಿರ, ಕಲ್ಯಾಣ ಮಂಟಪ, ಸಣ್ಣ ಕೈಗಾರಿಕೆ, ಹೋಟೆಲ್, ಬಟ್ಟೆ ಅಂಗಡಿ, ಮೆಡಿಕಲ್ ಶಾಪ್ ಇನ್ನಿತರೆ ಉದ್ದಿಮೆದಾರರು ಪಪಂ ವ್ಯಾಪ್ತಿಯಲ್ಲಿ ಉದ್ದಿಮೆ ನಡೆಸಬೇಕಾದಲ್ಲಿ ಕರ್ನಾಟಕ ಮುನ್ಸಿಪಲ್ ಕಾಯ್ದೆ 1964 ನಿಯಮ 256ರ ಅನ್ವಯ ನಿಗದಿತ ಶುಲ್ಕ ಪಾವತಿಸಿ ಪರವಾನಗಿ ಪಡೆಯಬೇಕಾಗಿದ್ದು, ಪರವಾನಗಿ ಪಡೆದಿರುವವರು ಪ್ರತಿವರ್ಷ ನಿಗದಿತ ಶುಲ್ಕ ಪಾವತಿಸಿ ಪರವಾನಗಿಯನ್ನು ನವೀಕರಿಸಿಕೊಳ್ಳುವಂತೆ ಈಗಾಗಲೇ ಪ್ರತಿ ಅಂಗಡಿ, ಉದ್ದಿಮೆದಾರರಿಗೂ ನೋಟೀಸ್ ಮೂಲಕ ತಿಳಿಸಲಾಗಿದೆ.

ಸದರಿ ಪರವಾನಗಿಯನ್ನು ಮಾರ್ಚ್ ಅಂತ್ಯಕ್ಕೆ ನಿಗದಿತ ಶುಲ್ಕ ಪಾವತಿಸಿ ನವೀಕರಿಸಿಕೊಳ್ಳಬೇಕಾಗಿದ್ದು, ಕಳೆದ 2 ತಿಂಗಳಿನಿಂದ ಎಲ್ಲಾ ಅಂಗಡಿ, ಉದ್ದಿಮೆದಾರರಿಗೂ ನೋಟಿಸ್ ನೀಡಿ ಪರವಾನಗಿ ಪಡೆದುಕೊಳ್ಳುವಂತೆ ಸೂಚಿಸಿದ್ದರೂ ಸಹ ಕೆಲವರು ಮಾತ್ರ ಪರವಾನಿಗೆ ಪಡೆದಿದ್ದು, ಇನ್ನುಳಿದವರು ಪರವಾನಗಿ ಪಡೆಯಲು ಇದುವರೆಗೂ ಅರ್ಜಿ ಸಲ್ಲಿಸಿರುವುದಿಲ್ಲ. ಜೂ.27ರ ಒಳಗೆ ಪರವಾನಗಿ ಪಡೆಯದೇ ಇರುವವರು ಪರವಾನಗಿ ಪಡೆದುಕೊಳ್ಳಬೇಕು ಹಾಗೂ ನವೀಕರಿಸದೇ ಇರುವ ಉದ್ದಿಮೆದಾರರು ನವೀಕರಿಸಿಕೊಳ್ಳಬೇಕು. ತಪ್ಪಿದ್ದಲ್ಲಿ ಪರವಾನಗಿಯನ್ನು ರದ್ದುಪಡಿಸಿ ಅಂಗಡಿ, ಉದ್ದಿಮೆ ಮುಚ್ಚಲು ಕಾನೂನು ಕ್ರಮವಹಿಸಲಾಗುತ್ತದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೊಳ್ಳೇಗಾಲ ಉಪವಿಭಾಗದ ರೌಡಿಶೀಟರ್‌ಗಳ ಪರೇಡ್

ಕೊಳ್ಳೇಗಾಲ, ಜೂ.15(ನಾಗೇಂದ್ರಸ್ವಾಮಿ)–ಉತ್ತಮ ಹಾಗೂ ಒಳ್ಳೆಯ ಜೀವನ ನಡೆಸುತ್ತಿರುವವರ ಹೆಸರುಗಳನ್ನು ರೌಡಿಶೀಟರ್ ಪಟ್ಟಿಯಿಂದ ಕೈಬಿಡಲಾಗುವುದು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶಿವಕುಮಾರ್ ಭರವಸೆ ನೀಡಿದರು.



ನಗರ ಠಾಣೆಯಲ್ಲಿ ಪ್ರಥಮ ಬಾರಿಗೆ ಕೊಳ್ಳೇಗಾಲ ಉಪವಿಭಾಗದ ರೌಡಿಶೀಟರ್‌ಗಳ ಪರೇಡ್ ನಡೆಸಿ ಅವರು ಮಾತನಾಡಿದರು.

268ಕ್ಕೂ ಅಧಿಕ ಮಂದಿ ಹೆಸರು ಪಟ್ಟಿಯಲ್ಲಿದ್ದು, ಇಂದಿನ ಪರೇಡ್‌ನಲ್ಲಿ 130ಕ್ಕೂ ಅಧಿಕ ಮಂದಿ ಭಾಗಿಯಾಗಿದ್ದಾರೆ. ಆಕಸ್ಮಿಕವಾಗಿ ವಿವಿಧ ಪ್ರಕರಣದಡಿ ರೌಡಿಶೀಟರ್‌ಗಳಾಗಿರುವ ವಯಸ್ಸಾದವರು ಹಾಗೂ ಒಳ್ಳೆ ನಡವಳಿಕೆ ಬೆಳೆಸಿಕೊಂಡವರನ್ನು ಇಲಾಖೆ ಗುರುತಿಸಿ, ವಿನಾಯಿತಿ ಕಲ್ಪಿಸಲಾಗುವುದು. ಗೂಂಡಾ ಕಾಯ್ದೆ ಪ್ರಕರಣಲ್ಲಿರುವವರು ಕಾನೂನು ಸುವ್ಯವಸ್ಥೆಗೆ ಭಂಗ ಉಂಟು ಮಾಡದೆ ಇಲಾಖೆ ಜೊತೆ ಸಹಕರಿಸಬೇಕು. ಒಂದು ವೇಳೆ ಇದಕ್ಕೆ ವ್ಯತಿರಿಕ್ತವಾಗಿ ವರ್ತಿಸಿದರೆ ಅಂತಹವರ ವಿರುದ್ಧ ಇಲಾಖೆ ನಿಗಾ ವಹಿಸಿ ಜಿಲ್ಲೆಯಿಂದಲೇ ಗಡಿಪಾರಿಗೆ ಶಿಫಾರಸು ಮಾಡಬೇಕಾಗುತ್ತದೆ. ಇಲಾಖೆ ಅಂತಹವರ ವಿರುದ್ಧ ಸೂಕ್ಷ್ಮ ನಿಗಾ ವಹಿಸಲಿದೆ ಎಂದರು. ಎಎಸ್ಪಿ ಸುಂದರರಾಜು, ಡಿವೈಎಸ್ಪಿ ನಾಗರಾಜು, ಸಿಪಿಐ ಅಶೋಕ ಕಶ್ಯಪ್, ಶಿವರಾಜ ಮುದೋಳ್, ಬಸವರಾಜು, ಶಿವಮಾದಯ್ಯ, ಪಿಎಸ್‌ಐ ಉಮಾವತಿ, ಮಂಜುನಾಥ, ಚೇತನ್, ಕರಿಬಸಪ್ಪ, ವೀರಣ್ಣಾರಾಧ್ಯ ಇನ್ನಿತರರಿದ್ದರು.

ಅತ್ಯಾಚಾರ ಯತ್ನ: ಆರೋಪಿ ಬಂಧನ



ಯಳಂದೂರು,ಜೂ.15(ವಿ.ನಾಗರಾಜು)–ಜಾನುವಾರು ಮೇಯಿಸುತ್ತಿದ್ದ ಯುವತಿ ಮೇಲೆ ಅತ್ಯಾಚಾರಕ್ಕೆ ಯತ್ನಿಸಿ, ಕೊಲೆಗೆ ಯತ್ನಿಸಿದ್ದ ಯುವಕನನ್ನು ಪೊಲೀಸರು ಬಂಧಿಸಿದ್ದಾರೆ. ಚಾಮರಾಜನಗರ ತಾಲೂಕಿನ ಮಸಣಾಪುರ ಗ್ರಾಮದ ಪ್ರವೀಣ್(22) ಬಂಧಿತ ಆರೋಪಿ. ಈತ ಸೋಮವಾರ ಬೆಳಗ್ಗೆ ಬೈಕಿನಲ್ಲಿ ಮಸಣಾಪುರದತ್ತ ಹೋಗುತ್ತಿದ್ದಾಗ ಇರಸವಾಡಿ ಕೆರೆ ಬಳಿಯ ಕಾಲುವೆಯ ಬಳಿ ದನ–ಕರುಗಳನ್ನು ಮೇಯಿಸುತ್ತಿದ್ದ ಯುವತಿಯನ್ನು ನೋಡಿದ್ದಾನೆ. ಆಕೆಗೆ 500 ರೂ. ನೋಟು ತೋರಿಸಿ, ಆಮಿಷ ಒಡ್ಡಿದ್ದಾನೆ. ಆಕೆ ನಿರಾಕರಿಸಿದ್ದಕ್ಕೆ ಪಕ್ಕದಲ್ಲೇ ಇದ್ದ ಕಾಲುವೆಗೆ ತಳ್ಳಿ, ಕೊಲೆಗೆ ಯತ್ನಿಸಿದ್ದಾನೆ ಎನ್ನಲಾಗಿದೆ. ಯುವತಿಯ ಚೀರಾಟ ಕೇಳಿ ದಾರಿಹೋಕರೊಬ್ಬರು ಸ್ಥಳಕ್ಕೆ ಧಾವಿಸಿದ್ದಾರೆ. ಈ ವೇಳೆ ಎಚ್ಚೆತ್ತ ಪ್ರವೀಣ್, ಯುವತಿ ಹಾಗೂ ತನ್ನ ಬೈಕ್ ಸ್ಥಳದಲ್ಲೇ ಬಿಟ್ಟು, ಸಮೀಪದ ಶಾಲಾ ಕಾಂಪೌಂಡ್‌ನಿಂದ ಜಿಗಿದು, ಪರಾರಿಯಾಗಿದ್ದನು. ಈ ಸಂಬಂಧ ಯಳಂದೂರು ಠಾಣೆಗೆ ಯುವತಿಯ ಪೋಷಕರು ದೂರು ನೀಡಿದ್ದರು. ಸಬ್‌ಇನ್ಸ್‌ಪೆಕ್ಟರ್ ಕರಿಬಸಪ್ಪ ಪ್ರಕರಣ ದಾಖಲಿಸಿಕೊಂಡು ಬಿಟ್ಟು ಹೋಗಿದ್ದ ಬೈಕ್ ನಂಬರ್ ಆಧಾರದ ಮೇಲೆ ಆರೋಪಿಯನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಗಾಂಜಾ ಮಾರಾಟ: 9 ಮಂದಿ ಬಂಧನ



ವಿರಾಜಪೇಟೆ, ಜೂ.15– ಪ್ರತ್ಯೇಕ ಪ್ರಕರಣಗಳಲ್ಲಿ ಅಸ್ಸಾಂ ಮೂಲದ ಕಾರ್ಮಿಕ ಸೇರಿ 9 ಮಂದಿ ಗಾಂಜಾ ಮಾರಾಟಗಾರರನ್ನು ಬಂಧಿಸಿರುವ ವಿರಾಜಪೇಟೆ ಗ್ರಾಮಾಂತರ ಠಾಣೆ ಪೊಲೀಸರು, 1.988 ಕೆಜಿ ಗಾಂಜಾ, 15.5 ಗ್ರಾಂ ಎಂಡಿಎಂಎ ಕ್ರಿಸ್ಟಲ್ ಮಾದಕ ಪದಾರ್ಥ, 9 ಮೊಬೈಲ್, 4 ಬೈಕ್, ಒಂದು ಕಾರು ವಶಪಡಿಸಿಕೊಂಡಿದ್ದಾರೆ.

ವಿರಾಜಪೇಟೆ ಸಮೀಪದ ಮಗ್ಗುಲ ಗ್ರಾಮದಲ್ಲಿರುವ ಡೆಂಟಲ್ ಕಾಲೇಜು ಬಳಿ ಖಚಿತ ಮಾಹಿತಿ ಮೇರೆಗೆ ಜೂನ್ 12ರಂದು ರಾತ್ರಿ 10 ಗಂಟೆ ಸುಮಾರಿನಲ್ಲಿ ದಾಳಿ ನಡೆಸಿದ ಪೊಲೀಸರು, ಅಮ್ಮತ್ತಿ ಗ್ರಾಮದ ಕುಟ್ಟಂಡ ಬೋಪಣ್ಣ(42), ಪಂಚವಳ್ಳಿ ಗ್ರಾಮದ ಜಬೀವುಲ್ಲಾ ಖಾನ್(41), ಕಡಂಗ ಅರಪಟ್ಟು ಗ್ರಾಮದ ಕೆ.ಎಸ್. ಫರೀದ್(22), ಕೊಟ್ಟಮುಡಿಯ ಎಂ.ಕೆ. ಹೈದರ್ ಅಲಿ(24), ಅಮ್ಮತ್ತಿಯ ಕೆ.ವಿ. ಸುನಿಲ್(26) ಅವರುಗಳನ್ನು ಬಂಧಿಸಿ 760 ಗ್ರಾಂ ಗಾಂಜಾ ಮತ್ತು 15.5 ಗ್ರಾಂ ಎಂಡಿಎಂಎ ಕ್ರಿಸ್ಟಲ್ ಮಾದಕ ಪದಾರ್ಥ, 5 ಮೊಬೈಲ್ ಮತ್ತು 2 ಬೈಕ್‌ಗಳನ್ನು ಕೂಡ ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಮತ್ತೊಂದು ಪ್ರಕರಣದಲ್ಲಿ ಜೂನ್ 14ರಂದು ಸಂಜೆ 5.15ರ ವೇಳೆಯಲ್ಲಿ ವಿರಾಜಪೇಟೆ ತಾಲೂಕು ಆರ್‌ಜಿ ಗ್ರಾಮದ ಕಂಡಿಮಕ್ಕಿ ರಸ್ತೆಯಲ್ಲಿರುವ ಹಿರಿಯ ಪ್ರಾಥಮಿಕ ಶಾಲೆ ಬಳಿ ಗಾಂಜಾ ಮಾರಾಟ ಮಾಡುತ್ತಿದ್ದ ಕುಂಜಿಲ ಗ್ರಾಮದ ಕೆ.ಯು. ಅಶ್ರಫ್(34), ಕೆದಮುಳ್ಳೂರು ಗ್ರಾಮದ ಎಂ.ಜೆ. ಅಜಿತ್ ಪೊನ್ನಪ್ಪ(25), ಹಾಲುಗುಂದ ಗ್ರಾಮದ ಪಿ.ಎ. ಅಸ್ಗರ್(27) ಮತ್ತು ಮೂಲತಃ ಅಸ್ಸಾಂನವನಾಗಿದ್ದು, ಕುಕ್ಕಲೂರು ಗ್ರಾಮದ ಪ್ಲಾಂಟರ್‌ವೊಬ್ಬರ ತೋಟದ ಲೈನ್ ಮನೆಯಲ್ಲಿ ವಾಸವಿದ್ದ ಕಾರ್ಮಿಕ ಹಕೀಂ ಅಲಿ(27) ಅವರನ್ನು ಬಂಧಿಸಿ 1.228 ಕೆಜಿ ಗಾಂಜಾ, ಕಾರು, 2 ದ್ವಿಚಕ್ರ ವಾಹನ ಹಾಗೂ 4 ಮೊಬೈಲ್‌ಗಳನ್ನು ವಶಪಡಿಸಿಕೊಂಡಿದ್ದಾರೆ.

ಜಿಲ್ಲಾ ಎಸ್ಪಿ ಎಂ.ಎ. ಅಯ್ಯಪ್ಪ ಹಾಗೂ ವಿರಾಜಪೇಟೆ ಡಿವೈಎಸ್ಪಿ ನಿರಂಜನರಾಜೇ ಅರಸ್ ಮಾರ್ಗದರ್ಶನದಲ್ಲಿ ವಿರಾಜಪೇಟೆ ಸರ್ಕಲ್ ಇನ್ಸ್‌ಪೆಕ್ಟರ್ ಶಿವರುದ್ರ, ವಿರಾಜಪೇಟೆ ನಗರ ಠಾಣೆ ಸಬ್‌ಇನ್ಸ್‌ಪೆಕ್ಟರ್ ಸಿ.ವಿ. ಶ್ರೀಧರ್, ಎಎಸ್‌ಐಗಳಾದ ಬಿ.ಎಂ. ಮಹಮದ್, ಎಂ.ಎಂ. ಮಹಮದ್, ಸಿಬ್ಬಂದಿಗಳಾದ ನಾಣಿಯಪ್ಪ, ಬಿ.ವಿ. ಸತೀಶ್, ಮಧು, ಸುಬ್ರಮಣಿ, ರವಿ, ಖಾದರ್, ಗಿರೀಶ್, ಮುಸ್ತಫಾ, ಕಿರಣ್‌ಕುಮಾರ್, ಮಹಾಂತೇಶ್, ರಜನ್‌ಕುಮಾರ್, ಶೆಟ್ಟಪ್ಪ ಬಾಗೇವಾಡಿ, ಸಂತೋಷ್ ದೊಡ್ಡಮನಿ, ಸಂಗಮೇಶ್ ಶಿವಪುರ, ಕೆ.ಎಂ. ಧರ್ಮ, ಚಾಲಕರಾದ ರಮೇಶ್, ಅಭಿಷೇಕ್ ಇವರೆಡೂ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದರು.

ಮಡಿಕೇರಿಯಲ್ಲಿ ಅಂತರರಾಷ್ಟ್ರೀಯ ಯೋಗ ದಿನಾಚರಣೆ

ನಾಳೆ ಯೋಗ ಜಾಥಾ

ಮಡಿಕೇರಿ,ಜೂ.15– ಅಂತರರಾಷ್ಟ್ರೀಯ ಯೋಗ ದಿನಾಚರಣೆಯ ಪ್ರಯುಕ್ತ ಜೂ.17 ರಂದು ಮಡಿಕೇರಿಯಲ್ಲಿ ಯೋಗ ಜಾಥಾ ನಡೆಯಲಿದೆ ಎಂದು ಜಿಲ್ಲಾ ಆಯುಷ್ ಅಧಿಕಾರಿ ಡಾ.ಸಿ.ರೇಣುಕಾ ದೇವಿ ತಿಳಿಸಿದ್ದಾರೆ.



ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಮತ್ತು ಆಯುಷ್ ಇಲಾಖೆ ವತಿಯಿಂದ ಎನ್‌ಎಸ್‌ಎಸ್ ಘಟಕ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಎನ್.ಸಿ.ಸಿ. ಘಟಕ ಹಾಗೂ ಯೋಗ ಸಂಸ್ಥೆಗಳ ಸಹಯೋಗದೊಂದಿಗೆ, 'ಮಾನವೀಯತೆಗಾಗಿ ಯೋಗ' ಎಂಬ ಘೋಷವಾಕ್ಯದೊಂದಿಗೆ ವಿಶ್ವ ಯೋಗ ದಿನವನ್ನು ಆಚರಿಸಲಾಗುತ್ತಿದೆ ಎಂದು ತಿಳಿಸಿದರು.

ಜೂ.17ರಂದು ಮಡಿಕೇರಿಯ ಗಾಂಧಿ ಮೈದಾನದಿಂದ ನಗರದ ಪ್ರಮುಖ ಬೀದಿಗಳಲ್ಲಿ ಜಾಥಾ ಸಾಗಲಿದ್ದು, ಜಿಲ್ಲಾಧಿಕಾರಿ ಡಾ.ಸತೀಶ್ ಜಾಥಾಕ್ಕೆ ಚಾಲನೆ ನೀಡಲಿದ್ದಾರೆ. ಹಿರಿಯ ವೈದ್ಯರಾದ ಡಾ. ಮನೋಹರ್ ಪಾಟ್ಕರ್ ಪಾಲ್ಗೊಳ್ಳಲಿದ್ದಾರೆ. ಬೆಳಗ್ಗೆ 7ರಿಂದ 8 ಗಂಟೆಯವರೆಗೆ ಏಕಕಾಲದಲ್ಲಿ ಎಲ್ಲೆಡೆ ಯೋಗ ಪ್ರದರ್ಶನ ನಡೆಯಲಿದ್ದು, 20 ಆಸನಗಳು, 4 ಪ್ರಾಣಾಯಾಮ, ಧ್ಯಾನ, ಶಾಂತಿ ಮಂತ್ರ ಪಠಣ ನಡೆಯಲಿದೆ. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವಂತೆ ಮನವಿ ಮಾಡಿದರು.

ಮಡಿಕೇರಿಯ ಟರ್ಫ್ ಮೈದಾನದಲ್ಲಿ ಕಾರ್ಯಕ್ರಮ ನಡೆಸಲು ಉದ್ದೇಶಿಸಿದ್ದು, ಅಂದು ಮಳೆ ಇದ್ದಲ್ಲಿ ಗೌಡ ಸಮಾಜದಲ್ಲಿ ಕಾರ್ಯಕ್ರಮವನ್ನು ನಡೆಸಲಾಗುವುದೆಂದ ಅವರು, ಜೂ.19ರ ಸಂಜೆ 5 ಗಂಟೆಗೆ ಮಡಿಕೇರಿಯ ಮ್ಯಾನ್ಸ್ ಕಾಂಪೌಂಡ್ ಮೈದಾನದಲ್ಲಿ ಯೋಗಾಭ್ಯಾಸ ನಡೆಯಲಿದ್ದು, ಸಾರ್ವಜನಿಕರು ಪಾಲ್ಗೊಳ್ಳಬಹುದು ಎಂದು ತಿಳಿಸಿದರು.

ಜೂ.21ರಂದು ಪ್ರಧಾನಿ ಮೋದಿ ಮೈಸೂರಿನಲ್ಲಿ ನಡೆಯುವ ಯೋಗ ದಿನಾಚರಣೆಯಲ್ಲಿ ಪಾಲ್ಗೊಳ್ಳಲಿದ್ದು, ಕೊಡಗಿನಲ್ಲೂ ಹೆಚ್ಚಿನ ಸಂಖ್ಯೆಯಲ್ಲಿ ಜನರು ಭಾಗವಹಿಸಬೇಕು ಎಂದು ಮನವಿ ಮಾಡಿದರು.

ನೀಮಾ ಸಂಸ್ಥೆಯ ಅಧ್ಯಕ್ಷ ಡಾ.ರಾಜಾರಾಮ್ ಮಾತನಾಡಿ, ವಿಶ್ವ ಯೋಗ ದಿನದ ಅಂಗವಾಗಿ ನೀಮಾ ಕೊಡಗು ವತಿಯಿಂದ ಆಯುಷ್ ಇಲಾಖೆ ಸಂಯುಕ್ತಾಶ್ರಯದಲ್ಲಿ 'ಆರೋಗ್ಯದಲ್ಲಿ ಯೋಗದ ಪಾತ್ರ' ಎಂಬ ವಿಷಯವಾಗಿ 2 ನಿಮಿಷಗಳ ಕಿರುಚಿತ್ರ ಸ್ಪರ್ಧೆ ಏರ್ಪಡಿಸಲಾಗಿದ್ದು, ವಿಜೇತರಿಗೆ ಕಾರ್ಯಕ್ರಮದಲ್ಲಿ ಬಹುಮಾನ ವಿತರಿಸಲಾಗುವುದು ಎಂದರು. ಸುದ್ದಿಗೋಷ್ಠಿಯಲ್ಲಿ ಭಾರತೀಯ ವಿದ್ಯಾಭವನ ಕೊಡಗು ವಿದ್ಯಾಲಯದ ಯೋಗ ಶಿಕ್ಷಕ ಮಹೇಶ್ ಕುಮಾರ್, ರೆಡ್‌ಕ್ರಾಸ್ ಸಭಾಪತಿ ರವೀಂದ್ರ ರೈ, ಪ್ರಣವ್ ಯೋಗ ಕೇಂದ್ರ ಶಿಕ್ಷಕಿ ಶಿಲ್ಪಾ ಹಾಗೂ ಪತಂಜಲಿ ಯೋಗ ಶಿಕ್ಷಣ ಸಮಿತಿಯ ಒ.ಕೆ.ಲಿಂಗಪ್ಪ ಉಪಸ್ಥಿತರಿದ್ದರು.

ಮಡಿಕೇರಿಯಲ್ಲಿ ನವಿಲು ಪ್ರತ್ಯಕ್ಷ

ಮಡಿಕೇರಿ,ಜೂ.15– ಬುಧವಾರ ಬೆಳ್ಳಂಬೆಳಗ್ಗೆ ಮಡಿಕೇರಿ ನಗರದ ಹೊಸ ಬಡಾವಣೆಯ ಮನೆಯೊಂದರಲ್ಲಿ ರಾಷ್ಟ್ರ ಪಕ್ಷಿ ನವಿಲು ಕಾಣಿಸಿಕೊಂಡು ಅಚ್ಚರಿ ಮೂಡಿಸಿದೆ. ಮನೆ ಮೇಲೆ ನವಿಲು ಕಂಡು ಮನೆಯವರು ಹಾಗೂ ಅಕ್ಕಪಕ್ಕದ ಮಂದಿ ಆಶ್ಚರ್ಯಕ್ಕೊಳಗಾದರು.

ಕಾಡಿನಿಂದ ಹೇಗೋ ತಪ್ಪಿಸಿಕೊಂಡು ಮಡಿಕೇರಿ ನಗರಕ್ಕೆ ಬಂದಿರೋ ಹೆಣ್ಣು ನವಿಲು ಕಳೆದ ಕೆಲ ದಿನಗಳಿಂದ ಹೊಸ ಬಡಾವಣೆಯ ಸುತ್ತ ಮುತ್ತ ಓಡಾಡುತ್ತಿತ್ತು ಎನ್ನಲಾಗಿದೆ. ಇನ್ನು ಮನೆಯ ಮೇಲೆ ಸ್ವಚ್ಛಂದವಾಗಿ ಓಡಾಡಿಕೊಂಡಿದ್ದ ಮುದ್ದಾದ ನವಿಲು ನೋಡುಗರಿಗೆ ಮುದ ನೀಡಿತು. ಎಲ್ಲರೂ ತಮ್ಮ ತಮ್ಮ ಮೊಬೈಲ್ ಫೋನ್ ಮತ್ತು ಕ್ಯಾಮರಾಗಳಲ್ಲಿ ನವಿಲಿನ ಫೋಟೋ ವೀಡಿಯೋ ಚಿತ್ರಿಸಿಕೊಂಡು ಸಂಭ್ರಮಿಸಿದರು.

ಈ ಬಗ್ಗೆ ಸ್ಥಳೀಯರು ಅರಣ್ಯ ಇಲಾಖೆಗೆ ಕರೆ ಮಾಡಿ ತಿಳಿಸಿದ್ದು, ಅರಣ್ಯ ಸಿಬ್ಬಂದಿಗಳು ಬಂದು ನೋಡಿದಾಗ ನವಿಲು ಅರಣ್ಯ ಇಲಾಖೆ ಸಿಬ್ಬಂದಿ ಕಣ್ಣಿಗೆ ಬಿದ್ದಿರಲಿಲ್ಲ. ಅದೇ ರೀತಿ ಇಂದೂ ಕೂಡಾ ಕರೆ ಬಂದಿದ್ದು, ಮೊದಲು ಬಂದಾಗ ಕಾಣಿಸಿಕೊಳ್ಳದ ನವಿಲು ಎರಡನೇ ಬಾರಿಗೆ ಕಣ್ಣಿಗೆ ಬಿದ್ದಿದೆ. ಮನೆಯ ಮೇಲಿದ್ದ ನವಿಲನ್ನು ಅರಣ್ಯ ಇಲಾಖೆ ಅಧಿಕಾರಿಗಳು ಉಪಾಯದಿಂದ ಸೆರೆ ಹಿಡಿದು ರಕ್ಷಿಸಿ, ಆನೆಕಾಡು ಮೀಸಲು ಅರಣ್ಯ ಪ್ರದೇಶಕ್ಕೆ ಬಿಟ್ಟಿದ್ದಾರೆ.



ಜೆಡಿಎಸ್ ಮಹಿಳಾ ಘಟಕಕ್ಕೆ ಅಧ್ಯಕ್ಷರ ನೇಮಕ



ಮಡಿಕೇರಿ,ಜೂ.15– ಕೊಡಗು ಜಿಲ್ಲಾ ಜಾತ್ಯತೀತ ಜನತಾದಳದ ಮಹಿಳಾ ಘಟಕದ ನೂತನ ಅಧ್ಯಕ್ಷರಾಗಿ ನಿವೃತ್ತ ಪೌರಾಯುಕ್ತರಾದ ಬಿ.ಬಿ.ಪುಷ್ಪಾವತಿ ನೇಮಕಗೊಂಡಿದ್ದಾರೆ.

ನಗರದ ಜಿಲ್ಲಾ ಜೆಡಿಎಸ್ ಕಚೇರಿಯಲ್ಲಿ ಪಕ್ಷದ ಜಿಲ್ಲಾಧ್ಯಕ್ಷ ಕೆ.ಎಂ.ಗಣೇಶ್ ಅವರು ನೇಮಕಾತಿ ಪತ್ರ ನೀಡಿ ಅಭಿನಂದಿಸಿದರು. ನಂತರ ಮಾತನಾಡಿದ ಅವರು, ಜಿಲ್ಲೆಯ ಮಹಿಳಾ ವಿಭಾಗದ ಪ್ರಮುಖರು ಹಾಗೂ ಕಾರ್ಯಕರ್ತರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಪಕ್ಷವನ್ನು ಪರಿಣಾಮಕಾರಿಯಾಗಿ ಸಂಘಟಿಸಿ ಬಲವರ್ಧನೆಗೊಳಿಸುವಂತೆ ಸಲಹೆ ನೀಡಿದರು.

ನೂತನ ಅಧ್ಯಕ್ಷೆ ಪುಷ್ಪಾವತಿ ಮಾತನಾಡಿ ಪಕ್ಷ ಸಂಘಟನೆಯ ವಿಶ್ವಾಸ ವ್ಯಕ್ತಪಡಿಸಿದರು. ಅವರು ಇದೇ ಸಂದರ್ಭ ಎಲ್ಲರ ಸಹಕಾರವನ್ನು ಕೋರಿದರು.

ಪಕ್ಷದ ಕಾರ್ಯದರ್ಶಿ ಎನ್.ಸಿ.ಸುನಿಲ್, ಮಹಿಳಾ ಘಟಕದ ಪ್ರಧಾನ ಕಾರ್ಯದರ್ಶಿ ಲೀಲಾಶೇಷಮ್ಮ, ನಗರಾಧ್ಯಕ್ಷೆ ಸುನಂದ, ಅಲ್ಪಸಂಖ್ಯಾತರ ಘಟಕದ ಜಿಲ್ಲಾಧ್ಯಕ್ಷ ಇಸಾಕ್ ಖಾನ್, ಪ್ರಮುಖರಾದ ಸೂದನ ಈರಪ್ಪ ಮತ್ತಿತರರು ಉಪಸ್ಥಿತರಿದ್ದರು.

ಜೈಲು ಹಕ್ಕಿಗಳು, ಸಿಬ್ಬಂದಿಗೆ ಯೋಗ ತರಬೇತಿ

ಮಡಿಕೇರಿ ಜೂ.15– ಕಾರಾಗೃಹ ಮತ್ತು ಸುಧಾರಣಾ ಸೇವೆ ಇಲಾಖೆ, ಜಿಲ್ಲಾ ಕಾರಾಗೃಹ ವಿಭಾಗದ ವತಿಯಿಂದ ಆರ್ಟ್ ಆಫ್ ಲಿವಿಂಗ್ ಸಹಯೋಗದಲ್ಲಿ ಅಂತರರಾಷ್ಟ್ರೀಯ ಯೋಗ ದಿನ ಪ್ರಯುಕ್ತ ಕಾರಾಗೃಹದ ಬಂಧಿಗಳು ಹಾಗೂ ಸಿಬ್ಬಂದಿಗಳಿಗೆ ಯೋಗ ತರಬೇತಿ ಕಾರ್ಯಕ್ರಮಕ್ಕೆ ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ರಮೇಶ್ ಹೊಳ್ಳ ಚಾಲನೆ ನೀಡಿದರು.



ನಗರದ ಹೊರವಲಯದಲ್ಲಿರುವ ಜಿಲ್ಲಾ ಕಾರಾಗೃಹದಲ್ಲಿ ಜೂ.21 ರವರೆಗೆ ನಡೆಯುವ ಯೋಗ ತರಬೇತಿ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿದ ರಮೇಶ್ ಹೊಳ್ಳ ಅವರು, ಯೋಗ ದಿನಾಚರಣೆ ಹಿನ್ನೆಲೆ ಇಡೀ ವಿಶ್ವ ಭಾರತದ ಕಡೆ ತಿರುಗಿ ನೋಡುವಂತಾಗಿದೆ ಎಂದರು.

ಪ್ರಾಣಾಯಾಮ, ಯೋಗ, ಧ್ಯಾನದಿಂದ ಮನಸ್ಸಿನಲ್ಲಿ ಶಾಂತಿ, ನೆಮ್ಮದಿ, ಸಹನೆ ಬೆಳೆಯುತ್ತದೆ. ಆ ನಿಟ್ಟಿನಲ್ಲಿ ಇವುಗಳನ್ನು ರೂಢಿಸಿಕೊಳ್ಳಬೇಕು. ಇದರಿಂದ ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕೆ ಸಹಕಾರಿಯಾಗಲಿದೆ ಎಂದು ಅವರು ಹೇಳಿದರು.

ಕಾರಾಗೃಹದಲ್ಲಿರುವ ಬಂಧಿಗಳು ಮನಸ್ಸನ್ನು ಪರಿವರ್ತನೆ ಮಾಡಿಕೊಂಡು ಸಮಾಜದಲ್ಲಿ ಇತರರಂತೆ ಬದುಕು ನಡೆಸುವಂತಾಗಬೇಕು ಎಂದು ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು ತಿಳಿಸಿದರು.

ಜಿಲ್ಲಾ ಕಾರಾಗೃಹ ಅಧೀಕ್ಷಕ ಸಂಜಯ್ ಜತ್ತಿ ಅವರು ಮಾತನಾಡಿ ಪ್ರತೀ ದಿನ ಯೋಗ, ಧ್ಯಾನ ಮಾಡುವುದರಿಂದ ಮನಸ್ಸಿನಲ್ಲಿ ಶಾಂತಿ, ನೆಮ್ಮದಿ, ದೊರೆಯಲಿದೆ. ಯೋಗ ತರಬೇತಿ ಶಿಬಿರದ ಅವಕಾಶವನ್ನು ಸರಿಯಾಗಿ ಬಳಸಿಕೊಳ್ಳುವಂತಾಗಬೇಕು ಎಂದರು.

ಪ್ರಮುಖರಾದ ಕೆ.ಡಬ್ಲ್ಯು ಬೋಪಯ್ಯ, ಕೃಷ್ಣ ಬೋಪಯ್ಯ, ಯೋಗ ತರಬೇತಿದಾರರಾದ ಶಂಕರಿ, ಯಶೋಧ, ಸುರೇಶ, ಇತರರು ಇದ್ದರು.

ಕ್ಷುಲ್ಲಕ ಕಾರಣಕ್ಕೆ ಇರಿತ: ವ್ಯಕ್ತಿಗೆ ಗಾಯ

ಸೋಮವಾರಪೇಟೆ, ಜೂ.15– ಕ್ಷುಲ್ಲಕ ಕಾರಣಕ್ಕಾಗಿ ವ್ಯಕ್ತಿಯೊಬ್ಬರನ್ನು ಚಾಕುವಿನಿಂದ ಇರಿದು ಗಾಯಗೊಳಿಸಿರುವ ಘಟನೆ ತಾಲೂಕಿನ ತೋಳೂರುಶೆಟ್ಟಳ್ಳಿ ಗ್ರಾಮದಲ್ಲಿ ಸಂಭವಿಸಿದೆ.



ಗ್ರಾಮದ ಪ್ರಸನ್ನ ಇರಿತದಿಂದ ತೀವ್ರವಾಗಿ ಗಾಯಗೊಂಡಿದ್ದು, ಇಲ್ಲಿನ ಸರ್ಕಾರಿ ಆಸ್ಪತ್ರೆಗೆ ದಾಖಲಾಗಿದ್ದಾರೆ. 6 ಗಂಟೆಯಲ್ಲಿ ಗ್ರಾಮದ ಜಂಕ್ಷನ್ ಬಳಿ ಪ್ರಸನ್ನ ಮತ್ತು ಆತನ ಸ್ನೇಹಿತ ಕ್ವಾಟ್ಲೆ ಸತೀಶನ ನಡುವೆ ಕ್ಷುಲ್ಲಕ ಕಾರಣಕ್ಕೆ ತೀವ್ರ ಮಾತಿನ ಚಕಮಕಿ ನಡೆಯಿತೆನ್ನಲಾಗಿದೆ. ಈ ಸಂದರ್ಭ ಚಾಕುವಿನಿಂದ ಪ್ರಸನ್ನನ ಕುತ್ತಿಗೆಯ ಭಾಗ, ಕೈಯ ಮಣಿಕಟ್ಟಿಗೆ ತಿವಿದು ಗಾಯಗೊಳಿಸಿ ಪರಾರಿಯಾದ. ರಕ್ತದ ಮಡುವಿನಲ್ಲಿ ಬಿದ್ದು ಒದ್ದಾಡುತ್ತಿದ್ದ ಪ್ರಸನ್ನ ಅವರನ್ನು ಗ್ರಾಮಸ್ಥರೊಬ್ಬರು ತಮ್ಮ ವಾಹನದಲ್ಲಿ ಸರ್ಕಾರಿ ಆಸ್ಪತ್ರೆಗೆ ದಾಖಲು ಮಾಡಿದ್ದಾರೆ. ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಮನೆಗೆ ನುಗ್ಗಿ ಚಿನ್ನಾಭರಣ ಕಳವು

ಗೋಣಿಕೊಪ್ಪ, ಜೂ.15– ಯಾರೂ ಇಲ್ಲದ ಸಮಯ ಮನೆಗೆ ನುಗ್ಗಿ ಸುಮಾರು 9 ಲಕ್ಷ ರೂ.ಮೌಲ್ಯದ ಚಿನ್ನಾಭರಣ ದೋಚಿದ ಘಟನೆ ಪಾಲಿಬೆಟ್ಟ ಗ್ರಾಮದಲ್ಲಿ ಮಂಗಳವಾರ ನಡೆದಿದೆ. ಕಳ್ಳತನದ ದೃಶ್ಯ ಸಿಸಿ ಕ್ಯಾಮರಾದಲ್ಲಿ ಸೆರೆ ಯಾಗಿದ್ದು, ಪೊಲೀಸರು ಬಂಧನಕ್ಕೆ ಬಲೆ ಬೀಸಿದ್ದಾರೆ. ಪಾಲಿಬೆಟ್ಟ ಅಮ್ಮತ್ತಿ ರಸ್ತೆಯಲ್ಲಿ ರುವ ಕಾಫಿ ಬೆಳೆಗಾರ ಕೂತಂಡ ಸುಬ್ರಮಣಿ ದಂಪತಿ ಮಧ್ಯಾಹ್ನ 12 ಗಂಟೆಗೆ ಪಟ್ಟಣಕ್ಕೆ ತೆರಳಿ, ಕೆಲಸಮುಗಿಸಿಕೊಂಡು ಮಧ್ಯಾಹ್ನ 12.30ಕ್ಕೆ ಮನೆಗೆ ಹಿಂತಿರುಗಿದ್ದಾರೆ. ಆಗ ನೋಡಿದಾಗ ಚಿನ್ನಾಭರಣ ದೋಚಿರುವುದು ತಿಳಿಯಿತು. ಸಿದ್ದಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಸಬ್‌ಇನ್ಸ್‌ಪೆಕ್ಟರ್ ಮೋಹನ್ ರಾಜ್ ನೇತೃತ್ವದಲ್ಲಿ ಪತ್ತೆಗೆ ಕ್ರಮ ಕೈಗೊಳ್ಳಲಾಗಿದೆ. ಅಸ್ಸಾಂ ಮೂಲದ ಕಳ್ಳರಿಂದ ಘಟನೆ ನಡೆದಿದೆ ಎನ್ನಲಾಗಿದೆ. ಮನೆಯವರು ಅರ್ಧ ಗಂಟೆಯಲ್ಲಿ ಬರುವಷ್ಟರಲ್ಲಿ ಕಳ್ಳರು ಚಿನ್ನಾಭರಣ ದೋಚಿ ಪರಾರಿಯಾಗಿದ್ದಾರೆ.

2 ತಿಂಗಳ ಹಿಂದೆಯಷ್ಟೆ ಮನೆಯಲ್ಲಿ ಬಂದು ನೆಲೆಸಿದ್ದರು. ಎರಡು ದಿನಗಳ ಹಿಂದೆ ಪಾಲಿಬೆಟ್ಟ ಬ್ಯಾಂಕ್ ಆಫ್ ಬರೋಡ ಸೇಫ್ ಲಾಕರ್‌ನಲ್ಲಿದ್ದ ವಜ್ರ ಹಾಗೂ ಚಿನ್ನಾಭರಣ ತಂದು ಮನೆಯಲ್ಲಿಟ್ಟಿದ್ದರು. ಇದನ್ನು ಅರಿತು ಕಳ್ಳತನ ಮಾಡಲಾಗಿದೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಪೊಲೀಸ್ ವರಿಷ್ಠಾಧಿಕಾರಿ ಮಲಚೀರ ಎ.ಅಯ್ಯಪ್ಪ, ಕಳ್ಳತನ ಮಾಡಿದವರ ಚಿತ್ರ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದ್ದು, ಶೀಘ್ರದಲ್ಲೇ ಬಂಧಿಸಲಾಗುವುದು ಎಂದು ತಿಳಿಸಿದ್ದಾರೆ.

ಶೈಲಾ ನಿಧನ

ಸೋಮವಾರಪೇಟೆ, ಜೂ.15– ಇಲ್ಲಿನ ಬಿ.ಟಿ.ಸಿ.ಜಿ ಕಾಲೇಜಿನಲ್ಲಿ ಅತಿಥಿ ಉಪನ್ಯಾಸಕರಾಗಿದ್ದ ಶೈಲಾ(53) ಬುಧವಾರ ಬೆಳಗ್ಗೆ ತೀವ್ರ ಹೃದಯಾಘಾತದಿಂದ ನಿಧನರಾದರು.



ಮೃತರು ಪತಿ ಕುಡೆಕಲ್ಲು ಬಾಲಕೃಷ್ಣ, ಓರ್ವ ಪುತ್ರ ಹಾಗೂ ಪುತ್ರಿಯನ್ನು ಅಗಲಿದ್ದಾರೆ.ಮೃತರ ಅಂತ್ಯಕ್ರಿಯೆ ಬುಧವಾರ ಸಂಜೆ ಮಡಿಕೇರಿ ತಾಲೂಕು ಹಾಕತ್ತೂರು ಗ್ರಾಮದಲ್ಲಿ ನಡೆಯಿತು.

ಒಂದನೇ ಪುಟದಿಂದ

ಕಾಂಗ್ರೆಸ್‌ನ ಮಧು ಮುನ್ನಡೆ

ಹೆಸರು ನೋಂದಾಯಿಸಿ ಬ್ಯಾಲೆಟ್ ಪೇಪರ್ ಪಡೆದಿದ್ದರು.

ಅದರಲ್ಲಿ 178 ಮಂದಿ ಚುನಾವಣಾಧಿಕಾರಿಗಳಿಗೆ ಮತ ಪತ್ರವನ್ನು ಅಂಚೆ ಮೂಲಕ ಹಿಂದಿರುಗಿಸಿದ್ದರು. ಆದರೆ, ಓರ್ವ ಖಾಲಿ ಬ್ಯಾಲೆಟ್ ಪೇಪರ್ ರವಾನಿಸಿದ್ದರೆ, ಮತ್ತೊಬ್ಬರದ್ದು ತಿರಸ್ಕೃತವಾಯಿತು. ಉಳಿದ 176 ಕ್ರಮಬದ್ಧ ಮತದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡ 63 ಮತ ಪಡೆದು ಶುಭಾರಂಭ ಮಾಡಿದರು. ಇನ್ನು ಬಿಜೆಪಿಯ ಮೈ.ವಿ.ರವಿಶಂಕರ್ ಅವರಿಗೆ 60 ಮತ್ತು ಜೆಡಿಎಸ್‌ನ ಹೆಚ್.ಕೆ. ರಾಮುಗೆ 43 ಮತ ಲಭಿಸಿದರೆ, 10 ಮತಗಳು ಪಕ್ಷೇತರರ ಪಾಲಾಯಿತು.

ಪ್ರಥಮ ಪ್ರಾಶಸ್ತ್ಯದ ಮತ ಎಣಿಕಾ ಪ್ರಕ್ರಿಯೆ ಆರಂಭವಾದಾಗಿನಿಂದಲೂ ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡ ಮುನ್ನಡೆ ಕಾಯ್ದುಕೊಳ್ಳುವಲ್ಲಿ ಯಶಸ್ವಿಯಾದರು. ಎರಡನೇ ಸ್ಥಾನದಲ್ಲಿ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಕಾಂಗ್ರೆಸ್ ಅಭ್ಯರ್ಥಿಗಿಂತ ಸ್ವಲ್ಪ ಕಡಿಮೆ ಮತ ಪಡೆಯುವ ಮೂಲಕ ಸ್ಪರ್ಧೆಯೊಡ್ಡುತ್ತಲೇ ಬಂದರು. 10 ಸಾವಿರ ಮತ ಎಣಿಕೆಯಾಗಿದ್ದಾಗ 1600 ಮತಗಳ ಮುನ್ನಡೆ ಪಡೆದಿದ್ದ ಕಾಂಗ್ರೆಸ್ ಅಭ್ಯರ್ಥಿ, 20 ಸಾವಿರ ಮತ ಎಣಿಕೆ ನಂತರ 2200ರ ಮುನ್ನಡೆ ಹೆಚ್ಚಿಸಿಕೊಂಡರು. ಸಂಜೆ 4 ಗಂಟೆಗೆ 30 ಸಾವಿರ ಮತ ಎಣಿಕೆ ಮುಗಿದಾಗ ಮುನ್ನಡೆಯ ಅಂತರ 302ಕ್ಕೆ ಕುಸಿಯಿತಾದರೂ, ಸಂಜೆ 5 ಗಂಟೆ ವೇಳೆಗೆ 40 ಸಾವಿರ ಮತ ಎಣಿಕೆ ಪೂರ್ಣಗೊಂಡಾಗ ಮಧು ಜಿ.ಮಾದೇಗೌಡರು ಚೇತರಿಸಿಕೊಂಡಿದ್ದು, 2601 ಮತಗಳ ಮುನ್ನಡೆ ಸಾಧಿಸಿದರು. ಸಂಜೆ 6.30ರ ವೇಳೆಗೆ 49,500 ಸಾವಿರ ಮತ ಎಣಿಕೆ ನಡೆದ ಬಳಿಕ ಕಾಂಗ್ರೆಸ್ ಅಭ್ಯರ್ಥಿ 2658 ಮತಗಳ ಮುನ್ನಡೆ ಕಾಯ್ದುಕೊಂಡರು.

ಯಾರಿಗೂ ಒಲಿಯದ ಪ್ರಥಮ ಪ್ರಾಶಸ್ತ್ಯದ ಗೆಲುವು: ಚುನಾವಣೆಯ ಪ್ರಚಾರದ ವೇಳೆ ಮೂರು ಪಕ್ಷಗಳ ಅಭ್ಯರ್ಥಿಗಳು ಪ್ರಥಮ ಪ್ರಾಶಸ್ತ್ಯದ ಮತಗಳಿಂದಲೇ ಗೆಲ್ಲುತ್ತೇವೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದರು. ಆದರೆ, ಇಂದು ಮತ ಎಣಿಕೆ ವೇಳೆ ಕಣದಲ್ಲಿದ್ದ 19 ಅಭ್ಯರ್ಥಿಗಳಲ್ಲಿ ಯಾರೊಬ್ಬರಿಗೂ ಪ್ರಥಮ ಪ್ರಾಶಸ್ತ್ಯದ ಮತಗಳ ಗೆಲುವು ಸಾಧ್ಯವಿಲ್ಲ ಎಂಬುದು ಮನದಟ್ಟಾಯಿತು. ಪ್ರಥಮ ಪ್ರಾಶಸ್ತ್ಯದ ಗೆಲುವಿಗಾಗಿ ಚಲಾವಣೆಯಾದ ಕ್ರಮಬದ್ಧ ಮತದಲ್ಲಿ ಅರ್ಧಕ್ಕಿಂತ ಹೆಚ್ಚುವರಿ ಒಂದು ಮತ ಪಡೆಯಬೇಕಾಗಿದ್ದು, ಆದರೆ ಯಾರಿಗೂ ಈ ಪ್ರಮಾಣದ ಮತ ಲಭಿಸದ ಹಿನ್ನೆಲೆಯಲ್ಲಿ ಎರಡನೇ ಪ್ರಾಶಸ್ತ್ಯದ ಮತಗಳ ಮೊರೆ ಹೋಗಬೇಕಾಯಿತು. ಮೈಸೂರು, ಚಾಮರಾಜನಗರ, ಮಂಡ್ಯ, ಹಾಸನ ಜಿಲ್ಲೆಗಳನ್ನೊಳಗೊಂಡ ಈ ದಕ್ಷಿಣ ಪದವೀಧರರ ಕ್ಷೇತ್ರದ ಚುನಾವಣೆಯಲ್ಲಿ ಹೆಸರು ನೋಂದಾಯಿಸಿದ್ದ 1,41,963 ಮತದಾರರಲ್ಲಿ 99,304 ಮತದಾರರು ಮತ ಚಲಾಯಿಸಿದ್ದರು. ಒಟ್ಟಾರೆ ಶೇ.69.95ರಷ್ಟು ಮತ ಚಲಾವಣೆಯಾಗಿತ್ತು. ಮೈಸೂರಿನ ಪಡುವಾರಹಳ್ಳಿಯಲ್ಲಿರುವ ಮಹಾರಾಣಿ ವಾಣಿಜ್ಯ ಕಾಲೇಜಿನ ಎರಡು ಕೊಠಡಿಗಳಲ್ಲಿ 28 ಟೇಬಲ್‌ಗಳಲ್ಲಿ ಮತ ಎಣಿಕಾ ಪ್ರಕ್ರಿಯೆ ಆರಂಭದಿಂದಲೂ ಕುತೂಹಲ ಕೆರಳಿಸಿತ್ತು, ಕಾತರ ಹೆಚ್ಚಿಸುವಂತೆ ಮಾಡಿತು.

ಅಭ್ಯರ್ಥಿಗಳ ಸಮ್ಮುಖದಲ್ಲಿ ಸ್ಟ್ರಾಂಗ್ ರೂಮ್ ಓಪನ್: ಜೂ.13ರಂದು ಚುನಾವಣೆ ಬಳಿಕ ನಾಲ್ಕೂ ಜಿಲ್ಲೆಗಳಿಂದ ಮತಪೆಟ್ಟಿಗೆಯನ್ನು ಎಣಿಕಾ ಕೇಂದ್ರ ಮಹಾರಾಣಿ ವಾಣಿಜ್ಯ ಕಾಲೇಜಿನ ಸ್ಟ್ರಾಂಗ್ ರೂಂನಲ್ಲಿ ಬಿಗಿ ಭದ್ರತೆಯಡಿ ಸುರಕ್ಷಿತವಾಗಿಡಲಾಗಿತ್ತು. ಇಂದು ಬೆಳಗ್ಗೆ 7.40ರಲ್ಲಿ ಚುನಾವಣಾ ವೀಕ್ಷಕರಾಗಿದ್ದ ಹಿರಿಯ ಐಎಎಸ್ ಅಧಿಕಾರಿ ಪೊನ್ನುರಾಜ್, ಪ್ರಾದೇಶಿಕ ಆಯುಕ್ತ ಜಿ.ಸಿ.ಪ್ರಕಾಶ್, ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್, ಮಂಡ್ಯ ಜಿಲ್ಲಾಧಿಕಾರಿ ಅಶ್ವಥಿ ಸೇರಿದಂತೆ ನಾಲ್ಕು ಜಿಲ್ಲೆಗಳ ಅಧಿಕಾರಿಗಳು, ಪ್ರಮುಖ ಪಕ್ಷಗಳ ಅಭ್ಯರ್ಥಿಗಳ ಸಮ್ಮುಖದಲ್ಲಿ ಸ್ಟ್ರಾಂಗ್ ರೂಮ್ ತೆರೆಯಲಾಯಿತು. ಈ ಸಂದರ್ಭದಲ್ಲಿ ಅಭ್ಯರ್ಥಿಗಳು ಹಾಗೂ ಅವರ ಆಯ್ದ ಏಜೆಂಟರಿಂದ ಸಹಿ ಪಡೆಯಲಾಯಿತು.

ಮತಪತ್ರಗಳ ಮಿಶ್ರಣ: ಸ್ಟ್ರಾಂಗ್ ರೂಂನಲ್ಲಿದ್ದ ಮತ ಪೆಟ್ಟಿಗೆಗಳನ್ನು ಎಣಿಕಾ ಕೊಠಡಿಗೆ ತಂದು ಮತಪತ್ರಗಳನ್ನು ನೆಲಕ್ಕೆ ಸುರಿದು ತಲಾ 25 ಮತಪತ್ರದ ಕಟ್ಟುಗಳನ್ನು ಮಾಡುವ ಪ್ರಕ್ರಿಯೆ ಆರಂಭಿಸಲಾಯಿತು. ಬೆಳಗ್ಗೆ 8 ಗಂಟೆಯಿಂದ ಮಧ್ಯಾಹ್ನ 12.15ವರೆಗೆ ಬಂಡಲ್ ಮಾಡಲಾಯಿತು. ಇದರ ಜೊತೆ ಜೊತೆಗೆ ಕುಲಗೆಟ್ಟ ಮತ ಪತ್ರವನ್ನು ಬೇರ್ಪಡಿಸಲಾಯಿತು. ಚಲಾವಣೆಗೊಂಡಿದ್ದ 99,304 ಮತಗಳನ್ನು ತಲಾ 25 ಮತಪತ್ರದ ಬಂಡಲ್‌ಗಳಾಗಿ ಮಾರ್ಪಡಿಸಿದ ಬಳಿಕ ಮಧ್ಯಾಹ್ನ 12.30ರಿಂದ ಯಾವ ಯಾವ ಅಭ್ಯರ್ಥಿಗಳಿಗೆ ಪ್ರಥಮ ಪ್ರಾಶಸ್ತ್ಯದ ಮತ ಬಂದಿದೆ ಎಂದು ಮತಪತ್ರಗಳನ್ನು ಏಜೆಂಟರಿಗೆ ತೋರಿಸಿ, ಅಭ್ಯರ್ಥಿಗಳ ಹೆಸರಿನ ಟ್ರೇ ಗಳಿಗೆ ಇಡಲಾಯಿತು. ಈ ವೇಳೆ ಅಭ್ಯರ್ಥಿಗಳ ಏಜೆಂಟರು ಬರೆದುಕೊಂಡು ಮಾಹಿತಿಯಂತೆ ಮುನ್ನಡೆ ಇರುವ ಲೆಕ್ಕಾಚಾರದಲ್ಲಿ ನಿರತರಾದರು.

ಮಧ್ಯಾಹ್ನದವರೆಗೂ ಉತ್ಸಾಹವೇ ಇಲ್ಲ: ಮತ ಎಣಿಕಾ ಕೇಂದ್ರದಲ್ಲಿ ಮೂರೂ ಪಕ್ಷಗಳ ಕಾರ್ಯಕರ್ತರು ಹಾಗೂ ಅಭ್ಯರ್ಥಿಗಳಲ್ಲಿ ಮಧ್ಯಾಹ್ನ 12 ಗಂಟೆವರೆಗೂ ಉತ್ಸಾಹವೇ ಇಲ್ಲ. ಮತಪತ್ರಗಳ ಜೋಡಣಾ ಕಾರ್ಯ ಪೂರ್ಣಗೊಂಡಂತೆ ಎಣಿಕಾ ಟೇಬಲ್ ಬಳಿ ಹೋಗಿ ಎಣಿಕಾ ಕಾರ್ಯ ಆರಂಭದೊಂದಿಗೆ ಕುತೂಹಲ ಮೂಡಿತು.


ಐಡೆಂಟಿಟಿ ನೋಡಿ ಒಳಗೆ ಬಿಟ್ಟ ಸಿಬ್ಬಂದಿ: ಅಭ್ಯರ್ಥಿಗಳ ಪರ ಏಜೆಂಟರನ್ನು ಎಣಿಕೆ ಪ್ರಕ್ರಿಯೆ ವೀಕ್ಷಣೆಗೆ ನಿಯೋಜಿಸಲಾಗಿತ್ತು. ಈ ವೇಳೆ ಏಜೆಂಟರಿಗಾಗಿ ನೀಡಿದ್ದ ಗುರುತಿನ ಚೀಟಿ ತಂದ ಏಜೆಂಟರನ್ನು ಪೊಲೀಸರು ಕೂಲಂಕುಶವಾಗಿ ಪರಿಶೀಲಿಸಿದರು. ಮಾಸ್ಕ್ ಧರಿಸಿ ಬಂದವರನ್ನು ಮಾಸ್ಕ್ ತೆಗೆಸಿ ಮುಖ ಚಹರೆ ಖಚಿತಪಡಿಸಿಕೊಂಡು ಎಣಿಕಾ ಕೇಂದ್ರದೊಳಗೆ ಬಿಡುತ್ತಿದ್ದರು. ಮತ ಎಣಿಕಾ ಕೇಂದ್ರಕ್ಕೆ ಅಭ್ಯರ್ಥಿಗಳೂ ಸೇರಿದಂತೆ ಏಜೆಂಟರು ಹಾಗೂ ಸಿಬ್ಬಂದಿಗಳು ಮೊಬೈಲ್ ತೆಗೆದುಕೊಂಡು ಹೋಗುವುದಕ್ಕೆ ನಿರ್ಬಂಧ ಹೇರಲಾಗಿತ್ತು. ಕಟ್ಟಡದ ಮುಖ್ಯ ದ್ವಾರದಲ್ಲಿ ಮೆಟಲ್ ಡಿಟೆಕ್ಟರ್ ಅಳವಡಿಸುವುದರೊಂದಿಗೆ ಲೋಹ ಶೋಧಕ ಉಪಕರಣಗಳಿಂದ ಪ್ರತಿಯೊಬ್ಬರನ್ನು ತಪಾಸಣೆಗೊಳಪಡಿಸಲಾಗುತ್ತಿತ್ತು.

> “ ಪ್ರಜಾಪ್ರಭುತ್ವದಲ್ಲಿ ಮತದಾರರು ನೀಡುವ ತೀರ್ಪಿಗೆ ತಲೆಬಾಗುತ್ತೇನೆ. ಈ ಬಾರಿ ಪ್ರಜಾಪ್ರಭುತ್ವದ ಹಬ್ಬದಂತೆ ಹೆಚ್ಚಿನ ಪ್ರಮಾಣದಲ್ಲಿ ಮತದಾನವಾಗಿದೆ. ಮತಗಳು ತಿರಸ್ಕೃತವಾಗಬಾರದೆಂದು ಪತ್ರಿಕೆಗಳಲ್ಲಿ ಜಾಹಿರಾತು ಸೇರಿದಂತೆ ಎಲ್ಲಾ ರೀತಿಯಲ್ಲೂ ಪದವೀಧರ ಮತದಾರರಿಗೆ ಜಾಗೃತಿ ಮೂಡಿಸಿದ್ದೇವು, ಸುಮಾರು 89 ಸಾವಿರ ಪದವೀಧರರಿಗೆ ಮತದಾನ ಮಾಡುವ ಬಗ್ಗೆ ಜಾಗೃತಿಮೂಡಿಸಿದ್ದಾರೂ ಯಾಕೆ ಹೆಚ್ಚಿನ ಪ್ರಮಾಣದಲ್ಲಿ ಮತಗಳು ತಿರಸ್ಕೃತವಾದವು ಎಂಬುದು ಅರ್ಥವಾಗುತ್ತಿಲ್ಲ. ಈ ಚುನಾವಣೆಯಲ್ಲಿ ಮತ ಚಲಾಯಿಸಿದ ಎಲ್ಲಾ ಪದವೀಧರರಿಗೂ ಧನ್ಯವಾದ ಅರ್ಪಿಸುತ್ತೇನೆ. **–ಪ್ರಸನ್ನ ಎನ್.ಗೌಡ, ಪಕ್ಷೇತರ ಅಭ್ಯರ್ಥಿ**

ಜೆಡಿಎಸ್ ತೀವ್ರ ಹಿನ್ನಡೆ

ಮೈಸೂರು, ಜೂ.15(ಎಂಟಿವೈ)– ದಕ್ಷಿಣ ಪದವೀಧರರ ಕ್ಷೇತ್ರದ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿ ತೀವ್ರ ಹಿನ್ನಡೆ ಅನುಭವಿಸಿದ್ದಾರೆ. ಇದು ಇತ್ತೀಚಿನ ವರ್ಷಗಳಲ್ಲೇ ಕಳಪೆ ಸಾಧನೆ. ಹಳೆ ಮೈಸೂರು ಪ್ರಾಂತ್ಯದಲ್ಲಿ ಪ್ರಾಬಲ್ಯ ಹೊಂದಿರುವ ಜೆಡಿಎಸ್ ದಕ್ಷಿಣ ಪದವೀಧರರ ಕ್ಷೇತ್ರದ ಚುನಾವಣೆಯಲ್ಲಿ ಪ್ರಥಮ ಅಥವಾ ದ್ವಿತೀಯ ಸ್ಥಾನದಲ್ಲಿರುತ್ತಿತ್ತು. ಅದರಲ್ಲೂ ಕಳೆದ ಅವಧಿಯಲ್ಲಿ ಕೆ.ಟಿ.ಶ್ರೀಕಂಠೇಗೌಡರ ಮೂಲಕ ದಕ್ಷಿಣ ಪದವೀಧರರ ಕ್ಷೇತ್ರವನ್ನು ತನ್ನ ತೆಕ್ಕೆಗೆ ತೆಗೆದುಕೊಂಡಿದ್ದ ಜೆಡಿಎಸ್ ಈ ಬಾರಿ ಕ್ಷೇತ್ರವನ್ನು ಉಳಿಸಿಕೊಳ್ಳಲು ಹೆಣಗಾಡಿದರೂ ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣವಾಗಿದೆ. ಮತ ಎಣಿಕೆಯ ಆರಂಭದಿಂದಲೂ ಹೆಚ್.ಕೆ.ರಾಮು 3 ಅಥವಾ 4ನೇ ಸ್ಥಾನದಲ್ಲಿದ್ದರು. ಬಳಿಕ ಚೇತರಿಸಿಕೊಂಡರೂ, ಕಾಂಗ್ರೆಸ್, ಬಿಜೆಪಿ ಅಭ್ಯರ್ಥಿಗೆ ದೊರೆತ ಮತಗಳಲ್ಲಿ ಅರ್ಧದಷ್ಟು ಮತ ಪಡೆಯುವಲ್ಲಿ ವಿಫಲರಾದರು. ಆ ನಂತರ ಚೇತರಿಸಿಕೊಂಡರೂ ಮೂರನೇ ಸ್ಥಾನದಿಂದ ಮೇಲೇಳಲೇ ಇಲ್ಲ. ಇದರಿಂದ ಸಂಜೆ 4 ಗಂಟೆ ಆಗುತ್ತಿದ್ದಂತೆ ಕೆಲವು ಟೇಬಲ್‌ಗಳಲ್ಲಿದ್ದ ಏಜೆಂಟರು ಹೊರ ನಡೆದರು. ಅಲ್ಲದೇ ಬೆಳಗ್ಗೆ ಗೆದ್ದೇ ಗೆಲ್ಲುವ ವಿಶ್ವಾಸದಲ್ಲಿದ್ದ ಅಭ್ಯರ್ಥಿ ಹೆಚ್.ಕೆ. ರಾಮು ಅವರು ಎಣಿಕಾ ಪ್ರಕ್ರಿಯೆಯಲ್ಲಿ ಮತಗಳಿಕೆ ಪ್ರಮಾಣ ಕುಸಿಯುತ್ತಿರುವುದನ್ನು ಮನಗಂಡು ಮಧ್ಯಾಹ್ನ 3 ಗಂಟೆಯಲ್ಲೇ ಎಣಿಕಾ ಕೇಂದ್ರದಿಂದ ಹೊರ ನಡೆದರು.

ಪಶ್ಚಿಮ ಶಿಕ್ಷಕರ ಕ್ಷೇತ್ರದಿಂದ 8ನೇ ಬಾರಿಗೆ ಹೊರಟ್ಟಿ ಮೇಲ್ಮನೆ ಪ್ರವೇಶ



ಬೆಳಗಾವಿ, ಜೂ.15–ಪಶ್ಚಿಮ ಶಿಕ್ಷಕರ ಮತಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಬಸವರಾಜ ಹೊರಟ್ಟಿ ಗೆಲುವು ಸಾಧಿಸುವ ಮೂಲಕ 8ನೇ ಬಾರಿಗೆ ಮೇಲ್ಮನೆ ಪ್ರವೇ ಶಿಸಿದ್ದಾರೆ. ಗೆಲುವಿನ ಗುರಿಗೆ ಬೇಕಾಗಿದ್ದ ಮತಗಳನ್ನು ಸುಲಭವಾಗಿ ಪಡೆದ ಹೊರಟ್ಟಿ ಇನ್ನೂ 4 ಸಾವಿರ ಮತಗಳ ಎಣಿಕೆ ಬಾಕಿ ಇರುವಾಗಲೇ ಜಯದ ನಗೆ ಬೀರಿದ್ದಾರೆ. ಈ ವೇಳೆಗೆ ಹೊರಟ್ಟಿ 7500ಕ್ಕೂ ಹೆಚ್ಚು ಮತಗಳನ್ನು ಪಡೆದಿದ್ದಾರೆ. ಪಶ್ಚಿಮ ಶಿಕ್ಷಕರ ಕ್ಷೇತ್ರದಲ್ಲಿ ಜೆಡಿಎಸ್ ತೊರೆದು ಬಿಜೆಪಿ ಸೇರ್ಪಡೆಗೊಂಡಿದ್ದ 76ರ ಹರೆಯದ ಹಿರಿಯ ರಾಜಕಾರಣಿ ಬಸವರಾಜ ಹೊರಟ್ಟಿ ವಿರುದ್ಧ ಜೆಡಿಎಸ್‌ನ ಶ್ರೀಶೈಲ ಗಡದಿನ್ನಿ, ಕಾಂಗ್ರೆಸ್ ಅಭ್ಯರ್ಥಿ ಬಸವರಾಜ ಗುರಿಕಾರ ಕಣದಲ್ಲಿದ್ದರು.

ವಾಯುವ್ಯ ಶಿಕ್ಷಕರ ಕ್ಷೇತ್ರದಿಂದ ಕಾಂಗ್ರೆಸ್‌ನ ಪ್ರಕಾಶ್ ಹುಕ್ಕೇರಿಗೆ ಜಯ



ಬೆಳಗಾವಿ,ಜೂ.15–ವಿಧಾನಪರಿಷತ್‌ನ ವಾಯುವ್ಯ ಶಿಕ್ಷಕರ ಕ್ಷೇತ್ರದ ಚುನಾವಣಾ ಫಲಿತಾಂಶ ಪ್ರಕಟ ವಾಗುತ್ತಿದ್ದು, ಈ ಮಧ್ಯೆ ಕಾಂಗ್ರೆಸ್ ಅಭ್ಯರ್ಥಿ ಪ್ರಕಾಶ್ ಹುಕ್ಕೇರಿ ಗೆಲುವು ಸಾಧಿಸಿದ್ದಾರೆ. ಪ್ರಕಾಶ್ ಹುಕ್ಕೇರಿ 4 ಸಾವಿರ ಮತಗಳ ಮುನ್ನಡೆ ಕಾಯ್ದುಕೊಂಡಿದ್ದು, ಒಟ್ಟು 10 ಸಾವಿರಕ್ಕೂ ಹೆಚ್ಚು ಮತ ಪಡೆದಿದ್ದಾರೆ. ಬಿಜೆಪಿ ಅಭ್ಯರ್ಥಿ ಅರುಣ್ ಶಹಪುರಗೆ ಸೋಲಾಗಿದೆ.

34,693 ಮತಗಳಿಂದ ನಿರಾಣಿ ಜಯಭೇರಿ



ಬೆಳಗಾವಿ: ವಾಯುವ್ಯ ಪದವೀಧರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಹಣಮಂತ ನಿರಾಣಿ 34,693 ಮತಗಳ ಭಾರೀ ಅಂತರದಿಂದ ಗೆಲುವು ಸಾಧಿಸಿದರು. ಕೊನೆಯ ಸುತ್ತಿನಲ್ಲಿ ನಿರಾಣಿ ಅವರಿಗೆ 44.815 ಮತ ಬಂದರೆ, ಪ್ರತಿಸ್ಪರ್ಧಿ ಕಾಂಗ್ರೆಸ್‌ನ ಸುನೀಲ ಸಂಕ 10,122 ಮತ ಗಳಿಸಿದರು. ಮೂರನೇ ಸ್ಥಾನದಲ್ಲಿರುವ ದೀಪಿಕಾ ಅವರಿಗೆ 453 ಮತ ಮಾತ್ರ ಬಂದಿವೆ. ಎಲ್ಲ 65,992 ಮತಗಳ ಎಣಿಕೆ ಮುಗಿಯಲು ತಡರಾತ್ರಿ 12.20 ಆಯಿತು. 9,006 ಮತಗಳು ಅಸಿಂಧುವಾಗಿವೆ.

ಜೂ.20ರಂದು ಮೈಸೂರಿಗೆ ಪ್ರಧಾನಿ ನರೇಂದ್ರ ಮೋದಿ ಭೇಟಿ ಹಿನ್ನೆಲೆ

ಜಿಲ್ಲಾ ಉಸ್ತುವಾರಿ ಸಚಿವರಿಂದ ಪ್ರಧಾನಿ ತಂಗುವ ಹೋಟೆಲ್, ಸಂಚರಿಸುವ ಮಾರ್ಗಗಳ ಪರಿಶೀಲನೆ

ಮೈಸೂರು, ಜೂನ್ 15 (ಆರ್‌ಕೆಬಿ)– ಮೈಸೂರು ಅರಮನೆ ಆವರಣದಲ್ಲಿ ಜೂ.21 ರಂದು ನಡೆಯುವ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಪ್ರಧಾನಿ ನರೇಂದ್ರ ಮೋದಿ ಬಹು ನಿರೀಕ್ಷಿತ ನಗರ ಭೇಟಿಗೆ ದಿನಗಣನೆ ಆರಂಭವಾಗಿದೆ.

ಜೂ.20 ರಂದು ಮೈಸೂರಿಗೆ ಆಗಮಿಸುವ ಪ್ರಧಾನಿ ಮೋದಿ, ಮಹಾತ್ಮಗಾಂಧಿ ರಸ್ತೆಯಲ್ಲಿರುವ ಹೋಟೆಲ್ ರ್‍ಯಾಡಿಸನ್ ಬ್ಲೂ ಪ್ಲಾಜಾನಲ್ಲಿ ವಾಸ್ತವ್ಯ ಹೂಡಲಿದ್ದಾರೆ. ಹಾಗಾಗಿ ಹೋಟೆಲ್ ಸುತ್ತಮುತ್ತ ಹಾಗೂ ಅರಮನೆಯ ಸುತ್ತಮುತ್ತಲಿನ ರಸ್ತೆಗಳು, ಅವರು ಪ್ರಯಾಣಿಸುವ ಮಾರ್ಗಗಳನ್ನು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಬುಧವಾರ ಪರಿಶೀಲಿಸಿದರು.

ಮೈಸೂರು–ಕೊಡಗು ಸಂಸದ ಪ್ರತಾಪ್‌ಸಿಂಹ, ಕೃಷ್ಣರಾಜ ಕ್ಷೇತ್ರದ ಶಾಸಕ ಎಸ್.ಎ.ರಾಮದಾಸ್, ಚಾಮರಾಜ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ, ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ ಇನ್ನಿತರರೊಂದಿಗೆ ಹೋಟೆಲ್ ಮತ್ತು ಮೋದಿ ಸಂಚರಿಸುವ ಮಾರ್ಗಗಳ ಪರಿಶೀಲನೆ ನಡೆಸಿದರು.

ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿ ಅವರು ಉಳಿದುಕೊಳ್ಳುವ ಹಾಗೂ ಅವರು ಸಂಚರಿಸುವ ಮಾರ್ಗಗಳ ದುರಸ್ತಿ ಮತ್ತು ಡಾಂಬರೀಕರಣ ಕಾರ್ಯ ಭರದಿಂದ ನಡೆದಿದ್ದು, ಅಂತಿಮ ಹಂತದಲ್ಲಿದೆ. ಪ್ರಧಾನಿ ಮತ್ತು ಅವರ ಬೆಂಗಾವಲು ಪಡೆಗಳು ಸಂಚರಿಸುವ 15 ಕಿ.ಮೀ ವ್ಯಾಪ್ತಿಯ ರಸ್ತೆಗಳನ್ನು ವೀಕ್ಷಿಸಿದ್ದೇವೆ. ರಸ್ತೆ ದುರಸ್ತಿ, ಡಾಂಬರೀಕರಣ ಮತ್ತು ರಸ್ತೆಗಳಿಗೆ ಬಿಳಿ ಗುರುತು ಹಾಕುವ ಕಾರ್ಯ ತ್ವರಿತ ಗತಿಯಿಂದ ನಡೆಯುತ್ತಿದೆ. ಇದರ ಸಂಬಂಧಿತ ಸಿವಿಲ್ ಕಾಮಗಾರಿಗಳ ಎಲ್ಲಾ ಕೆಲಸಗಳು, ಹೆಚ್ಚುವರಿ ಬೀದಿದೀಪಗಳ ಅಳವಡಿಕೆ, ಪಾದಚಾರಿ ಮಾರ್ಗಗಳ ಸ್ವಚ್ಛತಾ ಕಾರ್ಯ ಸದ್ಯದಲ್ಲೇ ಪೂರ್ಣಗೊಳಿಸಲಾಗುವುದು ಎಂದರು.



ಪ್ರಧಾನಿ ಭೇಟಿಗಾಗಿ ರಸ್ತೆ ದುರಸ್ತಿ ಕಾಮಗಾರಿಗಳನ್ನು ಕೈಗೊಳ್ಳಲು ಮೈಸೂರು ನಗರಪಾಲಿಕೆ 15 ಕೋಟಿ ಅಂದಾಜು ವೆಚ್ಚದ ಪ್ರಸ್ತಾಪ ಕಳುಹಿಸಿತ್ತು. ಸರ್ಕಾರ ಈವರೆಗೆ 10 ಕೋಟಿ ಬಿಡುಗಡೆ ಮಾಡಿದ್ದು, ಉಳಿದ ಹಣವನ್ನು ಶೀಘ್ರದಲ್ಲೇ ಬಿಡುಗಡೆ ಮಾಡಲಾಗುವುದು. ಜೂ.20 ರಂದು ನಗರಕ್ಕೆ ಭೇಟಿ ನೀಡುವ ಪ್ರಧಾನಿ ಅವರು ಸಂಚರಿಸುವ ರಸ್ತೆಗಳಲ್ಲಿ ದಸರಾ ಮಾದರಿಯಲ್ಲಿ ವಿದ್ಯುತ್ ದೀಪಗಳಿಂದ ಅಲಂಕರಿಸಲು ಸೆಸ್ಕ್ ಅಧಿಕಾರಿಗಳಿಗೆ ಸೂಚಿಸಲಾಗಿದೆ. ವಾಹನ ನಿಲುಗಡೆ ವ್ಯವಸ್ಥೆಗೆ ಸಂಬಂಧಿಸಿದಂತೆ, ಹಿರಿಯ ಪೊಲೀಸ್ ಅಧಿಕಾರಿಗಳು ಪಾರ್ಕಿಂಗ್ ಸ್ಥಳಗಳನ್ನು ಗುರುತಿಸಲಿದ್ದಾರೆ ಎಂದರು.

ಜೂ.20ರಂದು ನಗರದಲ್ಲಿ ಪ್ರಧಾನಮಂತ್ರಿಯವರು ಕೇಂದ್ರ ಸರ್ಕಾರದ 3 ವರ್ಷಗಳ ಯೋಜನೆಗಳು ಮತ್ತು ಆ ಕುರಿತು ಫಲಾನುಭವಿಗಳೊಂದಿಗೆ ಸಂವಾದ ನಡೆಸಲಿದ್ದಾರೆ ಎಂದು ತಿಳಿಸಿದ ಸೋಮಶೇಖರ್, ಈ ಕಾರ್ಯಕ್ರಮದಲ್ಲಿ ಸುಮಾರು 60,000 ಫಲಾನುಭವಿಗಳು ಭಾಗವಹಿಸುವ ನಿರೀಕ್ಷೆಯಿದೆ. ಪ್ರಧಾನ ಮಂತ್ರಿಯವರು ಸಂವಾದ ನಡೆಸುವ ಮಹಾರಾಜ ಕಾಲೇಜು ಮೈದಾನದಲ್ಲಿ 30,000 ಮಂದಿಗೆ ಅವಕಾಶ ಕಲ್ಪಿಸಿದರೆ, ಉಳಿದ 30,000 ಫಲಾನುಭವಿಗಳಲ್ಲಿ ತಲಾ 15 ಸಾವಿರದಂತೆ ಎರಡು ಕಡೆ ಕಾರ್ಯಕ್ರಮ ವೀಕ್ಷಿಸಲು ವ್ಯವಸ್ಥೆ ಕಲ್ಪಿಸಲಾಗುವುದು. ಅದನ್ನು ಶೀಘ್ರದಲ್ಲೇ ನಿರ್ಧರಿಸಲಾಗುವುದು ಎಂದು ಹೇಳಿದರು.

ಪ್ರಧಾನಿ ಭೇಟಿ ಸಂದರ್ಭದಲ್ಲಿ ಎಂಜಿ ರಸ್ತೆಯ ತರಕಾರಿ ಮಾರುಕಟ್ಟೆಯನ್ನು ತಾತ್ಕಾಲಿಕವಾಗಿ ಬೇರೆಡೆಗೆ ಸ್ಥಳಾಂತರಿಸಲಾಗುತ್ತದೆಯೇ ಎಂಬ ಪ್ರಶ್ನೆಗೆ ಉತ್ತರಿಸಿದ ಸೋಮಶೇಖರ್, ಈ ಸಮಸ್ಯೆಯನ್ನು ಪಾಲಿಕೆ ಮತ್ತು ನಗರ ಪೊಲೀಸ್ ಅಧಿಕಾರಿಗಳು ಜಂಟಿಯಾಗಿ ಶೀಘ್ರದಲ್ಲೇ ನಿರ್ಧರಿಸಲಿದ್ದಾರೆ ಎಂದರು.

ಅರಮನೆ ಆವರಣದಲ್ಲಿನ ಯೋಗ ಕಾರ್ಯಕ್ರಮದ ವೇದಿಕೆಯಲ್ಲಿ ರಾಜವಂಶಸ್ಥರಿಗೆ ಸ್ಥಳವಿಲ್ಲ ಎಂಬ ವರದಿಗಳ ಬಗ್ಗೆ ಪ್ರತಿಕ್ರಿಯಿಸಿ, ಈ ಬಗ್ಗೆ ತಿಳಿದಿಲ್ಲ. ಕೇಂದ್ರ ಸರ್ಕಾರದ ಶಿಷ್ಟಾಚಾರದ ಪ್ರಕಾರ ವೇದಿಕೆಯ ಮೇಲೆ ಯಾರ್‍ಯಾರು ಇರುತ್ತಾರೆಂಬುದನ್ನು ನಿರ್ಧರಿಸಲ್ಪಡುತ್ತದೆ. ಪ್ರಧಾನ ಮಂತ್ರಿಯ ಎಸ್‌ಪಿಜಿ (ವಿಶೇಷ ರಕ್ಷಣಾ ತಂಡ) ಅಂತಿಮವಾಗಿ ನಿರ್ಧರಿಸುತ್ತದೆ ಎಂದರು. ಪ್ರಧಾನಿ ಭೇಟಿ ನೀಡುವ ಸಂದರ್ಭದಲ್ಲಿ ಚಾಮುಂಡಿಬೆಟ್ಟದ ದೇವಸ್ಥಾನ ಮತ್ತು ಸುತ್ತೂರು ಮಠಕ್ಕೆ ಭೇಟಿ ನೀಡುತ್ತಾರೆಯೇ ಎಂಬ ವರದಿಗಳ ಕುರಿತು ಮತ್ತೊಂದು ಪ್ರಶ್ನೆಗೆ ಉತ್ತರಿಸಿದ ಸೋಮಶೇಖರ್, ರಾಜ್ಯ ಸರ್ಕಾರ ಈ ಬಗ್ಗೆ ಪ್ರಧಾನಿಗೆ ಮನವಿ ಮಾಡಿದೆ ಎಂದರು. ಸಂಸದ ಪ್ರತಾಪ್ ಸಿಂಹ, ಶಾಸಕರಾದ ಎಸ್.ಎ.ರಾಮದಾಸ್, ಎಲ್.ನಾಗೇಂದ್ರ ಪ್ರಭಾರ ಮೇಯರ್ ಸುನಂದಾ ಪಾಲನೇತ್ರ, ಮೈಲ್ಯಾಕ್ ಅಧ್ಯಕ್ಷ ಎನ್.ವಿ.ಫಣೀಶ್, ಮುಡಾ ಅಧ್ಯಕ್ಷ ಎಚ್.ವಿ.ರಾಜೀವ್ ಇನ್ನಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.



ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ. ದೇವೇಗೌಡರು ವಿಜಯನಗರ 4ನೇ ಹಂತ, ಬೆಳವಾಡಿಯಲ್ಲಿ ಅಗತ್ಯವಿರುವ ಅಭಿವೃದ್ಧಿ ಕಾಮಗಾರಿಗಳ ಪರಿಶೀಲನೆ ನಡೆಸಿದರು. ಈ ಸಂದರ್ಭದಲ್ಲಿ ಎಂಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ, ಜಿ.ಪಂ. ಮಾಜಿ ಸದಸ್ಯ ಲಾರಿಸ್ವಾಮಿ, ಮುಖಂಡರಾದ ಬೆಳವಾಡಿ ಶಿವಮೂರ್ತಿ, ಶಿವಕುಮಾರ್, ಬೋರಪ್ಪ, ಮೊಬೈಲ್ ರಮೇಶ್, ರಾಮಚಂದ್ರ, ಹೆಚ್.ಸಿ. ರಾಜು, ಹನುಮೇಶ್, ಮುಡಾ ಅಧಿಕಾರಿಗಳು, ಗುತ್ತಿಗೆದಾರರು ಹಾಜರಿದ್ದರು.

ಜೂ.19ರಂದು ಡಾ.ಚಂದ್ರಶೇಖರಯ್ಯ, ಡಾ.ಹೆಚ್.ಎಸ್.ರುದ್ರೇಶ್ ಕೃತಿಗಳ ಬಿಡುಗಡೆ

ಮೈಸೂರು, ಜೂ. 15– ಮೈಸೂರಿನ ಸಂವಹನ ಮತ್ತು ಉಷಾ ಸಾಹಿತ್ಯ ಮಾಲೆ ಸಂಯುಕ್ತಾಶ್ರಯದಲ್ಲಿ ಜೆಎಸ್‌ಎಸ್ ಮಹಾ ವಿದ್ಯಾಪೀಠದ ವಿಶ್ರಾಂತ ಪ್ರಾಂಶುಪಾಲ ಡಾ.ಚಂದ್ರಶೇಖರಯ್ಯ ಅವರ ತರಳಬಾಳು ಜಗದ್ಗುರು ಶ್ರೀ ಶಿವಕುಮಾರ ಮಹಾಸ್ವಾಮಿಗಳ ಜೀವನ ಚಿತ್ರ ‘ಧೀರ ಸನ್ಯಾಸಿ’ ಹಾಗೂ ಹಾಸನದ ನಿವೃತ್ತ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಹೆಚ್.ಎಸ್.ರುದ್ರೇಶ್ ಅವರ ಊರ್ಮಿಳೆ ನಾಟಕ ‘ತಪಸ್ವಿನಿ’, ಕಥಾಸಂಕಲನ ‘ಕಣ್ಣಾ ಮುಚ್ಚೆ ಕಾಡೇಗೂಡೆ’, ಕವನ ಸಂಕಲನ ‘ಭಾವ ಬಿಂಬ’ ಲೋಕಾರ್ಪಣೆ ಸಮಾರಂಭವನ್ನು ಜೂನ್ 19 (ಭಾನುವಾರ) ಬೆಳಗ್ಗೆ 10.30ಕ್ಕೆ ಮೈಸೂರು ಸರಸ್ವತಿಪುರಂ ರಾಮಾಕ್ಷಿ ಆಸ್ಪತ್ರೆ ರಸ್ತೆಯ ರೋಟರಿ ಮೈಸೂರು ವೆಸ್ಟ್ ಚಾರಿಟಬಲ್ ಟ್ರಸ್ಟ್‌ನಲ್ಲಿ ಏರ್ಪಡಿಸಲಾಗಿದೆ.

ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್ (ಸಿಪಿಕೆ) ಅಧ್ಯಕ್ಷತೆ ವಹಿಸಲಿದ್ದು, ವಿಶ್ರಾಂತ ಪ್ರಾಂಶುಪಾಲ ಪ್ರೊ ಕೃಷ್ಣೇಗೌಡ ಧೀರ ಸನ್ಯಾಸಿ, ಜೆಎಸ್‌ಎಸ್ ಪ್ರಕಟಣಾ ವಿಭಾಗದ ನಿರ್ದೇಶಕ ಪ್ರೊ.ಮೊರಬದ ಮಲ್ಲಿಕಾರ್ಜುನ ಅವರು ಡಾ.ಹೆಚ್.ಎಸ್.ರುದ್ರೇಶ್ ಅವರ ಕೃತಿಗಳ ಲೋಕಾರ್ಪಣೆ ಮಾಡುವರು. ತಪಸ್ವಿನಿ ಕುರಿತು ಹಿರಿಯ ರಂಗಕರ್ಮಿ ನಾ.ನಾಗಚಂದ್ರ, ಕಣ್ಣಾಮುಚ್ಚೆ ಕಾಡೇಗೂಡೆ ಹಾಗೂ ಭಾವ ಬಿಂಬ ಕುರಿತು ಉಪನ್ಯಾಸಕ ಡಾ. ಮಹೇಂದ್ರಮೂರ್ತಿ ದೇವನೂರು ಮಾತನಾಡಲಿದ್ದಾರೆ. ಕಾರ್ಯಕ್ರಮದಲ್ಲಿ ಸಂವಹನ ಪ್ರಕಾಶಕರಾದ ಡಿ.ಎನ್.ಲೋಕಪ್ಪ, ಲೇಖಕ ಡಾ.ಹೆಚ್.ಎಸ್.ರುದ್ರೇಶ್ ಉಪಸ್ಥಿತರಿರುವರು.

ಜೂ.18ರಿಂದ ಅಭಿವೃದ್ಧಿ ಕಾಮಗಾರಿಗಳ ವೀಕ್ಷಣೆ

ಮೈಸೂರು, ಜೂ.15– ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಯೋಜನಾ ವಿಭಾಗದ ವತಿಯಿಂದ ಜೂ.18ರಿಂದ 22ರವರೆಗೆ ಮೈಸೂರು ಜಿಲ್ಲೆಯ ಕೆ.ಆರ್.ನಗರ, ಹೆಚ್.ಡಿ.ಕೋಟೆ, ಹುಣಸೂರು, ಪಿರಿಯಾಪಟ್ಟಣ, ನಂಜನಗೂಡು, ಮೈಸೂರು ಮತ್ತು ಟಿ.ನರಸೀಪುರ ತಾಲೂಕುಗಳಲ್ಲಿ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯ–3ರ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ಪರಿವೀಕ್ಷಿಸಲು ರಾಷ್ಟ್ರೀಯ ಗುಣ ನಿಯಂತ್ರಣ ನಿರ್ವಾಹಕ ನೀರಾಜ್ ಗುಪ್ತ ಆಗಮಿಸುವರು ಎಂದು ಆರ್.ಡಿ.ಪಿ.ಆರ್ ಯೋಜನಾ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಂಗಾಯಣದಲ್ಲಿ ಗ್ರೀಷ್ಮ ರಂಗಾಯಣೋತ್ಸವ

ನಾಳೆ ಮನೆ ಮನೆ ಮಾದೇಗೌಡರಿಗೆ ಸನ್ಮಾನ

ಮೈಸೂರು, ಜೂ.15– ರಂಗಾಯಣದ ವತಿಯಿಂದ ಗ್ರೀಷ್ಮ ರಂಗಾಯಣೋತ್ಸವವನ್ನು ಜೂ.12ರಿಂದ 19ರವರೆಗೆ ಆಚರಿಸುತ್ತಿದ್ದು, ಸಂಜೆ 4 ಗಂಟೆಯಿಂದ 5ರವರೆಗೆ ವಿಷಯ ತಜ್ಞರನ್ನು ಆಹ್ವಾನಿಸಿ ಕಲಾವಿದರೊಂದಿಗೆ ಸಂವಾದ ನಡೆಸುವ ಕಾರ್ಯಕ್ರಮವೂ ಇರುತ್ತದೆ. ಪ್ರತಿದಿನ ಸಂಜೆ 6.30 ಗಂಟೆಗೆ ಭೂಮಿಗೀತ ರಂಗಮಂದಿರದಲ್ಲಿ ನಾಟಕಗಳ ಪ್ರದರ್ಶನವನ್ನು ಏರ್ಪಡಿಸಲಾಗಿದೆ.

ಮನೆ ಮನೆ ಮಾದೇಗೌಡರೆಂದೇ ಖ್ಯಾತಿ ಪಡೆದಿರುವ ಮಾದೇಗೌಡ ಅವರನ್ನು ಜೂ.17 ರಂದು ಸಂಜೆ 5 ಗಂಟೆಗೆ ಬಿ.ವಿ. ಕಾರಂತ ರಂಗಚಾವಡಿಯಲ್ಲಿ ಕಲಾವಿದರ ಸಮ್ಮುಖದಲ್ಲಿ ಗೌರವಿಸಲಾಗುವುದು ಹಾಗೂ ಅಂದು ಸಂಜೆ 6.30 ಗಂಟೆಗೆ ಸಂವಿಧಾನದ ಆಶಯವನ್ನೊಳಗೊಂಡ ಸೂತ್ರಧಾರ ನಾಟಕ ಪ್ರದರ್ಶನವು ನಡೆಯಲಿದೆ ಎಂದು ರಂಗಾಯಣದ ನಿರ್ದೇಶಕರಾದ ಅಡ್ಡಂಡ ಸಿ.ಕಾರ್ಯಪ್ಪ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಡಿಪ್ಲೊಮಾ ಕೋರ್ಸ್‌ಗಳಿಗೆ ಅರ್ಜಿ ಆಹ್ವಾನ

ಮೈಸೂರು,ಜೂ.15–ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದಲ್ಲಿ 2022–23ನೇ ಸಾಲಿನ ಡಿಪ್ಲೊಮಾ ಪ್ರವೇಶಕ್ಕೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದ್ದು, ವಿದ್ಯಾರ್ಹತೆ ಎಸ್‌ಎಸ್‌ಎಲ್‌ಸಿ ಪಾಸ್ ಆಗಿರಬೇಕು. ಸೀಮಿತ ಸಂಖ್ಯೆ ಸೀಟುಗಳು ಮಾತ್ರ ಲಭ್ಯವಿದ್ದು, ಮೊದಲು ಬಂದವರಿಗೆ ಆದ್ಯತೆ ನೀಡಲಾಗುವುದು. ಕೋರ್ಸ್ ವಿವರಗಳು: Diploma in Tool & Diemaking, precission Manufacturing ಅರ್ಜಿಗಳನ್ನು ಕೆ.ಆರ್.ಎಸ್. ರೋಡ್‌ನಲ್ಲಿರುವ ನಂ.93/94 ಬೆಳಗೊಳ ಕೈಗಾರಿಕಾ ಪ್ರದೇಶದ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗೆ ಸಹಾಯವಾಣಿ 155267. ಅಥವಾ ವೆಬ್‌ಸೈಟ್ www.gttc.karnata ka.gov.in ಅಥವಾ ಮೊ. 9980557205, 8660139259, 9141630315, 9880068986 ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.



ಮೈಸೂರಿನ ಚಾಮುಂಡಿ ಚಿಲ್ಡ್ರನ್ಸ್ ಹೋಂನಲ್ಲಿ ಸಮಾಜ ಸೇವಕಿ ಶ್ರೀಮತಿ ಶೀಲ ಇರಾನಿ ಅವರ 100ನೇ ವರ್ಷದ ಜಯಂತಿ ಆಚರಿಸಲಾಯಿತು. ಈ ವೇಳೆ ಮಕ್ಕಳಿಗೆ ಸ್ಕೂಲ್ ಬ್ಯಾಗ್, ಪುಸ್ತಕ, ಪಾದರಕ್ಷೆಗಳು, ಹೊಸ ಬಟ್ಟೆಗಳನ್ನು ವಿತರಿಸಲಾಯಿತು. ನಗರಪಾಲಿಕೆ ಸದಸ್ಯ ಎಸ್‌ಬಿಎಂ ಮಂಜು, ರಯಾನ್ ಇರಾನಿ, ಜ್ಯೋತ್ಸ್ನ ಇರಾನಿ, ಸುಸೇನ್ನ, ಲಯನ್ ನಂದಕುಮಾರ್, ರಘೋತ್ತಮರಾವ್, ಅಬ್ಬಾಸ್ ವಾಗ್, ಡಾ.ನಾರಾಯಣ್, ಶ್ರೀಶೈಲ ರಾಮಣ್ಣವರ್, ಶಿರಾಜ್ ಇಥಾನಿ ಇತರರು ಉಪಸ್ಥಿತರಿದ್ದರು.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಅಂತರರಾಷ್ಟ್ರೀಯ ಯೋಗ ದಿನೋತ್ಸವಕ್ಕೆ ದಿನಗಣನೆ

ಮೈಸೂರಲ್ಲಿ ಯೋಗ ಮ್ಯಾಟ್‌ಗಳಿಗೀಗ ಡಿಮ್ಯಾಂಡ್

●ರಾಜಕುಮಾರ್ ಭಾವಸಾರ್

ಮೈಸೂರು, ಜೂ.15– ಅಂತರರಾಷ್ಟ್ರೀಯ ಯೋಗ ದಿನೋತ್ಸವವಾದ ಜೂ.21ರಂದು ಮೈಸೂರಿನ ಅರಮನೆ ಆವರಣದಲ್ಲಿ ನಡೆಯುವ ಯೋಗ ಕಾರ್ಯಕ್ರಮದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಭಾಗವಹಿಸುತ್ತಿರುವುದರಿಂದ ಯೋಗ ಮಹತ್ವ ಪಡೆದುಕೊಂಡಿದೆ. ಇದರಿಂದ ಮೈಸೂರಲ್ಲಿ ಯೋಗ ಮ್ಯಾಟ್‌ಗಳಿಗೆ ಡಿಮ್ಯಾಂಡ್ ಹೆಚ್ಚಾಗಿದೆ. ಅಂದು ಸುಮಾರು 15 ಸಾವಿರ ಮಂದಿ ಯೋಗಪಟುಗಳು ಪ್ರಧಾನಿ ಸಮ್ಮುಖದಲ್ಲಿ ಯೋಗ ಪ್ರದರ್ಶಿಸಲು ಸಿದ್ಧತೆಗಳು ಭರದಿಂದ ಸಾಗಿದ್ದರೆ, ಇತ್ತ ಯೋಗ ಮ್ಯಾಟ್‌ಗಳನ್ನು ಖರೀದಿಸುವವರ ಸಂಖ್ಯೆಯೂ ಹೆಚ್ಚಾಗಿದೆ.

ಯೋಗ ದಿನೋತ್ಸವದಲ್ಲಿ ಪಾಲ್ಗೊಳ್ಳುವ ಉದ್ದೇಶದಿಂದ ವಿದ್ಯಾರ್ಥಿಗಳು, ಸಾರ್ವಜನಿಕರು, ವಿವಿಧ ಶಾಲಾ ಕಾಲೇಜು ವಿದ್ಯಾರ್ಥಿಗಳು, ಯೋಗ ಸಂಘಟನೆಗಳು, ಪೌರಕಾರ್ಮಿಕರು, ವಿಕಲಾಂಗರು, ಹೆಚ್‌ಐವಿ ಪಾಸಿಟಿವ್ ಮಕ್ಕಳು, ತೃತೀಯಲಿಂಗಿಗಳು ಇನ್ನಿತರರು ಆನ್‌ಲೈನ್ ಮೂಲಕ ತಮ್ಮ ಹೆಸರುಗಳನ್ನು ನೋಂದಾಯಿಸಿಕೊಂಡಿದ್ದಾರೆ.

ಅರಮನೆ ಆವರಣದಲ್ಲಿ ಸ್ಥಳಾವಕಾಶದ ಆಧಾರದಡಿ ಯೋಗಪಟುಗಳು ಎಷ್ಟು ಸಂಖ್ಯೆಯಲ್ಲಿ ಪಾಲ್ಗೊಳ್ಳುತ್ತಾರೆಂಬುದು ಇನ್ನೆರಡು ದಿನಗಳಲ್ಲಿ ಅಂತಿಮಗೊಳ್ಳಲಿದೆ. ಈ ನಡುವೆ ಯೋಗದಲ್ಲಿ ಪಾಲ್ಗೊಳ್ಳುವ ಉತ್ಸಾಹದಿಂದ ಸಾವಿರಾರು ಮಂದಿ ವಿದ್ಯಾರ್ಥಿಗಳು, ಸಾರ್ವಜನಿಕರು ಯೋಗ ಮ್ಯಾಟ್‌ಗಳ ಖರೀದಿಯಲ್ಲಿ ತೊಡಗಿದ್ದಾರೆ. ಹೀಗಾಗಿ ಮೈಸೂರಿನಲ್ಲಿ ಯೋಗ ಮ್ಯಾಟ್‌ಗಳಿಗೆ ಭಾರೀ ಬೇಡಿಕೆ ಕಂಡು ಬಂದಿದೆ.

ಪ್ರತಿದಿನ ಸುಮಾರು 300ಕ್ಕೂ ಹೆಚ್ಚು ಯೋಗ ಮ್ಯಾಟ್‌ಗಳು ಮೈಸೂರಿನ ರಿಲೈಯನ್ಸ್, ಮೆಗಾ ಮಾರ್ಟ್, ಸೂಪರ್ ಮಾರ್ಕೆಟ್‌ಗಳು ಹಾಗೂ ಶಿವರಾಂ ಪೇಟೆ, ಕುವೆಂಪುನಗರ ಸೇರಿದಂತೆ ವಿವಿಧ ಅಂಗಡಿಗಳಲ್ಲಿ ಭರ್ಜರಿ ಮಾರಾಟವಾಗುತ್ತಿವೆ. ಅಲ್ಲದೆ ಅನೇಕರು ಅಮೇಜಾನ್, ಫ್ಲಿಪ್‌ಕಾರ್ಟ್, ಮೀಷೋ, ಸ್ನ್ಯಾಪ್‌ಡೀಲ್ ಸೇರಿದಂತೆ ವಿವಿಧ ಆನ್‌ಲೈನ್ ಆ್ಯಪ್‌ಗಳ ಮೂಲಕವೂ ಯೋಗ ಮ್ಯಾಟ್‌ಗಳನ್ನು ಖರೀದಿಸುತ್ತಿದ್ದಾರೆ. ಮೈಸೂರಿನ ಕೊತ್ವಾಲ ರಾಮಯ್ಯ ರಸ್ತೆಯಲ್ಲಿರುವ ಹೋಲ್‌ಸೇಲ್ ಅಂಗಡಿಯೊಂದರಲ್ಲಿ ಯೋಗ ಮ್ಯಾಟ್‌ಗಳ ವ್ಯಾಪಾರ ಭರ್ಜರಿಯಾಗಿಯೇ ನಡೆಯುತ್ತಿದೆ. ಅಂಗಡಿಯ ಮಾಲೀಕ ಲಲಿತ್ ಕುಮಾರ್ ಜೈನ್ ಪ್ರಕಾರ, ಶಾಲೆಗಳಲ್ಲಿ ಯೋಗ ಕಡ್ಡಾಯ ಮಾಡಿದ್ದಾರೆ. ಜೊತೆಗೆ ನರೇಂದ್ರ ಮೋದಿ ಮೈಸೂರಿಗೆ ಬರುತ್ತಾರೆ ಎಂದು ಘೋಷಣೆಯಾಗುತ್ತಿದ್ದಂತೆ ಮ್ಯಾಟ್‌ಗಳಿಗೆ ಬೇಡಿಕೆ ಬಂದಿದೆ. ನಮ್ಮಲ್ಲಿ ಪ್ರತಿದಿನ 10ಕ್ಕೂ ಹೆಚ್ಚು ಮ್ಯಾಟ್‌ಗಳ ವ್ಯಾಪಾರ ಆಗುತ್ತಿದೆ. ಬಣ್ಣ ಬಣ್ಣದ ಮ್ಯಾಟ್‌ಗಳು ನಮ್ಮಲ್ಲಿವೆ. ಹೆಚ್ಚಾಗಿ ನೀಲಿ, ಕೇಸರಿ ಮತ್ತು ಹಸಿರು ಬಣ್ಣದ ಮ್ಯಾಟ್‌ಗಳಿಗೆ ಬೇಡಿಕೆ ಹೆಚ್ಚಾಗಿದೆ. ನಮ್ಮಲ್ಲಿ ಕನಿಷ್ಠ 4 ಎಂಎಂ ಮ್ಯಾಟ್‌ಗೆ 300 ರೂ., 6 ಎಂಎಂ ಮ್ಯಾಟ್‌ಗೆ ರೂ.400., 8 ಎಂಎಂ ಮ್ಯಾಟ್ ರೂ. 600ಕ್ಕೆ ಮಾರಾಟ ಮಾಡುತ್ತಿದ್ದೇವೆ. ಮ್ಯಾಟ್‌ಗಳು ಸಾಕಷ್ಟು ದಾಸ್ತಾನಿವೆ. ಕಳೆದ 15 ದಿನಗಳ ಅವಧಿಯಲ್ಲಿ ಸಾವಿರಕ್ಕೂ ಹೆಚ್ಚು ಯೋಗ ಮ್ಯಾಟ್‌ಗಳು ಮಾರಾಟವಾಗಿವೆ ಎಂದರು.





ಯಾವ ‘ಯೋಗ ಮ್ಯಾಟ್’ ಉತ್ತಮ?

ಯೋಗ ಮಾಡುವವರಿಗೆ ಸಾಮಾನ್ಯವಾಗಿ ಸ್ಟ್ಯಾಂಡರ್ಡ್ ಯೋಗ ಮ್ಯಾಟ್ ಅಗತ್ಯ. ಸರಾಸರಿ 24 ಇಂಚು ಅಗಲ, 68ರಿಂದ 72 ಇಂಚು ಉದ್ದ ಇರುತ್ತದೆ. ಇದು ಯೋಗ ಅಭ್ಯಾಸ ಮಾಡುವವರಿಗೆ ಹೆಚ್ಚು ಆರಾಮದಾಯಕ ಎನ್ನಲಾಗುತ್ತದೆ. ಯೋಗ ಮ್ಯಾಟ್‌ಗಳು 4 ಎಂಎಂ., 6 ಎಂ.ಎಂ, 8 ಎಂಎಂ ಹಾಗೂ 10 ಎಂಎಂ ದಪ್ಪದಲ್ಲಿ ಇರುತ್ತದೆ. 1 ಎಂಎಂ ಗಾತ್ರಕ್ಕೆ ಒಂದೊಂದು ಬೆಲೆ ನಿಗದಿಯಾಗಿರುತ್ತದೆ. ಕನಿಷ್ಠ 299ರಿಂದ 800 ರೂ. ಮ್ಯಾಟ್‌ಗಳನ್ನು ಸಾಮಾನ್ಯವಾಗಿ ಖರೀದಿಸಲಾಗುತ್ತದೆ. ಅಷ್ಟೇ 1 ಸಾವಿರದಿಂದ 2 ಸಾವಿರ ರೂ.ಗಳವರೆಗೆ ಇನ್ನೂ ಉತ್ತಮ ದರ್ಜೆಯ ಮ್ಯಾಟ್‌ಗಳು ಆನ್‌ಲೈನ್‌ನಲ್ಲಿ ದೊರೆಯುತ್ತವೆ.

ಸಾಮಾನ್ಯವಾಗಿ ಯೋಗ ಮ್ಯಾಟ್‌ಗಳನ್ನು ಪಿವಿಸಿ ರಬ್ಬರ್‌ನಿಂದ ತಯಾರಿಸಲಾಗಿರುತ್ತದೆ. ಯೋಗಾಸನ ಮತ್ತು ವ್ಯಾಯಾಮ ಮಾಡುವವರು ಜಾರಿ ಬೀಳದಂತೆ ಇದು ನೆಲವನ್ನು ಹಿಡಿದಿಟ್ಟುಕೊಳ್ಳುತ್ತದೆ. ಅಲ್ಲದೆ ನೀರು ಬಿದ್ದರೂ ಜಾರದಂತೆ ಮಾಡಲಾಗಿರುತ್ತದೆ ಎಂದು ಯೋಗ ಮ್ಯಾಟ್ ತಯಾರಕರು ಹೇಳುತ್ತಾರೆ.

ಜಮಖಾನಾದಿಂದ ಪಿವಿಸಿ ಯೋಗ ಮ್ಯಾಟ್‌ವರೆಗೆ....

ಪ್ರಾರಂಭದಲ್ಲಿ ಜಮಖಾನಾ, ಬೆಡ್‌ಶೀಟ್, ಟವೆಲ್ ಇತ್ಯಾದಿ ಹಾಸಿಕೊಂಡು ಯೋಗ ಮಾಡುತ್ತಿದ್ದ ಕಾಲ ಇತ್ತು. ತಾವು ಯೋಗ ಕಲಿಯಲು ಚೆನ್ನೈಗೆ ಹೋಗಿದ್ದಾಗ ಅಲ್ಲಿ ಹುಲ್ಲಿನ ಮ್ಯಾಟ್ ನೀಡುತ್ತಿದ್ದರು. ಕ್ರಮೇಣ ಪಿವಿಸಿ ಮ್ಯಾಟ್‌ಗಳು ಬರಲಾರಂಭಿಸಿತು. ಇಂದು ಬಹುತೇಕ ಎಲ್ಲೆಡೆ ಪಿವಿಸಿ ಯೋಗ ಮ್ಯಾಟ್‌ಗಳೇ ಬಳಕೆಗೆ ಬಂದಿವೆ ಎನ್ನುತ್ತಾರೆ ಮೈಸೂರು ಯೋಗ ಒಕ್ಕೂಟದ ಅಧ್ಯಕ್ಷ ಡಾ.ಬಿ.ಪಿ.ಮೂರ್ತಿ.



ಮೈಸೂರಿನ ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ಮೋರ್ ಹೈಪರ್ ಮೆಗಾ ಸ್ಟೋರ್‌ನಲ್ಲಿಯೂ ಯೋಗ ಮ್ಯಾಟ್‌ಗಳ ವ್ಯಾಪಾರ ಚೆನ್ನಾಗಿ ನಡೆದಿದೆ. ಪ್ರತಿದಿನ 7–8 ಮ್ಯಾಟ್‌ಗಳ ಮಾರಾಟ ಆಗುತ್ತಿದೆ. ನಮ್ಮಲ್ಲಿ ಯಾವಾಗಲೂ ದಾಸ್ತಾನು ಇರುತ್ತದೆ. ಹೀಗಾಗಿ ಮ್ಯಾಟ್ ಕೇಳಿದವರಿಗೆ ಇಲ್ಲ ಎಂದು ವಾಪಸ್ ಕಳಿಸುವುದಿಲ್ಲ ಎಂದು ಮೋರ್ ಮೆಗಾ ಸ್ಟೋರ್‌ನ ವ್ಯವಸ್ಥಾಪಕ ಶ್ರೀಧರ್ ‘ಮೈಸೂರು ಮಿತ್ರ’ನಿಗೆ ತಿಳಿಸಿದರು.

ವಿಪಕ್ಷ ನಾಯಕ ಸಿದ್ದರಾಮಯ್ಯ, ಕುರುಬ ಸಮಾಜದ ಬಗ್ಗೆ ಅವಹೇಳನಕಾರಿ ಹೇಳಿಕೆ ಆರೋಪ

ಜೆಡಿಎಸ್ ಕಾರ್ಯಕರ್ತ ಶ್ರೀನಿವಾಸ್‌ಕಾಮತ್ ವಿರುದ್ಧ ದೂರು



ತಿ.ನರಸೀಪುರ, ಜೂ.15(ಎಸ್‌ಕೆ)– ವಿಪಕ್ಷ ನಾಯಕ ಸಿದ್ದರಾಮಯ್ಯ ಹಾಗೂ ಕುರುಬ ಸಮಾಜದ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿರುವ ಜೆಡಿಎಸ್ ಕಾರ್ಯಕರ್ತ ಶ್ರೀನಿವಾಸ್ ಕಾಮತ್‌ರನ್ನು ಕೂಡಲೇ ಬಂಧಿಸಿ, ರಾಜ್ಯದಿಂದ ಗಡಿಪಾರು ಮಾಡಬೇಕೆಂದು ಆಗ್ರಹಿಸಿ ತಾಲೂಕು ಕುರುಬರ ಸಂಘ ಹಾಗೂ ಸಿದ್ದರಾಮಯ್ಯ ಅಭಿಮಾನಿ ಬಳಗದಿಂದ ತಿ.ನರಸೀಪುರ ಪಟ್ಟಣ ಠಾಣೆಯಲ್ಲಿ ದೂರು ನೀಡಲಾಯಿತು.

ತಾಲೂಕು ಕುರುಬರ ಸಂಘದ ಕಚೇರಿಯಲ್ಲಿ ಸಮುದಾಯದ ಮುಖಂಡರು ಸಭೆ ನಡೆಸಿ, ಬಳಿಕ ಪಟ್ಟಣದ ಪೊಲೀಸ್ ಠಾಣೆಗೆ ತೆರಳಿ ಶ್ರೀನಿವಾಸ್ ಕಾಮತ್ ವಿರುದ್ಧ ದೂರು ನೀಡಿದರು.

ತಾಲೂಕು ಕುರುಬರ ಸಂಘದ ಅಧ್ಯಕ್ಷ ಟಿ.ಎಂ. ನಂಜುಂಡಸ್ವಾಮಿ ಮಾತನಾಡಿ, ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಜೆಡಿಎಸ್ ಪಕ್ಷ ಸಮಾವೇಶದಲ್ಲಿ ಪಾಲ್ಗೊಂಡಿದ್ದ ಶ್ರೀನಿವಾಸ್‌ಕಾಮತ್ ವಿಪಕ್ಷ ನಾಯಕ ಸಿದ್ದರಾಮಯ್ಯ ಹಾಗೂ ಕುರುಬ ಸಮಾಜದ ಬಗ್ಗೆ ಹಗುರವಾಗಿ ಮಾತನಾಡುವ ಮೂಲಕ ಜನಾಂಗಕ್ಕೆ ಅಪಮಾನ ಮಾಡಿದ್ದಾರೆ. ಹಾಗಾಗಿ, ಈತನನ್ನು ಬಂಧಿಸಿ ಕಾನೂನು ರೀತಿಯಲ್ಲಿ ಕ್ರಮ ಕೈಗೊಂಡು, ಗಡಿಪಾರು ಮಾಡಬೇಕು ಎಂದು ಒತ್ತಾಯಿಸಿದರು.

ಸಿದ್ದರಾಮಯ್ಯ ಅಭಿಮಾನಿ ಬಳಗದ ಸಂತೃಪ್ತಿ ಕುಮಾರ್ ಮಾತನಾಡಿ, ಬೆಂಗಳೂರಿನ ಮಲ್ಲೇಶ್ವರಂನಲ್ಲಿರುವ ಜಾತ್ಯತೀತ ಜನತಾದಳದ ಕೇಂದ್ರ ಕಚೇರಿ ಜೆಪಿ ಭವನದಲ್ಲಿ ನಡೆದ ಪ್ರತಿಭಟನಾ ಸಭೆಯಲ್ಲಿ ಪಕ್ಷದ ಕಾರ್ಯಕರ್ತ ಶ್ರೀನಿವಾಸ್‌ಕಾಮತ್ ಮಾತನಾಡುವಾಗ ಸಿದ್ದರಾಮಯ್ಯ ಅವರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ. ಅಲ್ಲದೇ ಕುರುಬ ಜನಾಂಗದ ಬಗ್ಗೆ ಹಗುರವಾಗಿ ಮಾತನಾಡಿ ರುವ ಈತನನ್ನು ಗೂಂಡಾ ಕಾಯ್ದೆಯಡಿ ಬಂಧಿಸಿ, ಗಡಿಪಾರು ಮಾಡದಿದ್ದರೆ, ರಾಜ್ಯಾದ್ಯಂತ ಉಗ್ರ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ಬಳಿಕ ವೃತ್ತ ನಿರೀಕ್ಷಕ ಕೃಷ್ಣಪ್ಪ, ಹಾಗೂ ಸಬ್‌ಇನ್ಸ್‌ಪೆಕ್ಟರ್ ತಿರುಮಲ್ಲೇಶ್ ಅವರಿಗೆ ದೂರು ನೀಡಿದರು. ಈ ವೇಳೆ ತಾಲೂಕು ಕುರುಬರ ಸಂಘದ ಕಾರ್ಯದರ್ಶಿ ಕೊತ್ತೆಗಾಲ ಬಸವರಾಜು, ಕಾರ್ಯಾಧ್ಯಕ್ಷ ಮಾದೇಶ್, ಉಪಾಧ್ಯಕ್ಷ ವೆಂಕಟೇಶ್, ನಿರ್ದೇಶಕರಾದ ಮುನ್ನೆಹುಂಡಿ ಮಹೇಶ್, ಅಶ್ವಿನ್‌ಕುಮಾರ್, ಕ್ರೇಜಿ ಸುರೇಶ್, ಚೌಹಳ್ಳಿ ಮಲ್ಲೇಶ್, ಲಿಂಗರಾಜು, ತಾಪಂ ಮಾಜಿ ಸದಸ್ಯ ರಮೇಶ್, ಎಂ.ಕೆ.ಸಹದೇವ, ಮಹೇಶ್, ಗೋಪಿ, ಭರತ್, ಗರ್ಗೇಶ್ವರಿ ಗೋಪಾಲ್, ಮೂಗೂರು ಹರೀಶ್, ರವಿ, ವಿಷಕಂಠಮೂರ್ತಿ, ಸ್ವಾಮಿ, ಕಾರ್ತಿಕ್, ಮುದ್ದು, ಬೀರನಹುಂಡಿ ಲಿಂಗರಾಜು, ರವಿ, ಸೋಮಣ್ಣ ಸಂತೋಷ ಮತ್ತಿತರರು ಉಪಸ್ಥಿತರಿದ್ದರು.



ಹುಣಸೂರು ತಾಲೂಕು ಬಿಳಿಕೆರೆ ಹೋಬಳಿಯ ಗೆರಸನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ಸಂಘದ ಅಧ್ಯಕ್ಷ ಎಸ್.ರಾಮಚಂದ್ರ ಉದ್ಘಾಟಿಸಿದರು. ಈ ವೇಳೆ ಉಪಾಧ್ಯಕ್ಷ ಹೆಚ್.ಎಸ್.ಕುಳ್ಳೇಗೌಡ, ನಿರ್ದೇಶಕರಾದ ರೇವಣ್ಣ, ಜವರಮ್ಮ, ನಾಗೇಶ್, ಪಿ.ಪುಟ್ಟಸ್ವಾಮಿ, ರೇವಣ್ಣ, ಮಲ್ಲೇಶ್, ಹೆಚ್.ಆರ್.ಕೃಷ್ಣಶೆಟ್ಟಿ, ತಾಯಮ್ಮ, ವೆಂಕಟೇಶ್, ಸಣ್ಣಯ್ಯ, ಕಾರ್ಯದರ್ಶಿ ಎಸ್.ಸ್ವಾಮಿ, ನಾಗರಾಜೇಗೌಡ ಇದ್ದರು.

ಸಾಲಬಾಧೆ: ವಿಷ ಸೇವಿಸಿ ರೈತ ಆತ್ಮಹತ್ಯೆ



ನಂಜನಗೂಡು, ಜೂ.15(ಸುದರ್ಶನ್)– ಸಾಲಬಾಧೆ ತಾಳಲಾರದೆ ಯುವ ರೈತನೊಬ್ಬ ಕ್ರಿಮಿನಾಶಕ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕಿನ ಜಿ.ಮರಳ್ಳಿ ಗ್ರಾಮದಲ್ಲಿ ನಡೆದಿದೆ. ಗ್ರಾಮದ ಪರಮೇಶ್(28) ಆತ್ಮಹತ್ಯೆ ಮಾಡಿಕೊಂಡ ರೈತ. ಈತ ಸ್ಥಳೀಯ ಬ್ಯಾಂಕಿನಿಂದ 3 ಲಕ್ಷ ಹಾಗೂ 1.5 ಲಕ್ಷ ಕೈ ಸಾಲ ಮಾಡಿದ್ದರು. ಜೊತೆ, ಅವರ ಜಮೀನಿನಲ್ಲಿ ಬೆಳೆದಿದ್ದ ಅರಿಶಿನ ಬೆಳೆಗೆ ಸರಿಯಾದ ಬೆಂಬಲ ಬೆಲೆ ಸಿಗದೆ ನಷ್ಟ ಅನುಭವಿಸಿದರು. ಇದರಿಂದ ಸಾಲ ತೀರಿಸಲಾಗದೆ ಮನನೊಂದು ತಮ್ಮ ಜಮೀನಿನಲ್ಲಿಯೇ ಕ್ರಿಮಿನಾಶಕ ಸೇವಿಸಿ ಅಸ್ವಸ್ಥಗೊಂಡಿದ್ದಾರೆ. ಕೂಡಲೇ ಅವರನ್ನು ಸ್ಥಳೀಯರು ಹಾಗೂ ಕುಟುಂಬದವರು ಟಿ.ನರಸೀಪುರ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ, ಬಳಿಕ ಮೈಸೂರಿನ ಆಸ್ಪತ್ರೆಗೆ ದಾಖಲಿಸಿದರು. ಆದರೆ, ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಈ ಸಂಬಂಧ ತಾಲೂಕಿನ ಬಿಳಿಗೆರೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಶಾಸಕ ಹೆಚ್.ಪಿ.ಮಂಜುನಾಥ್ ಅವರ 55ನೇ ಹುಟ್ಟುಹಬ್ಬದ ಹಿನ್ನೆಲೆ

ಇಂದು ಉದ್ಯೋಗ ಮೇಳ, ಆರೋಗ್ಯ ಶಿಬಿರ



ಹುಣಸೂರು, ಜೂ.15(ಕೆಕೆ)– ಶಾಸಕ ಹೆಚ್.ಪಿ.ಮಂಜುನಾಥ್ ಅವರ 55ನೇ ಹುಟ್ಟುಹಬ್ಬದ ಅಂಗವಾಗಿ ಜೂ. 16 ರಂದು ಪಟ್ಟಣದಲ್ಲಿ ಬೃಹತ್ ಉದ್ಯೋಗ ಮೇಳ ಮತ್ತು ಉಚಿತ ಆರೋಗ್ಯ ತಪಾಸಣೆ ಶಿಬಿರ ಆಯೋಜಿಸಲಾಗಿದೆ ಎಂದು ಸ್ನೇಹಜೀವಿ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಅಧ್ಯಕ್ಷ ಆನಂದ್ ತಿಳಿಸಿದರು.

ನಗರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶ್ರೀಶಿರಡಿ ಸಾಯಿ ಬಾಬಾ ಚಾರಿಟಬಲ್ ಟ್ರಸ್ಟ್, ಸ್ನೇಹಜೀವಿ ಗ್ರಾಮೀಣಾಭಿವೃದ್ಧಿ ಸಂಸ್ಥೆ ಸಹಯೋಗದಲ್ಲಿ ಎಲ್ಲಾ ಕಾರ್ಯಕ್ರಮಗಳು ನಗರಸಭಾ ಮೈದಾನದಲ್ಲಿ ನಡೆಯಲಿದೆ. ಉದ್ಯೋಗ ಮೇಳವು ಬೆಳಗ್ಗೆ 10ರಿಂದ ಮಧ್ಯಾಹ್ನ 2ರವರೆಗೆ ನಡೆಯಲಿದೆ. ಇದಕ್ಕೂ ಮೊದಲು ಬೆಳಗ್ಗೆ 9ರಿಂದ 10ರವರೆಗೆ ಮೇಳದಲ್ಲಿ ಪಾಲ್ಗೊಳ್ಳುವ ಉದ್ಯೋಗ ಆಕಾಂಕ್ಷಿಗಳಿಗೆ ತರಬೇತಿ ನೀಡಲಾಗುತ್ತದೆ ಎಂದರು.

ಮೇಳದಲ್ಲಿ 30ಕ್ಕೂ ಹೆಚ್ಚು ಕಂಪನಿಗಳು ಭಾಗವಹಿಸಲಿವೆ. ಆಯ್ಕೆಯಾದವರಿಗೆ ಸ್ಥಳದಲ್ಲಿಯೇ ನೇಮಕಾತಿ ಪತ್ರ ನೀಡಲಾಗುವುದು. ಮೇಳದಲ್ಲಿ ಶಾಲೆ ತೊರೆದವರು, ಎಸ್‌ಎಸ್‌ಎಲ್‌ಸಿ, ಪಿಯುಸಿ, ಪದವಿ, ಹಾಗೂ ಸ್ನಾತಕೋತ್ತರ ಪದವೀಧರರು ಪಾಲ್ಗೊಳ್ಳಬಹುದಾಗಿದ್ದು, ಆಸಕ್ತರು ತಮ್ಮ ಸ್ವ ವಿವರವುಳ್ಳ ದಾಖಲೆಗಳೊಂದಿಗೆ ಬಂದು ಮೇಳದ ಸದ್ಬಳಕೆ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ಆರೋಗ್ಯ ಮೇಳ: ನಗರದ ಅಂಬೇಡ್ಕರ್ ಭವನದಲ್ಲಿ ಬೆಳಗ್ಗೆ 10ರಿಂದ ಮಧ್ಯಾಹ್ನ 2ವರೆಗೆ ಬೆಂಗಳೂರಿನ ಸಪ್ತಗಿರಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ಮೈಸೂರಿನ ಭಾರತ್ ಕ್ಯಾನ್ಸರ್ ಆಸ್ಪತ್ರೆಯಿಂದ ಆರೋಗ್ಯ ಮೇಳ ಆಯೋಜಿಸಲಾಗಿದೆ ಎಂದರು.

ಹೃದಯ, ನರ ರೋಗ, ಸ್ತ್ರೀ ರೋಗ, ಕೀಲು ಮತ್ತು ಮೂಳೆ ತಪಾಸಣೆ, ಮೂತ್ರಕೋಶ ಮತ್ತು ಮೂತ್ರಪಿಂಡ ಸಮಸ್ಯೆ ಸೇರಿದಂತೆ ಇನ್ನಿತರ ಆರೋಗ್ಯ ಸಮಸ್ಯೆಗಳ ತಪಾಸಣೆ ನಡೆಯಲಿವೆ. ರಕ್ತದಾನ ಮಾಡುವವರಿಗೆ ಅವಕಾಶ ನೀಡಲಾಗಿದ್ದು, ತಾಲೂಕಿನ ಜನರು ಇದರ ಸದ್ಬಳಕೆ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ಸನ್ಮಾನಬೇಡ ಶಾಸಕ ಹೆಚ್.ಪಿ.ಮಂಜುನಾಥ್ ಅವರ ಕುಟುಂಬದ ಆಪ್ತರೊಬ್ಬರಾಗಿದ್ದ ನಾಗೇಶ್ ಅವರ ನಿಧನದಿಂದಾಗಿ ಈ ಬಾರಿ ಶಾಸಕರು ಹುಟ್ಟುಹಬ್ಬದ ದಿನ ಯಾವುದೇ ಸನ್ಮಾನ ಮತ್ತು ಹಾರ, ತುರಾಯಿ ಸ್ವೀಕರಿಸುವುದಿಲ್ಲ ಎಂದು ಶಾಸಕರೇ ಮನವಿ ಮಾಡಿದ್ದು, ಅಭಿಮಾನಿಗಳು ಸನ್ಮಾನಕ್ಕೆ ಬಳಸುವ ಹಣವನ್ನು ಬಡ ಮಕ್ಕಳ ಶಿಕ್ಷಣಕ್ಕೆ ಅನುಕೂಲವಾಗುವ ಪುಸ್ತಕ ಮತ್ತು ಕಲಿಕೋಪಕರಣಗಳನ್ನು ನೀಡುವಂತೆ ಕೋರಿದ್ದಾರೆ ಎಂದು ಹುಣಸೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಟಿ.ವಿ.ನಾರಾಯಣ್ ತಿಳಿಸಿದ್ದಾರೆ.

ಗ್ರಾಮೀಣರು ಆರೋಗ್ಯದ ಕಾಳಜಿವಹಿಸಲು ಸಲಹೆ



ತಿ.ನರಸೀಪುರ, ಜೂ.15(ಎಸ್‌ಕೆ)– ಗ್ರಾಮೀಣರು ಆರೋಗ್ಯದ ಕಡೆಗೆ ಹೆಚ್ಚಿನ ಗಮನಹರಿಸುವ ಮೂಲಕ ಉತ್ತಮ ಆರೋಗ್ಯ ಕಾಪಾಡಿಕೊಳ್ಳಬೇಕು ಎಂದು ವಾಟಾಳು ಮಠದ ಶ್ರೀಸಿದ್ಧಲಿಂಗಶಿವಾಚಾರ್ಯ ಸ್ವಾಮೀಜಿ ಸಲಹೆ ನೀಡಿದರು.

ಪಟ್ಟಣದ ರೆಡ್ಡಿ ಕಾಲೋನಿಯಲ್ಲಿರುವ ಬೃಂದಾ ಆಸ್ಪತ್ರೆಯಲ್ಲಿ ಬುಧವಾರ ಆಸ್ಪತ್ರೆಯ 2ನೇ ವಾರ್ಷಿಕೋತ್ಸವದ ಅಂಗವಾಗಿ ಹಮ್ಮಿಕೊಂಡಿದ್ದ ಆರೋಗ್ಯ ತಪಾಸಣಾ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಗ್ರಾಮೀಣ ಭಾಗದ ಜನರು ತಮ್ಮ ಆರೋಗ್ಯದ ಕಡೆಗೆ ಹೆಚ್ಚಿನ ಗಮನ ನೀಡದೆ ನಿರ್ಲಕ್ಷ್ಯವಹಿಸುತ್ತಿದ್ದಾರೆ. ಇದರಿಂದ ರಕ್ತದೊತ್ತಡ, ಮಧುಮೇಹದಂತಹ ಕಾಯಿಲೆಗಳು ಹೆಚ್ಚಿನ ಜನರಲ್ಲಿ ಬಾಧಿಸುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಜನರಲ್ ಫಿಜಿಷಿಯನ್ ಡಾ.ಪ್ರದೀಪ್ ಮಾತನಾಡಿ, ಉಚಿತ ತಪಾಸಣಾ ಶಿಬಿರಗಳು ಹೆಚ್ಚಾಗಿ ನಡೆಯುವುದರಿಂದ ಬಡ ಜನತೆಗೆ ಹೆಚ್ಚಿನ ಅನುಕೂಲವಾಗಲಿದೆ. ನಿಯಮಿತವಾದ ಆಹಾರ ಹಾಗೂ ಆರೋಗ್ಯ ತಪಾಸಣೆಯಿಂದ ವ್ಯಕ್ತಿಯು ಆರೋಗ್ಯವಂತನಾಗಿರಲು ಸಾಧ್ಯವಾಗುತ್ತದೆ. ಕೊರೊನಾ ವೈರಾಣು ಮತ್ತೆ ರಾಜ್ಯದಲ್ಲಿ ಅಟ್ಟಹಾಸ ಮೆರೆಯುವ ಸಾಧ್ಯತೆ ಇರುವುದರಿಂದ ಸಾರ್ವಜನಿಕರು ಎಚ್ಚರಿಕೆಯಿಂದ ಇರಬೇಕು. ಕಡ್ಡಾಯವಾಗಿ ಮಾಸ್ಕ್ ಧರಿಸುವುದು. ಸ್ಯಾನಿಟೈಸರ್ ಬಳಸುವುದು, ಸಾಮಾಜಿಕ ಅಂತರ ಕಾಪಾಡಿಕೊಳ್ಳುವುದು ಮಾಡಬೇಕು ಎಂದು ಮನವಿ ಮಾಡಿದರು.

ಶಿಬಿರದಲ್ಲಿ ನೂರಾರು ಮಂದಿ ಪಾಲ್ಗೊಂಡು ವಿವಿಧ ತಪಾಸಣೆಗೊಳಗಾಗಿ ಔಷಧಿಗಳನ್ನು ಪಡೆದುಕೊಂಡರು. ಅರವಳಿಕೆ ತಜ್ಞ ಡಾ.ಪುನೀತ್ ರಾಟೆ, ಡಾ.ಕವಿತಾ ಶ್ರೀಧರ್, ಡಾ.ಕೆ.ಸಿ.ನಂದೀಶ್ ಕುಮಾರ್, ಡಾ.ಚಂದ್ರಕಾಂತ್, ಡಾ.ಬಿ. ಸೋಹನ್, ಪುರಸಭಾ ಸದಸ್ಯ ಮೆಡಿಕಲ್ ನಾಗರಾಜು, ಬಿಜೆಪಿ ಮುಖಂಡ ಶಿವಕುಮಾರ್, ಬೃಂದಾ ಆಸ್ಪತ್ರೆಯ ವ್ಯವಸ್ಥಾಪಕ ಗುರು, ಶಹನಾಜ್ ರಿಯಾಜ್, ಉಪನ್ಯಾಸಕ ಕುಮಾರಸ್ವಾಮಿ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಶಿವಶಂಕರ್, ಮಣಿಕಂಠ ರಾಜು, ದಸಂಸ ಆಲಗೂಡು ಚಂದ್ರಶೇಖರ್, ತಿರುಮಲಕೂಡಲು ಗೋಪಾಲ್, ಚೇತನ್ ಇದ್ದರು.

ವೀರೇಗೌಡನಹುಂಡಿ ಅಂಗನವಾಡಿ ಕೇಂದ್ರಕ್ಕೆ ಚೇರ್, ಜಮಖಾನ ಕೊಡುಗೆ



ನಂಜನಗೂಡು, ಜೂ.15(ಸುದರ್ಶನ)– ಕ್ರೆಡಿಟ್ ಆಕ್ಸಿಸ್ ಗ್ರಾಮೀಣ ಲಿಮಿಟೆಡ್‌ನಿಂದ ವೀರೇಗೌಡನಹುಂಡಿ ಗ್ರಾಮದ ಅಂಗನವಾಡಿ ಕೇಂದ್ರಕ್ಕೆ ಚೇರ್ ಮತ್ತು ಜಮಖಾನಗಳನ್ನು ಕೊಡುಗೆಯಾಗಿ ನೀಡಲಾಯಿತು.

ಈ ವೇಳೆ ಸಂಸ್ಥೆಯ ಪ್ರಾದೇಶಿಕ ವ್ಯವಸ್ಥಾಪಕ ಮುತ್ತುರಾಜ್ ಮಾತನಾಡಿ, ತಮ್ಮ ಸಂಸ್ಥೆಯ ಸಮಾಜಮುಖಿ ಕಾರ್ಯಕ್ರಮಗಳಲ್ಲಿ ಅಂಗನವಾಡಿಗಳ ಅಭಿವೃದ್ಧಿಯು ಒಂದಾಗಿದ್ದು, ಈ ಯೋಜನೆಯಲ್ಲಿ ತಾಲೂಕಿನ ವೀರೇಗೌಡನಹುಂಡಿ ಅಂಗನವಾಡಿ ಕೇಂದ್ರಕ್ಕೆ ಈ ಸಾಮಗ್ರಿಗಳನ್ನು ನೀಡಲಾಗಿದೆ ಎಂದರು.

ಈ ಸಂದರ್ಭದಲ್ಲಿ ವ್ಯವಸ್ಥಾಪಕ ಉಮೇಶ್, ಬ್ರಾಂಚ್ ಮ್ಯಾನೇಜರ್ ಕುಮಾರ್, ಪ್ರದೀಪ್‌ಕುಮಾರ್, ಸಿಬ್ಬಂದಿ ಪ್ರತಾಪ್, ಸುದರ್ಶನ್, ಶಿವಕುಮಾರ್, ನೀಲಿ ಸಿದ್ದಪ್ಪ, ಅಂಗನವಾಡಿ ಕಾರ್ಯಕರ್ತೆ ಚಿನ್ನತಾಯಮ್ಮ, ಸೂಪರ್‌ವೈಸರ್ ಅನುಸೂಯ ಹಾಗೂ ಗ್ರಾಮಸ್ಥರು ಹಾಜರಿದ್ದರು.

ಹೊಸ ಅಗ್ರಹಾರ ಗ್ರಾಪಂಗೆ ಮಲ್ಲಿಕಾರ್ಜುನ ಉಪಾಧ್ಯಕ್ಷ



ಭೇರ್ಯ, ಜೂ.15– ಹೊಸಅಗ್ರಹಾರ ಗ್ರಾಮ ಪಂಚಾಯತಿ ಉಪಾಧ್ಯಕ್ಷರಾಗಿ ಮಲ್ಲಿಕಾರ್ಜುನ ಅವಿರೋಧವಾಗಿ ಆಯ್ಕೆಯಾದರು.

ಈ ಹಿಂದೆ ಉಪಾಧ್ಯಕ್ಷರಾಗಿದ್ದ ಪೂರ್ಣಿಮಾ ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ನಡೆದ ಉಪಾಧ್ಯಕ್ಷ ಸ್ಥಾನದ ಚುನಾವಣೆಯಲ್ಲಿ ಹೊಸ ಅಗ್ರಹಾರ ಗ್ರಾಮದವರೇ ಆದ ಮಲ್ಲಿಕಾರ್ಜುನ ಅವರೊಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಚುನಾವಣಾಧಿಕಾರಿ ಪಶುಸಂಗೋಪನೆ ಇಲಾಖೆಯ ಸಹಾಯಕ ನಿರ್ದೇಶಕ ಡಾ.ನಾಗರಾಜು ಅವಿರೋಧ ಆಯ್ಕೆ ಘೋಷಿಸಿದರು.

ನೂತನವಾಗಿ ಉಪಾಧ್ಯಕ್ಷರಾಗಿ ಆಯ್ಕೆಯಾದ ಮಲ್ಲಿಕಾರ್ಜುನ ಅವರನ್ನು ಪಿಡಿಓ ಅಶ್ವಿನಿ, ಅಧ್ಯಕ್ಷೆ ಸುಕನ್ಯಾ, ಸದಸ್ಯರಾದ ಡಿ.ಎಸ್.ಯೋಗೇಶ್, ಮಹೇಶ್, ಪುಷ್ಪ, ಪೂರ್ಣಿಮಾ, ಹೆಚ್.ಎಂ.ರಾಮಚಂದ್ರೇಗೌಡ, ಮಹದೇವಮ್ಮ, ಸೌಮ್ಯಾ, ಶೇಖರ್, ಜಯಲಕ್ಷ್ಮೀ, ಮುಖಂಡರಾದ ಮಹೇಶ್, ಚಂದ್ರು, ಪ್ರತಾಪ್, ರಘುನಾಯಕ, ಮಂಜು, ರುದ್ರೇಶ್ ಅಭಿನಂದಿಸಿದರು.

ಜೂ. 24, ಸರಗೂರಿನಲ್ಲಿ ಬಸವ ಜಯಂತಿ ಆಚರಣೆ



ಸರಗೂರು, ಜೂ.15(ನಾಗೇಶ್)– ಪಟ್ಟಣದಲ್ಲಿ ಜಗಜ್ಯೋತಿ ಬಸವೇಶ್ವರ ಜಯಂತಿಯನ್ನು ಜೂ.24ರಂದು ಸರಗೂರು ಹಾಗೂ ಹೆಚ್.ಡಿ.ಕೋಟೆ ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾ ತಾಲೂಕು ಘಟಕದಿಂದ ಅದ್ಧೂರಿಯಾಗಿ ಆಚರಿಸಲು ತೀರ್ಮಾನಿಸಲಾಯಿತು.

ಪಟ್ಟಣದ ಜೆಎಸ್‌ಎಸ್‌ನ ಮಂಗಳ ಮಂಟಪದಲ್ಲಿ ಬಸವ ಜಯಂತಿ ಆಚರಿಸುವ ಸಂಬಂಧ ನಡೆದ ಪೂರ್ವಭಾವಿ ಸಭೆಯಲ್ಲಿ ಸುತ್ತೂರು ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರ ಆದೇಶದ ಮೇರೆಗೆ ಪಟ್ಟಣದ ಮಹಾಸಭಾದ ನಿವೇಶನದಲ್ಲಿ ವಿಜೃಂಭಣೆಯಿಂದ ಬಸವ ಜಯಂತಿ ಆಚರಿಸಲಾಗುವುದು. ಮುಂದಿನ ಬಾರಿ ಎಂದಿನಂತೆ ಹೆಚ್.ಡಿ. ಕೋಟೆ ಪಟ್ಟಣದಲ್ಲಿ ಬಸವ ಜಯಂತಿ ಆಚರಿಸಲು ನಿರ್ಧರಿಸಲಾಯಿತು.

ಕೊರೊನಾ ಹಿನ್ನೆಲೆಯಲ್ಲಿ ಎರಡು ವರ್ಷಗಳಿಂದ ಬಸವ ಜಯಂತಿಯನ್ನು ಆಚರಿಸಲು ಸಾಧ್ಯವಾಗಿರಲಿಲ್ಲ. ಹೀಗಾಗಿ ಈ ಬಾರಿ ಬಹಳ ವಿಶಿಷ್ಟವಾಗಿ ಆಚರಿಸಬೇಕು. ಕಾರ್ಯಕ್ರಮಕ್ಕೆ ಹೆಚ್ಚಿನ ರೀತಿಯಲ್ಲಿ ಪ್ರಚಾರ ನೀಡಬೇಕು. ಜಯಂತಿ ಹಿನ್ನೆಲೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಬಸವೇಶ್ವರ ಭಾವಚಿತ್ರದ ಮೆರವಣಿಗೆ ಇರಲಿದ್ದು, ಈ ಸಂದರ್ಭದಲ್ಲಿ ವಿವಿಧ ಕಲಾ ತಂಡಗಳಿಂದ ಕಲೆ ಪ್ರದರ್ಶಿಸಲು ಅನುಕೂಲ ಮಾಡಿಕೊಡಬೇಕು ಎಂದು ಸಭೆಯಲ್ಲಿ ತಿಳಿಸಲಾಯಿತು.

ಸುತ್ತೂರು ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರ ಸಾನ್ನಿಧ್ಯದಲ್ಲಿ ನಡೆಯಲಿರುವ ಜಯಂತಿ ಕಾರ್ಯಕ್ರಮಕ್ಕೆ ವಿವಿಧ ಮಠಾಧೀಶರು, ಇನ್ನಿತರ ಗಣ್ಯರು, ಜನಪ್ರತಿನಿಧಿಗಳನ್ನು ಆಹ್ವಾನಿಸುವಂತೆ ತೀರ್ಮಾನಿಸಲಾಯಿತು.

ಸಭೆಯಲ್ಲಿ ಮಹಾಸಭಾದ ಸರಗೂರು ತಾಲೂಕು ಘಟಕದ ಉಪಾಧ್ಯಕ್ಷ ಎಸ್.ಎಸ್. ಪ್ರಭುಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಮಹಾಸಭಾದ ಹೆಚ್.ಡಿ.ಕೋಟೆ ತಾಲೂಕು ಘಟಕದ ಅಧ್ಯಕ್ಷ ಮೊತ್ತ ಬಸವರಾಜಪ್ಪ, ಕಾರ್ಯದರ್ಶಿ ಸಿದ್ದಪ್ಪ ಶಿವಕುಮಾರ್, ಮಹದೇವಪ್ಪ, ವೀರಶೈವ ಸಹಕಾರ ಸಂಘದ ಅಧ್ಯಕ್ಷ ಹಂಚೀಪುರ ಗಣಪತಿ, ಹಣಕಾಸು ಸಮಿತಿ ಸಂಚಾಲಕ ಕಾಟವಾಳು ನಟರಾಜು, ರುದ್ರಣ್ಣ, ಬಿಜೆಪಿ ತಾಲೂಕ ಘಟಕದ ಮಾಜಿ ಅಧ್ಯಕ್ಷ ಸಿ.ಕೆ.ಗಿರೀಶ್, ಮಹಾಸಭಾದ ಯುವ ಘಟಕದ ಅಧ್ಯಕ್ಷ ಪರಶಿವಮೂರ್ತಿ, ಬಸವ ಬಳಗ ಮಹದೇವಸ್ವಾಮಿ, ಶಿವಪ್ಪಾಜಿ, ಗುರುಸ್ವಾಮಿ ಮತ್ತಿತರರು ಹಾಜರಿದ್ದರು.

ನಾಡಿನ ಪರಂಪರೆ ಉಳಿಸಲು ಮಠಗಳ ಪಾತ್ರ ಮುಖ್ಯ



ಬೆಟ್ಟದಪುರ, ಜೂ.15(ಶಿವದೇವ್)– ಜಾತಿ, ಮತ ಭೇದಗಳಿಗೆ ಮಣೆ ಹಾಕದೇ, ಎಲ್ಲಾ ಸಮಾಜದ ಅಭಿವೃದ್ಧಿಗಾಗಿ ಮಠಗಳನ್ನು ಸ್ಥಾಪಿಸಲಾಗಿದ್ದು, ನಾಡಿನ ಹಿಂದಿನ ಪರಂಪರೆಯನ್ನು ಉಳಿಸುವಲ್ಲಿ ಮಠಗಳ ಪಾತ್ರ ಮಹತ್ವದ್ದಾಗಿದೆ ಎಂದು ಬೆಟ್ಟದಪುರ ಸ್ವತಂತ್ರ ಸಲೀಲಾಖ್ಯ ವಿರಕ್ತ ಮಠ ಮತ್ತು ಕನ್ನಡ ಮಠದ ಶ್ರೀಚನ್ನಬಸವ ದೇಶಿಕೇಂದ್ರ ಸ್ವಾಮೀಜಿ ಹೇಳಿದರು.

ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರ ಕನ್ನಡ ಮಠದಲ್ಲಿ ನಡೆದ ಶ್ರೀಚಿಕ್ಕವೀರ ದೇಶಿಕೇಂದ್ರ ಮಹಾಸ್ವಾಮಿಗಳ 94ನೇ ಹಾಗೂ ಶ್ರೀಚನ್ನವೀರ ದೇಶಿಕೇಂದ್ರ ಸ್ವಾಮಿಗಳ 41ನೇ ವರ್ಷದ ಗಣಾರಾಧನೆ ಮತ್ತು ಕನ್ನಡ ಮಠದ ಸ್ಥಾಪನೆ 213ನೇ ವರ್ಷಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕನ್ನಡ ಭಾಷೆಯನ್ನು ಉಳಿಸುವುದಕ್ಕಾಗಿ ಇರುವ ಏಕೈಕ ಮಠ ಅದು ನಮ್ಮ ಕನ್ನಡ ಮಠವಾಗಿದೆ ಎಂದರು.

ಮಠವನ್ನು ಉಳಿಸುವುದಕ್ಕಾಗಿ ಕಳೆದ 30 ವರ್ಷಗಳಿಂದ ಹಲವು ಹೋರಾಟ ಮಾಡಲಾಗಿದೆ. ಹಣದ ಮತ್ತು ಜೋಳಿಗೆಯ ಹೋರಾಟದಲ್ಲಿ ಅಂತಿಮವಾಗಿ ಜೋಳಿಗೆಯ ಹೋರಾಟ ಜಯಗಳಿಸಿದೆ. ಮಠಗಳು ಮಾನವೀಯ ಮೌಲ್ಯಗಳನ್ನು ಕಲಿಸುತ್ತದೆ. ಮಿತವಾದ ಆಹಾರ, ಹಿತವಾದ ಚಿಂತನೆಯಿಂದ ಮಾನವನ ಆರೋಗ್ಯ ಕಾಪಾಡಿಕೊಳ್ಳಬಹುದು ಎಂದರು.

ಹಾಸನ ಜಿಲ್ಲೆಯ ಮುಕ್ಕುಂದೂರು ಮಠದ ಶ್ರೀ ಮಹಾಂತ ಬಸವಲಿಂಗ ಸ್ವಾಮೀಜಿ ಮಾತನಾಡಿದರು. ಬಳಿಕ, ಮಠಕ್ಕೆ ಭೂ ದಾನ ಮಾಡಿದ ಬೆಟ್ಟದಪುರದ ತಮ್ಮಶೆಟ್ಟಿ ಹಾಗೂ ಚಿಕ್ಕವೀರಮ್ಮ ಅವರನ್ನು ಸನ್ಮಾನಿಸಲಾಯಿತು.

ದೇವರ ಗದ್ದುಗೆಯ ಅಲಂಕಾರ ಮತ್ತು ವಿವಿಧ ಪೂಜಾ ಕೈಂಕರ್ಯಗಳನ್ನು ಹರಳಯ್ಯ ಗುರುಪೀಠದ ಶ್ರೀಕಂಠ ಆರಾಧ್ಯ ಹಾಗೂ ಪಿರಿಯಾಪಟ್ಟಣದ ಪುಟ್ಟಸ್ವಾಮಿ ಪುರೋಹಿತರು ನೆರವೇರಿಸಿದರು. ಕಾರ್ಯಕ್ರಮಕ್ಕೂ ಮೊದಲು ಹಿರಿಯ ಸ್ವಾಮೀಜಿಗಳ ಭಾವಚಿತ್ರವನ್ನು ಮೆರವಣಿಗೆ ಮಾಡಲಾಯಿತು. ವೀರಗಾಸೆ ಮತ್ತು ಜನಪದ ಕಲಾ ತಂಡಗಳು ಮೆರವಣಿಗೆಗೆ ಮೆರುಗು ನೀಡಿದವು. ಬಳಿಕ, ಭಕ್ತರಿಗೆ ಪ್ರಸಾದ ನೀಡಲಾಯಿತು.

ಕಾರ್ಯಕ್ರಮದಲ್ಲಿ ಮಾದಹಳ್ಳಿ ಉಕ್ಕಿನಕಂತೆ ಮಠದ ಶ್ರೀಸಾಂಬಶಿವ ಸ್ವಾಮೀಜಿ, ಗಾವಡಗೆರೆ ಗುರುಲಿಂಗ ಜಂಗಮ ಮಠದ ಶ್ರೀನಟರಾಜ ಸ್ವಾಮೀಜಿ, ಹಾಸನದ ತಣ್ಣೀರುಹಳ್ಳ ಮಠದ ಶ್ರೀವಿಜಕುಮಾರ ಸ್ವಾಮೀಜಿ, ತೇಜೂರು ಮಠದ ಶ್ರೀಕಲ್ಯಾಣ ಸ್ವಾಮೀಜಿ, ದಿಂಡಗಾಡು ಬಸವಜ್ಯೋತಿ ಮಠದ ಶ್ರೀಅಪ್ಪಾಜಿ ಸ್ವಾಮೀಜಿ, ಅರಕಲಗೂಡು ಚಿಲುಮೆ ಸ್ವಾಮೀಜಿ, ರಾಜ್ಯ ರೈತ ಸಂಘದ ಪ್ರಾದೇಶಿಕ ಸಂಚಾಲಕ ಸರಗೂರು ನಟರಾಜ್, ನಿವೃತ್ತ ಸಾರಿಗೆ ಅಧೀಕ್ಷಕ ಶಿವಣ್ಣ ಸೇರಿದಂತೆ ವಿವಿಧ ಮಠಾಧೀಶರು, ತಾಲೂಕಿನ ವಿವಿಧ ಗ್ರಾಮಗಳ ಮುಖಂಡರು ಪಾಲ್ಗೊಂಡಿದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಜುರಾಸಿಕ್ ವರ್ಲ್ಡ್(3ಡಿ)(ಇಂ): ಬೆ.9.55ಕ್ಕೆ, ಸಂ.4.05ಕ್ಕೆ, ರಾ.10.10ಕ್ಕೆ, 777 ಚಾರ್ಲಿ (ಕ): ಮ.12.55ಕ್ಕೆ, ರಾ.7ಕ್ಕೆ
ಸ್ಕ್ರೀನ್ 2	ಡಿಯರ್ ಫ್ರೆಂಡ್ (ಮ): ಬೆ.9.55ಕ್ಕೆ, ವಿಕ್ರಂ (ತ): ಮ.12.20ಕ್ಕೆ, ಅಂಟೆ ಸುಂದರಾನಿಕಿ (ತೆ): ಮ.3.30ಕ್ಕೆ, ಸಂ.6.50ಕ್ಕೆ, 777 ಚಾರ್ಲಿ (ಕ): ರಾ.10.10ಕ್ಕೆ.
ಸ್ಕ್ರೀನ್ 3	ವಿಕ್ರಂ (ತ): ಬೆ.9.30ಕ್ಕೆ, ಮ.3.30ಕ್ಕೆ, ಸಂ.6.50ಕ್ಕೆ, ಶ್ರೀ ಅಲ್ಲಮ್ಮಪ್ರಭು (ಕ): ಮ.12.45ಕ್ಕೆ, ಅಂಟೆ ಸುಂದರಾನಿಕಿ (ತೆ): ರಾ.10.10ಕ್ಕೆ.
ಸ್ಕ್ರೀನ್ 4	777 ಚಾರ್ಲಿ (ಕ): ಬೆ.9.35ಕ್ಕೆ, ಸಂ.4.05ಕ್ಕೆ, ರಾ.10.10ಕ್ಕೆ, ಜುರಾಸಿಕ್ ವರ್ಲ್ಡ್ (3ಡಿ)(ಇಂ): ಮ.1ಕ್ಕೆ, ರಾ.7.15ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಜುರಾಸಿಕ್ ವರ್ಲ್ಡ್ (3ಡಿ)(ಇಂ): ಬೆ.9.30ಕ್ಕೆ, ಮ.12.35ಕ್ಕೆ, ಮ.3.40ಕ್ಕೆ, ಸಂ.6.50ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	777 ಚಾರ್ಲಿ (ಕ): ಬೆ.9.20ಕ್ಕೆ, ಮ.3.40ಕ್ಕೆ, ರಾ.7.05ಕ್ಕೆ, ರಾ.10.30ಕ್ಕೆ, ಬೂಲ್ ಬುಲಾಯ್ಯ 2 (ಹಿಂ): ಮ.12.40ಕ್ಕೆ.
ಸ್ಕ್ರೀನ್ 3	ವಿಕ್ರಂ (ತ): ಬೆ.11ಕ್ಕೆ, ಸಂ.6.10ಕ್ಕೆ, ಅಂಟೆ ಸುಂದರಾನಿಕಿ (ತೆ): ಮ.2.35ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 4	ಅಂಟೆ ಸುಂದರಾನಿಕಿ (ತೆ): ಬೆ.9.40ಕ್ಕೆ, 777 ಚಾರ್ಲಿ (ಕ): ಮ.1.05ಕ್ಕೆ, ಸಂ.4.25ಕ್ಕೆ, ಡಿಯರ್ ಫ್ರೆಂಡ್ (ಮ): ರಾ.7.45ಕ್ಕೆ, ವಿಕ್ರಂ (ತ): ರಾ.10.20ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಸಾಮ್ರಾಟ್ ಪೃಥ್ವಿರಾಜ್ (ಹಿಂ): ಬೆ.10.30ಕ್ಕೆ, ಸಂ.4ಕ್ಕೆ, ಸಂ.6.45ಕ್ಕೆ, ರಾ.9.25ಕ್ಕೆ, ಮೆಟಡೊರ್ (ಕ): ಮ.1.15ಕ್ಕೆ.
ಸ್ಕ್ರೀನ್ 2	ವಿಕ್ರಂ (ತ): ಬೆ.10ಕ್ಕೆ, ರಾ.9.30ಕ್ಕೆ, ಮೇಜರ್ (ಹಿಂ): ಸಂ.4ಕ್ಕೆ.
ಸ್ಕ್ರೀನ್ 3	ವಿಕ್ರಂ (ತ): ಮ.1ಕ್ಕೆ, ಸಂ.4.25ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	ಮೇಜರ್ (ತೆ): ಬೆ.10.25ಕ್ಕೆ, ಮ.1.20ಕ್ಕೆ, ಸಂ.6.35ಕ್ಕೆ, ಗಜಾನನ ಅಂಡ್ ಗ್ಯಾಂಗ್ (ಕ): ಸಂ.4.15ಕ್ಕೆ, ಮೇಜರ್ (ಹಿಂ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ಮೊ.ನಂ: 8951357088

ಫೋರಂ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಕೆಜಿಎಫ್ 2(ಕ): ಸಂ.5.35ಕ್ಕೆ, ರಾಜ್ ಸೌಂಡ್ಸ್ ಅಂಡ್ ಲೈಟ್ಸ್ (ತು): ಸಂ.6.05ಕ್ಕೆ, ಮೆಟಡೊರ್ (ಕ): ಬೆ.11.45ಕ್ಕೆ, ಟಾಪ್ ಗನ್ (ಇಂ): ಮ.2.45ಕ್ಕೆ, ಸಾಮ್ರಾಟ್ ಪೃಥ್ವಿರಾಜ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಬೂಲ್‌ಬುಲಯ್ಯ 2(ಹಿಂ): ಮ.12.30ಕ್ಕೆ, ಸಂ.6.40ಕ್ಕೆ, ಮೇಜರ್ (ಹಿಂ): ಮ.1.05ಕ್ಕೆ, ರಾ.7.15ಕ್ಕೆ, ರಾ.9.20ಕ್ಕೆ, ವಿಕ್ರಮ್ (ತ): ಬೆ.8.30ಕ್ಕೆ, ಬೆ.9.30ಕ್ಕೆ, ಬೆ.11ಕ್ಕೆ, ಮ.12ಕ್ಕೆ, ಮ.2.35ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.9ಕ್ಕೆ, ರಾ.10.30ಕ್ಕೆ, ಮೇಜರ್ (ತೆ): ಬೆ.9.25ಕ್ಕೆ, ಸಂ.4.10ಕ್ಕೆ, ರಾ.10.20ಕ್ಕೆ, F3 (ತೆ): ಮ.3.35ಕ್ಕೆ, ಸರ್ಕಾರು ವಾರಿ ಪಾಠ (ತೆ): ರಾ.9.45ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ವಿಕ್ರಂ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಚಾರ್ಲಿ–777 (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಇಲ್ಲಿಂದ ಆರಂಭವಾಗಿದೆ (ಕ)	1 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ವಿಕ್ರಂ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಚಾರ್ಲಿ–777 (ಕ)	4 ಪ್ರದರ್ಶನಗಳು
ಗಾಯಿತ್ರಿ	
ಚಾರ್ಲಿ–777 (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಜುರಾಸಿಕ್ ಪಾರ್ಕ್ (ಇ)	4 ಪ್ರದರ್ಶನಗಳು
ಸಂಗಂ	
ವಿಕ್ರಂ (ತ)	4 ಪ್ರದರ್ಶನಗಳು
ಲಿಡೋ	
ಡಾನ್ (ತ)	4 ಪ್ರದರ್ಶನಗಳು
ತಿಬ್ಬಾದೇವಿ	
ವಿಕ್ರಮ್ (ತ)	4 ಪ್ರದರ್ಶನಗಳು
ಸ್ಟರ್ಲಿಂಗ್	
ಜುರಾಸಿಕ್ ಪಾರ್ಕ್ (ಇ)	4 ಪ್ರದರ್ಶನಗಳು
ಸ್ಕೈಲೈನ್	
ಅಂಜನ (ಕ)	4 ಪ್ರದರ್ಶನಗಳು
ಪ್ರಭಾ	
ಅವತಾರ ಪುರುಷ (ಕ)	4 ಪ್ರದರ್ಶನಗಳು

ಸರ್ಕಾರದ ಸೌಲಭ್ಯಗಳ ಸದ್ಬಳಕೆಗೆ ಸಲಹೆ

ಹೆಚ್.ಡಿ.ಕೋಟೆ, ಜೂ.15(ಮಂಜು)– ಸರ್ಕಾರದ ವತಿಯಿಂದ ನೀಡುವ ಸೌಲಭ್ಯಗಳನ್ನು ರೈತರು ಸದ್ಬಳಕೆ ಮಾಡಿಕೊಂಡು ಆರ್ಥಿಕವಾಗಿ ಮುಂದೆ ಬರಬೇಕು ಎಂದು ಚಾಮರಾಜನಗರ ಹರದನಹಳ್ಳಿ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿ ಡಾ. ಶಶಿಕುಮಾರ್ ಸಲಹೆ ನೀಡಿದರು.

ತಾಲೂಕಿನ ಮಾದಪುರ ಗ್ರಾಮದಲ್ಲಿ ಚಾಮರಾಜನಗರ ಜಿಲ್ಲೆ ಹರದನಹಳ್ಳಿ ಕೃಷಿ ಅಧ್ಯಯನ ಕೇಂದ್ರ ಹಾಗೂ ತಾಲೂಕು ಸಮತಾ ಟ್ರಸ್ಟ್ ಸಹಯೋಗದಲ್ಲಿ ಕೇಂದ್ರ ಸರ್ಕಾರದ ವಿಶೇಷ ಘಟಕ ಯೋಜನೆಯಡಿ 100 ಜನ ರೈತ ಮಹಿಳೆಯರಿಗೆ ಉಚಿತವಾಗಿ ವಿವಿಧ ತಳಿಯ ಗಿಡಗಳನ್ನು ವಿತರಿಸಿ ಅವರು ಮಾತನಾಡಿದರು.

ಕೇಂದ್ರ ಮತ್ತು ರಾಜ್ಯ ಸರ್ಕಾರ ವಿವಿಧ ಯೋಜನೆಯಡಿ ರೈತರಿಗೆ ನೀಡುವ ಗಿಡಗಳನ್ನು ನೆಟ್ಟು ಅದರ ಫಲವನ್ನು ಪಡೆದುಕೊಳ್ಳಬೇಕು. ಇದರಿಂದ ಲಾಭಗಳಿಸಿ, ರೈತರು ತಮ್ಮ ಜೀವನೋಪಾಯವನ್ನು ಸರಿದೂಗಿಸಿಕೊಳ್ಳಬಹುದು ಎಂದರು.

ಕೃಷಿ ವಿಜ್ಞಾನಿ ಡಾ.ಶಿವಾರನಾವಿ ಮಾತನಾಡಿ, ತೆಂಗು, ಸೀಬೆ, ನೇರಳೆ ಇತ್ಯಾದಿ ಬೇರೆ ಬೆಳೆಗಳಿಗೆ ತಗಲುವ ರೋಗವನ್ನು ಕಾಲ–ಕಾಲಕ್ಕೆ ಹೇಗೆ ಶಮನ ಮಾಡಬೇಕು. ಯಾವ–ಯಾವ ಕಾಲಕ್ಕೆ ಔಷಧಿಗಳನ್ನು ಹೇಗೆ ಸಿಂಪಡಿಸಬೇಕು. ರೋಗ ಬಾರದಂತೆ ಹೇಗೆ ತಡೆಗಟ್ಟಬೇಕು ಎಂಬುದರ ಬಗ್ಗೆ ರೈತರಿಗೆ ಸುದೀರ್ಘ ಮಾಹಿತಿ ನೀಡಿದರು.

ಸಮತಾ ಟ್ರಸ್ಟ್‌ನ ಅಧ್ಯಕ್ಷ ರವೀಂದ್ರ ಮಲಾರ ಮಾತನಾಡಿ, ರೈತರು ಸರ್ಕಾರದ ವತಿಯಿಂದ ನೀಡುವ ಗಿಡಗಳನ್ನು ತಮ್ಮ ಜಮೀನಿನಲ್ಲಿ ನೆಟ್ಟು ಪೋಷಣೆ ಮಾಡಿದಾಗ ಈ ಒಂದು ಕಾರ್ಯಕ್ರಮಕ್ಕೆ ಅರ್ಥ ಸಿಗುತ್ತದೆ. ಇವತ್ತಿನ ಮಾರುಕಟ್ಟೆಯಲ್ಲಿ ಒಂದು ತೆಂಗಿನಕಾಯಿಗೆ 25ರಿಂದ 30ರೂ. ಇದೆ. ಹಾಗಾಗಿ ತೋಟಗಾರಿಕೆ ಬೆಳೆಗಳಾದ ಸೀಬೆ, ನೇರಳೆ, ಹಲಸು ಸೇರಿದಂತೆ ಇನ್ನಿತರ ಲಾಭದಾಯಕವಾದ ಮರಗಿಡಗಳನ್ನು ಬೆಳೆಸಿ ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಮನವಿ ಮಾಡಿದರು. ಇದೇ ಸಂದರ್ಭದಲ್ಲಿ ನೂರು ರೈತ ಮಹಿಳೆಯರಿಗೆ ಉಚಿತವಾಗಿ ಗಿಡ, ಕೃಷಿ ಪರಿಕರ ಹಾಗೂ ಔಷಧಿ ಪರಿಕರಗಳನ್ನು ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ರೈತರಾದ ಚಂದ್ರಶೇಖರಮೂರ್ತಿ ಮಲಾರ, ಧರಣಿ, ರೈತ ಉತ್ಪಾದಕರ ಸಮಿತಿ ಕಾರ್ಯದರ್ಶಿ ಎಂ.ಬಿ.ಕುಮಾರಸ್ವಾಮಿ ಮಲಾರ, ಓಡಿಪಿ ಸಂಸ್ಥೆ ಸುನೀತಾ, ಶ್ರೀನಿವಾಸ ಯಶವಂತಪುರ, ಪದಾಧಿಕಾರಿಗಳಾದ ಮರಲಿಂಗಯ್ಯ ಲಂಕೆ, ರಾಘವೇಂದ್ರ, ಸೋಮು, ಮಹದೇವಕುಮಾರ್, ಪ್ರಸನ್ನ ಇದ್ದರು.



ವಿವೇಕಾನಂದ ಯೋಗ ಶಿಕ್ಷಣ ಸಂಸ್ಥೆಯ ಯೋಗಪಟುಗಳಿಂದ

ಅತ್ಯಂತ ಕ್ಲಿಷ್ಟಕರ ಯೋಗ ಪ್ರದರ್ಶನ: ಗೋಲ್ಡನ್ ಬುಕ್ ಆಫ್ ರೆಕಾರ್ಡ್



ಮೈಸೂರು, ಜೂ.15(ಆರ್‌ಕೆಬಿ)– ವಿವೇಕಾನಂದ ಯೋಗ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಯ ವತಿಯಿಂದ ಸಂಸ್ಥೆಯ 15 ಮಂದಿ ಯೋಗಪಟುಗಳು 15 ವಿವಿಧ ಅತ್ಯಂತ ಕ್ಲಿಷ್ಟಕರ ಯೋಗಾಸನಗಳನ್ನು ಪ್ರದರ್ಶಿಸುವ ಮೂಲಕ ದಾಖಲೆ ನಿರ್ಮಿಸಿ, ಗೋಲ್ಡನ್ ಬುಕ್ ಆಫ್ ರೆಕಾರ್ಡ್‌ಗೆ ಸೇರ್ಪಡೆಯಾದರು.

ಮೈಸೂರು ದಸರಾ ವಸ್ತು ಪ್ರದರ್ಶನ ಮೈದಾನದಲ್ಲಿರುವ ಪಿ.ಕಾಳಿಂಗರಾವ್ ಸಭಾ ಮಂಟಪದಲ್ಲಿ 15 ಮಂದಿ ಯೋಗ ಪಟುಗಳು ವಿಶ್ವ ದಾಖಲೆಯ ಯೋಗಾಸನಗಳ ಪ್ರದರ್ಶನ ನಡೆಸಿದರು. ಜೈನಾ ಬೇಗಂ ಅವರು ಒಂದು ನಿಮಿಷದಲ್ಲಿ ಅತೀ ಹೆಚ್ಚು ಅಂದರೆ 16–17 ಬಾರಿ ಗಂಡಭೇರುಂಡ ಮತ್ತು ಪೂರ್ಣ ಭುಜಂಗಾಸನ, ಎಂ.ಎ. ದಿವ್ಯ ಒಂದು ನಿಮಿಷದಲ್ಲಿ 21–22 ಬಾರಿ ದ್ವಿಪಾದ ವಾಲಿಕಿಲ್ಯಾಸನ ಮತ್ತು ಉಗ್ರ ವಿಪರೀತ ಶಲಭಾಸನ ಚಕ್ರ, ಆರ್.ಅಂಕಿತಾ ಒಂದು ನಿಮಿಷದಲ್ಲಿ 53 ಕ್ಲಿಷ್ಟಕರ ಗರಿಷ್ಠ ಆಸನಗಳನ್ನು ಪ್ರದರ್ಶಿಸಿದರು. ಪಾವನಿ ದೇಸಾಯಿ ಒಂದು ನಿಮಿಷದಲ್ಲಿ 41–42 ಬಾರಿ ಉಪವಿಷ್ಟಕೋನಾಸನ ತಿರುಚುವಿಕೆ, ಹೇಮಂತ್ 20 ನಿಮಿಷ ಯೋಗ ಕುರ್ಚಿಯ ಮೇಲೆ ಶೀರ್ಷಬದ್ಧಕೋನಾಸನದ ಅತಿ ದೀರ್ಘಕಾಲ ನಿಂತು ದಾಖಲೆ ನಿರ್ಮಿಸಿದರು.

ಸುರಭಿ ಮತ್ತು ಸೌರಭ ಅವರು ಒಂದು ನಿಮಿಷದಲ್ಲಿ 35–36 ಬಾರಿ 75 ಜೋಡಿ ಯೋಗ ಗುಚ್ಛಗಳ ಸಾಧನೆ ಮಾಡಿದರು. ಎಂ.ವರ್ಷ ಒಂದು ನಿಮಿಷದಲ್ಲಿ 34–35 ಬಾರಿ ಏಕಪಾದ ಶೀರ್ಷಾಸನ ಪ್ರದರ್ಶಿಸಿದರು. ಎಂ.ಉಷಾ ಒಂದು ನಿಮಿಷದಲ್ಲಿ ಉಪವಿಷ್ಠ ಕೋನಾಸನ ಮತ್ತು ಗಂಡಭೇರುಂಡಾಸನ ಚಕ್ರ ಪ್ರದರ್ಶಿಸಿದರೆ, ಮಯೂರ್ ಅವರು 20 ನಿಮಿಷ ಯೋಗ ಕುರ್ಚಿಯ ಮೇಲೆ ಶೀರ್ಷ ಪದ್ಮಾಸನದಲ್ಲಿ ತಲೆಯ ಮೇಲೆ ನಿಂತು ದಾಖಲೆ ಮಾಡಿದರು. ಆರ್.ರಾಜು 6 ನಿಮಿಷದಲ್ಲಿ ಭದ್ರಾಸನ ಬ್ಯಾಲೆನ್ಸ್ ಆನ್ ಯೋಗ ರಿಂಗ್ ಅಂಡ್ ಸ್ಟೂಲ್, ಸಿತಾರ ಒಂದು ನಿಮಿಷದಲ್ಲಿ 32–33 ಬಾರಿ ಸ್ಟಿಕ್ ಯೋಗಾಸನಗಳ ಪ್ರದರ್ಶಿಸಿದರು. ಡಿ. ಜಯಂತು ಅವರು 30 ನಿಮಿಷದಲ್ಲಿ ಯೋಗ ಕುರ್ಚಿಯ ಮೇಲೆ ಪ್ರಸರಿತ ಶೀರ್ಷಾಸನ ಪ್ರದರ್ಶಿಸಿದರು.

ಗೋಲ್ಡನ್ ಬುಕ್ ಆಫ್ ರೆಕಾರ್ಡ್ಸ್‌ನ ವತಿಯಿಂದ ಡಾ.ಮನಿಷ್ ಕೃಷ್ಣೋಯಿ ಅವರ ಸಮ್ಮುಖದಲ್ಲಿ ಯೋಗ ಪ್ರದರ್ಶನ ನಡೆಯಿತು. ಪ್ರದರ್ಶನದ ಬಳಿಕ ಡಾ. ಮನಿಷ್ ಕೃಷ್ಣೋಯಿ ಅವರು ಯೋಗ ಪಟುಗಳ ದಾಖಲೆಯನ್ನು ಸ್ವೀಕರಿಸಿರುವುದಾಗಿ ತಿಳಿಸಿದರೆಂದು ಯೋಗ ಫೆಡರೇಷನ್ ಆಫ್ ಮೈಸೂರು ಕಾರ್ಯದರ್ಶಿ ಡಾ.ಪಿ.ಎನ್. ಗಣೇಶ್‌ಕುಮಾರ್ ತಿಳಿಸಿದರು.

ಇದಕ್ಕೂ ಮುನ್ನ, ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ, ಕಾರ್ಯಕ್ರಮಕ್ಕೆ ಚಾಲನೆ ನೀಡಿ ಶುಭ ಕೋರಿದರು. ಆಧ್ಯಾತ್ಮಿಕ ಚಿಂತಿ ಸುಚರಿತ ಮಾತಾಜಿ, ಕೃಷ್ಣರಾಜ ಕ್ಷೇತ್ರದ ಶಾಸಕ ಎಸ್.ಎ.ರಾಮದಾಸ್, ಮಾಜಿ ಎಂಎಲ್‌ಸಿ ಸಿದ್ದರಾಜು, ಯೋಗ ಫೆಡರೇಷನ್ ಆಫ್ ಮೈಸೂರು ಅಧ್ಯಕ್ಷ ಡಿ.ಶ್ರೀಹರಿ, ಡಿಡಿಪಿಐ ರಾಮಚಂದ್ರರಾವ್, ಬಿಇಓಗಳಾದ ರಾಮಾರಾಧ್ಯ, ಎನ್.ಎ.ಮಹೇಶ್ವರಿ ಇನ್ನಿತರರು ಉಪಸ್ಥಿತರಿದ್ದರು.

ಪ್ರಧಾನಿ ನರೇಂದ್ರ ಮೋದಿ ಭೇಟಿ ಹಿನ್ನೆಲೆ

ಚಾಮುಂಡಿಬೆಟ್ಟ ರಸ್ತೆಯಲ್ಲಿ ಎಲ್‌ಇಡಿ ದೀಪ ಅಳವಡಿಕೆ



ಮೈಸೂರು, ಜೂ.15(ಆರ್‌ಕೆ)– ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಭೇಟಿ ನೀಡುತ್ತಿರುವ ಹಿನ್ನೆಲೆಯಲ್ಲಿ ಮೈಸೂರಿನ ಚಾಮುಂಡಿಬೆಟ್ಟದ ರಸ್ತೆಗೆ ಎಲ್‌ಇಡಿ ದೀಪ ಅಳವಡಿಸುವ ಕಾಮಗಾರಿ ಇಂದು ಆರಂಭವಾಯಿತು.

ತಾವರೆಕಟ್ಟೆಯಿಂದ ಚಾಮುಂಡಿಬೆಟ್ಟ ಗ್ರಾಮದವರೆಗೆ ಪ್ರತಿ 20 ಮೀಟರ್‌ಗೊಂದರಂತೆ ಆರ್‌ಸಿಸಿ ಕಂಬಕ್ಕೆ ಎಲ್‌ಇಡಿ ಬಲ್ಬ್ ಅಳವಡಿಸಲು ಲೋಕೋಪಯೋಗಿ ಇಲಾಖೆ, ಜಿಲ್ಲಾ ಪಂಚಾಯಿತಿ ಹಾಗೂ ಚೆಸ್ಕಾಂ ಮುಂದಾಗಿದ್ದು, ಇಂದು ಮಧ್ಯಾಹ್ನ ತಾವರೆಕಟ್ಟೆ ಗ್ರಾಮದ ಬಳಿ ಕಾಮಗಾರಿಗೆ ಚಾಲನೆ ನೀಡಲಾಯಿತು.

ಚಾಮುಂಡಿಬೆಟ್ಟದ ರಸ್ತೆ ಬದಿಯಲ್ಲಿ ಬಿಎಸ್‌ಎನ್‌ಎಲ್ ಕೇಬಲ್ ಹಾದು ಹೋಗಿರುವುದಲ್ಲದೆ, ಕೆಲವೆಡೆ ಬಂಡೆ ಕಲ್ಲು ಸಿಗುತ್ತಿರುವ ಕಾರಣ ಗುಂಡಿ ತೆಗೆಯಲು ತೊಂದರೆಯಾಗುತ್ತಿದೆ. ಆದ್ದರಿಂದ ನಾಳೆ (ಜೂ.16) ಬಿಎಸ್‌ಎನ್‌ಎಲ್ ಅಧಿಕಾರಿಗಳನ್ನು ಕರೆಸಿ ಕೇಬಲ್ ಹಾದು ಹೋಗಿರುವ ಗುರುತು ಮಾಡಿಸಿಕೊಂಡು ಕೇಬಲ್‌ಗೆ ಡ್ಯಾಮೇಜ್ ಆಗದಂತೆ ಗುಂಡಿ ತೆಗೆಯುವ ಕೆಲಸ ಮುಂದುವರೆಸಲಾಗುವುದು ಎಂದು ಲೋಕೋಪಯೋಗಿ ಇಲಾಖೆ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಚಿಕ್ಕಣ್ಣ ತಿಳಿಸಿದ್ದಾರೆ.

ತಾವರೆಕಟ್ಟೆಯಿಂದ ಚಾಮುಂಡಿಬೆಟ್ಟದವರೆಗೆ ಒಟ್ಟು 150 ಬೀದಿ ದೀಪದ ಕಂಬಗಳನ್ನು ಅಳವಡಿಸಿ ಎಲ್‌ಇಡಿ ಬಲ್ಬ್ ಹಾಕುವ ಮೂಲಕ ಸಾರ್ವಜನಿಕರು ಸಂಚರಿಸಲು ರಾತ್ರಿ ವೇಳೆ ಅನುಕೂಲ ಕಲ್ಪಿಸಲೆಂದು ಕಾಮಗಾರಿಗೆ ಚಾಲನೆ ನೀಡಲಾಗಿದೆ ಎಂದು ತಿಳಿಸಿದ್ದಾರೆ. ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ರಮೇಶ್, ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಶ್ರೀಧರ್, ಪಿಡಿಓ ರೂಪೇಶ ಕುಮಾರ್, ಸೆಸ್ಕ್ ಅಧಿಕಾರಿಗಳು ಕಾಮಗಾರಿಗೆ ಗುದ್ದಲಿಪೂಜೆ ವೇಳೆ ಉಪಸ್ಥಿತರಿದ್ದರು.

ಲಾಡ್ಜ್‌ಗಳ ಮೇಲೆ ಪೊಲೀಸರ ನಿಗಾ

ಮೈಸೂರು, ಜೂ 15(ಎಂಕೆ)– ವಿಶ್ವ ಯೋಗ ದಿನಾಚರಣೆಗೆ ಮೈಸೂರಿಗೆ ಪ್ರಧಾನ ಮಂತ್ರಿ ಮೋದಿ ಅವರು ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ನಗರದ ದೇವರಾಜ ಪೊಲೀಸ್ ಠಾಣೆಯ ಸಿಬ್ಬಂದಿಗಳು ಠಾಣೆ ವ್ಯಾಪ್ತಿಯ ಲಾಡ್ಜ್‌ಗಳಿಗೆ ತೆರಳಿ ಪರಿಶೀಲನೆ ನಡೆಸಿದ್ದಾರೆ.



ದೇವರಾಜ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ದಿವಾಕರ್ ನೇತೃತ್ವದಲ್ಲಿ ಬುಧವಾರ ರಾತ್ರಿ ನಗರದ ಪ್ರಮುಖ ರಸ್ತೆಗಳಾದ ಅರಸು ರಸ್ತೆ, ಸಯ್ಯಾಜಿರಾವ್ ರಸ್ತೆ ಹಾಗೂ ಸುತ್ತ ಮುತ್ತಲಿನ ಲಾಡ್ಜ್‌ಗಳಿಗೆ ತೆರಳಿ ಲಾಡ್ಜ್‌ನಲ್ಲಿ ತಂಗಿರುವವರ ಮಾಹಿತಿ ಪಡೆದರು. ಅಲ್ಲದೆ ಅನುಮಾನಾಸ್ಪದವಾಗಿ ಕಾಣುವವರಿಗೆ ರೂಂ ನೀಡದಂತೆ ಎಚ್ಚರವಹಿಸುವುದರ ಜೊತೆಗೆ ಕೂಡಲೇ ಠಾಣೆಗೆ ಮಾಹಿತಿ ನೀಡುವಂತೆ ಸೂಚಿಸಿದ್ದಾರೆ. ಈ ವೇಳೆ ಸಬ್ ಇನ್ಸ್‌ಪೆಕ್ಟರ್ ರಾಜು ಹಾಗೂ ಸಿಬ್ಬಂಗಳು ಉಪಸ್ಥಿತರಿದ್ದರು.

ಪೌರಕಾರ್ಮಿಕರ ಖಾಯಂಗೆ ರಾಜ್ಯ ಸರ್ಕಾರಕ್ಕೆ ಸೂಚಿಸುವಂತೆ ಪ್ರಧಾನಿಗೆ ಮನವಿ ಪತ್ರ

ಮೈಸೂರು, ಜೂ.15(ಎಸ್‌ಪಿಎನ್)– ಮೈಸೂರು ಜಿಲ್ಲೆ ಸೇರಿದಂತೆ ರಾಜ್ಯಾದ್ಯಂತ ಸ್ಥಳೀಯ ಸಂಸ್ಥೆಗಳಲ್ಲಿ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿರುವ ಪೌರಕಾರ್ಮಿಕರನ್ನು ಖಾಯಂಗೊಳಿಸಲು ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡುವಂತೆ ಪ್ರಧಾನಿ ನರೇಂದ್ರ ಮೋದಿಯವರೆಗೆ ಮೈಸೂರು ನಗರ ಪಾಲಿಕೆ ಖಾಯಂ ಪೌರಕಾರ್ಮಿಕರು ಹಾಗೂ ಗುತ್ತಿಗೆ ಪೌರಕಾರ್ಮಿಕರ ಮಹಾ ಸಂಘ ಪತ್ರ ಬರೆದು ಒತ್ತಾಯಿಸಿದೆ.

ಕಳೆದ ಲೋಕಸಭಾ ಚುನಾವಣೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು, ಪೌರ ಕಾರ್ಮಿಕರ ಪಾದ ತೊಳೆದು ಗೌರವ ನೀಡಿದ್ದರು. ಆ ಘಟನೆಯನ್ನು ಪೌರಕಾರ್ಮಿಕರು ಎಂದಿಗೂ ಮರೆಯುವುದಿಲ್ಲ. ಆದರೆ, ಮೋದಿ ಅವರು 2ನೇ ಅವಧಿಯನ್ನು ಅಧಿಕಾರಕ್ಕೆ ಬಂದ ಮೇಲೆ ಪೌರಕಾರ್ಮಿಕರಿಗೆ ಯಾವುದೇ ಅನುಕೂಲ ಮಾಡಿಕೊಟ್ಟಿಲ್ಲ ಎಂದು ಸಂಘದ ಅಧ್ಯಕ್ಷ ಎನ್.ಮೋಹನ್ ಕುಮಾರ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಮೈಸೂರು ನಗರ ಪಾಲಿಕೆಯಲ್ಲಿ 1,648 ಪೌರಕಾರ್ಮಿಕರು, 231 ಯುಜಿಡಿ ಸ್ವಚ್ಛತೆಯ ಸಹಾಯಕರು, 175 ಆಟೋ ಚಾಲಕರು ಕೆಲಸ ಮಾಡುತ್ತಿದ್ದಾರೆ. ಇವರಲ್ಲಿ ಕೆಲವು ಮಂದಿಗೆ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಇದ್ದಾಗ ನೇರ ನೇಮಕಾತಿ ಮಾಡಲಾಗಿತ್ತು ಅದರಂತೆ ರಾಜ್ಯಾದ್ಯಂತ 46 ಸಾವಿರ ಮಂದಿಯಲ್ಲಿ 10,500 ಮಂದಿಗೆ ಖಾಯಂಗೊಳಿಸಲಾಗಿತ್ತು. ಉಳಿದ 36 ಸಾವಿರ ಮಂದಿಗೆ ಖಾಯಂಗೊಳಿಸಿಲ್ಲ ಎಂದು ಮಾಹಿತಿ ನೀಡಿದರು.

ಹಾಗಾಗಿ ನರೇಂದ್ರ ಮೋದಿಯವರು ಜೂ.21ರಂದು ರಾಜ್ಯದಲ್ಲಿ ನಡೆಯುವ ವಿವಿಧ ಕಾರ್ಯಕ್ರಮದಲ್ಲಿ ಭಾಗಿಯಾ ಗುವ ಸಂದರ್ಭದಲ್ಲಿ ರಾಜ್ಯದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಖಾಯಂ ಆಗದೆ ಉಳಿದಿರುವ ಪೌರಕಾರ್ಮಿಕರ ನೇಮಕಾತಿಗೆ ನಿರ್ದೇಶನ ನೀಡುವಂತೆ ಒತ್ತಾಯಿಸಿ 5 ಪುಟಗಳ ಪತ್ರ ಬರೆದಿದ್ದಾರೆ.

ಬಂಡಿಪಾಳ್ಯ ಎಪಿಎಂಸಿಯಲ್ಲಿ ಹುಣಸೇಹಣ್ಣು ಕಳವು

ಮೈಸೂರು, ಜೂ.15–ಗೋಡೌನ್‌ನ ರೋಲಿಂಗ್ ಶೆಟರ್ ಬೀಗ ಮುರಿದು 66 ಸಾವಿರ ರೂ. ಮೌಲ್ಯದ ಹುಣಸೇಹಣ್ಣು ಕಳವು ಮಾಡಿರುವ ಘಟನೆ ಮೈಸೂರಿನ ಬಂಡಿಪಾಳ್ಯ ಎಪಿಎಂಸಿಯಲ್ಲಿ ನಡೆದಿದೆ.

ಎಪಿಎಂಸಿಯಲ್ಲಿ ಗೋಡೌನ್ ಹೊಂದಿದ್ದ ಉದಯಗಿರಿ ನಿವಾಸಿ ಅಮೀರ್ ಪಾಷಾ ಅವರು ಜೂ.10ರಂದು ರಾತ್ರಿ ವ್ಯಾಪಾರ ಮುಗಿಸಿ ಗೋಡೌನ್‌ಗೆ ಬೀಗ ಹಾಕಿ ಹೋಗಿದ್ದು, ಮರು ದಿನ ಬೆಳಗ್ಗೆ ಬಂದಾಗ ರೋಲಿಂಗ್ ಶೆಟರ್ ಬೀಗ ಮುರಿದು 105 ಹುಣಿಸೇ ಹಣ್ಣಿನ ಮೂಟೆಗಳನ್ನು ಕಳವು ಮಾಡಲಾಗಿದೆ. ಮೈಸೂರು ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



